ಶ್ರೀಮಟ್ಟೀಕಾಕೃತ್ಪಾದರ ಮೂಲ ವೃಂದಾವನ

(ವಿಮರ್ಶಾತ್ಮಕ ಅಧ್ಯಯನ)



ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯ B.E. (Mech)

ಪ್ರಕಾಶನ

ವಿಶ್ವಮಧ್ವ ಮಹಾಪರಿಷತ್

ಜಯತೀರ್ಥ ವಿದ್ಯಾಪೀಠ, ಬೆಂಗಳೂರು

॥ ಶ್ರೀ ॥

"ಶ್ರೀಮಟ್ಟೀಕಾಕೃತ್ಪಾದರ ಮೂಲ ವೃಂದಾವನ"

(ವಿಮರ್ಶಾತ್ಮಕ ಅಧ್ಯಯನ)

ಲೇಖಕರು

ಶ್ರೀ ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯ B.E.Mech.

ಪ್ರಕಾಶಕರು

ಜಗದ್ಗುರು ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ

ಉತ್ತರಾದಿ ಮಠ

ವಿಶ್ವಮಧ್ವ ಮಹಾಪರಿಷತ್, ಬೆಂಗಳೂರು

Śrīmat Ṭīkākṛtpādara Mūla Vṛndāvana - Research Studies by **Śrī Cikkerūru Mukkundi Śrīkāntāchārya,** Published by Uttaradi Matha, Vishwa Madhwa Maha Parishat, Bangalore.

Price : 25/-

First Edition : 2007

Copies :1000

Copies can be had from :

1. **Jayateertha Vidyapeetha**
   Sri Uttaradi Math, Shankarapuram,
   5th Cross, Basavanagudi,
   Bangalore-4.

Typeset & Printed at :
Vagartha, N.R. Colony, Bangalore-19. vagartha@yahoo.com

ವಿಷಯಸೂಚಿ

ಅನುಗ್ರಹ

ಸ್ವರ್ಗೀಯ ರಂಗರಾವ್ ದೇಶಪಾಂಡೆ ಗುಲ್ಬರ್ಗಾ ಇವರ ಸ್ಮರಣಾರ್ಥ ಈ ಪುಸ್ತಕದ ಮುದ್ರಣಕ್ಕೆ ಸಂಪೂರ್ಣ ಧನ ಸಹಾಯ ಮಾಡಿದ ಪಾಂಡುರಂಗರಾವ್ ದೇಶಪಾಂಡೆಯವರಿಗೆ ಶ್ರೀ ಮೂಲರಾಮ ದಿಗ್ವಿಜಯರಾಮ ವೇದವ್ಯಾಸ ದೇವರು ಜ್ಞಾನಾದಿಗಳನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

– ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಉತ್ತರಾದಿಮಠ

॥ श्री दिग्विजयरामो विजयते ॥

श्रीमज्जगद्गुरु श्रीमध्वाचार्य मूलमहासंस्थानम्

उ त्त रा दि म ठः

5th Cross, Shankarpuram, Basavanagudi BANGALORE - 560 004 Ph : 080 - 2242 6203,
{Web -http://www.uttaradimath.org}

Camp : Bangalore Date : 17-07-2007

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನ
ಶ್ರೀಮದುತ್ತರಾದಿಮಠಾಧೀಶರಾದ
ಶ್ರೀ ಶ್ರೀ ೧೦೦೮ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ

ಅನುಗ್ರಹ ಸಂದೇಶ-1

यत् किञ्चिदन्यथा संस्थमन्यथा ध्यातमञ्जसा ।
ध्यातुर्महादोषकरं किमु सर्वेश्वरो हरिः ॥
तस्माद्वस्तु यथारूपं ज्ञेयं ध्येयं च सर्वदा ।
कारणं पुरुषार्थस्य नान्यथा भवति क्वचित् ॥

अनुव्याख्यानं चतुर्थाध्यायः
प्रतीकाधिकरणम्

ಜಗತ್ತಿನಲ್ಲಿರುವ ಯಾವ ಒಂದು ವಸ್ತುವನ್ನು ತಪ್ಪಾಗಿ ತಿಳಿದರೂ ಅಥವಾ ಧೇನಿಸಿದರೂ ಮಹಾ ಅನರ್ಥವಾಗುವದು. ಕಾರಣ ಎಲ್ಲ ವಸ್ತುಗಳನ್ನು ತಿಳಿಯಲು ಸಾಧ್ಯವಿಲ್ಲದಿದ್ದರೂ ತಿಳಿದ ವಸ್ತುಗಳನ್ನು ಸರಿಯಾಗಿ ತಿಳಿದು

ಕೊಂಡಿರಬೇಕು. ಅದರಲ್ಲೂ ತಿಳಿಯಲೇಬೇಕಾದ ಮುಖ್ಯವಾದ ಸಂಗತಿಗಳನ್ನು ಎಂದಿಗೂ ತಪ್ಪಾಗಿ ತಿಳಿಯಬಾರದು. ಉದಾ–ಗುರುಗಳು, ದೇವತೆಗಳು, ದೇವರು ಇಂತಹ ವಿಷಯಗಳಲ್ಲಿ ತಪ್ಪು ತಿಳಿದರೆ ಮಾತ್ರ ಬಹುದೊಡ್ಡ ಅನರ್ಥವಾಗುವದರಲ್ಲಿ ಸಂದೇಹವಿಲ್ಲ. ಶ್ರೀಮದಾಚಾರ್ಯರು ಅನು ವ್ಯಾಖ್ಯಾನದಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ, ವಿವರವಾಗಿ ನಿರೂಪಿಸಿದ್ದಾರೆ.

ಪ್ರಸ್ತುತ ವಿಷಯ "ಶ್ರೀಮಟ್ಟೀಕಾಕೃತ್ಪಾದರಾದ ಶ್ರೀಮಜ್ಜಯತೀರ್ಥರ ಮೂಲವೃಂದಾವನ"

ಸುಮಾರು 600 ವರ್ಷಗಳಿಂದಲೂ ಶ್ರೀಮಜ್ಜಯತೀರ್ಥರ ಮೂಲ ವೃಂದಾವನವು ಮಳಖೇಡದಲ್ಲಿಯೇ ಇದೆ ಎಂದು ಅವಿಚ್ಛಿನ್ನಪರಂಪರೆಯಿಂದ ಎಲ್ಲ ಜ್ಞಾನಿಗಳೂ ಒಪ್ಪಿ ಅದರಂತೆ ನಡೆದುಕೊಂಡುಬಂದಿದ್ದಾರೆ. ಆದರೆ ಇತ್ತೀಚಿಗೆ ಕೆಲವು ವಿದ್ವಾಂಸರು ಸಂಶೋದನೆಯ ಹೆಸರಿನಲ್ಲಿ ಯಾವದೋ ಹಿನ್ನೆಲೆಯಲ್ಲಿ ಇದನ್ನು ಅಲ್ಲಗಳೆದು ಆನೇಗುಂದಿಯ ನವವೃಂದಾವನದ ಗಡ್ಡೆಯಲ್ಲಿರುವ ಶ್ರೀರಘುವರ್ಯರ ವೃಂದಾವನವನ್ನು ಶ್ರೀಮಜ್ಜಯ ತೀರ್ಥರ ವೃಂದಾವನವೆಂದು ಪ್ರಚಾರಮಾಡುತ್ತಿದ್ದಾರೆ. ಆದರೆ ಪ್ರಾಮಾಣಿಕ ನಾದ, ಸತ್ಯಸಂಶೋಧಕನಾದ, ನಿಷ್ಪಕ್ಷಪಾತದೃಷ್ಟಿಯ ಯಾವ ವ್ಯಕ್ತಿಗಾದರೂ ಶ್ರೀಮಜ್ಜಯತೀರ್ಥರ ಮೂಲವೃಂದಾವನವು ಮಳಖೇಡದಲ್ಲಿಯೇ ರಾರಾಜಿಸುತ್ತಿದೆ ಎಂದು ವೇದ್ಯವಾಗುತ್ತದೆ.

1) ಶ್ರೀವ್ಯಾಸರಾಜರ ಶಿಷ್ಯರಾದ ಕೂಡ್ಲಿ ಅಕ್ಷೋಭ್ಯತೀರ್ಥಮಠದ ಅಧಿ ಪತಿಗಳಾದ ಶ್ರೀನಾರಾಯಣತೀರ್ಥರ ಹಸ್ತಾಕ್ಷರಗಳಲ್ಲಿ ಶ್ರೀಮಜ್ಜಯತೀರ್ಥರ ಮೂಲವೃಂದಾವನವು ಮಳಖೇಡದಲ್ಲಿದೆ ಎಂದು ಸ್ಪಷ್ಟವಾಗಿದೆ. ಇದನ್ನು ಇವತ್ತಿಗೂ ಡಾ|| ಪ್ರಭಂಜನಾಚಾರ್ಯರ ಹಸ್ತಪ್ರತಿಗಳ ಸಂಗ್ರಹದಲ್ಲಿ ಕಾಣಬಹುದು.

2) ಶ್ರೀರಘುನಾಥತೀರ್ಥರ ವಚನದಲ್ಲಿ, 3) ಪೂರ್ಣಭೋಧಗುರು ವಂಶಕಥಾಕಲ್ಪತರುವಿನಲ್ಲಿ, 4) ಗುರುಚರ್ಯಾಗ್ರಂಥದಲ್ಲಿ, 5) ಸತ್ಯಸಂಧ ವಿಜಯದಲ್ಲಿ, 6) ರಘುದಾಂತರ ಜಯತೀರ್ಥವಿಜಯದಲ್ಲಿ, 7) ಗುರ್ಜಾಲಾಚಾರ್ಯರ ಟೀಕಾಕೃತ್ಪಾದಾಷ್ಟಕದಲ್ಲಿ, 8) ವಿಷ್ಣುತೀರ್ಥ ವಿಜಯ , 9) ವಿಜಯೀಂದ್ರೋದಯ, 10) ಜಯತೀರ್ಥ ಗುಣರತ್ನ ಮಾಲಾ , 11) ಗುರುಪರಂಪರಾವೃತ್ತಾಂತ

ಮೊದಲಾದ ಅನೇಕ ಸಂಸ್ಕೃತ ಗ್ರಂಥಗಳಲ್ಲಿ ಮತ್ತು "ಯೋಗಿಗಳರಸನೆ ಮಳಖೇಡ ನಿವಾಸ ಕಾಗಿಣೇತಟವಾಸ ವಿಜಯವಿಠ್ಠಲದಾಸ" ಮೊದಲಾದ ವಿಜಯದಾಸಾರ್ಯರೆ ಮೊದಲಾದ ದಾಸವರೇಣ್ಯರು ರಚಿಸಿರುವ ಅನೇಕಾನೇಕ ಕೃತಿಗಳಲ್ಲಿ ಸ್ಪಷ್ಟವಾಗಿ ಶ್ರೀಮಟ್ಟೀಕಾಕೃತ್ಪಾದರನ್ನು ಮಳಖೇಡನಿವಾಸಿಗಳೆಂದು ವರ್ಣಿಸಿದ್ದಾರೆ.

ಇವೆಲ್ಲ ವಚನಗಳು ಮೃತ್ತಿಕಾ ವೃಂದಾವನವನ್ನು ವರ್ಣಿಸಲು ಹೊರಟಿವೆ ಎಂದು ಹೇಳುವುದು ದೊಡ್ಡ ಸಾಹಸವಾಗುತ್ತದೆ. ಮೃತ್ತಿಕಾವೃಂದಾವನವನ್ನು ಸ್ಥಾಪಿಸುವ ಕ್ರಮ ಇತ್ತೀಚಿನದು. ಅಷ್ಟೇ ಅಲ್ಲದೆ ಇಷ್ಟೆಲ್ಲ ಜ್ಞಾನಿಗಳಾದ ಯತಿಗಳು, ದಾಸರು, ಪಂಡಿತರು, ಪಾಮರರು ಮೂಲವೃಂದಾವನದ ಸ್ಥಳವನ್ನು ಮರೆತು ಮೃತ್ತಿಕಾವೃಂದಾವನವನ್ನೇ ವರ್ಣಿಸಿದ್ದಾರೆ ಮತ್ತು ಸೇವಿಸಿದ್ದಾರೆ ಎಂದರೆ ಯಾರೂ ನಂಬುವದಕ್ಕೆ ಸಾಧ್ಯವಿಲ್ಲ.

ಇದಲ್ಲದೆ ಮೈಸೂರು ಹಾಗೂ ಮುಂಬಯಿಯ ಗೆಜೆಟ್‌ಗಳಲ್ಲಿ ಟೀಕಾಕೃತ್ಪಾದರ ವೃಂದಾವನವು ಮಳಖೇಡದಲ್ಲಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಎಲ್ಲ ಮಠಗಳ ಪ್ರಾಚೀನ ಪಂಚಾಂಗಗಳಲ್ಲಿ ಶ್ರೀಜಯತೀರ್ಥರ ಪುಣ್ಯತಿಥಿ, ಮಳಖೇಡ ಎಂದು ಮುದ್ರಣ ಮಾಡಿದ್ದನ್ನು ಗಮನಿಸಬಹುದು. ಇತ್ತೀಚಿಗೆ ನವವೃಂದಾವನಗಡ್ಡೆಯಲ್ಲಿ ಶ್ರೀಜಯತೀರ್ಥರ ವೃಂದಾವನವಿದೆ ಎಂಬುದಾಗಿ ವಾದಿಸುವ ವಿದ್ವಾಂಸರೂ ಕೂಡ ಮೊದಲು ತಾವೇ ಅನೇಕ ಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿ ಶ್ರೀಮಜ್ಜಯತೀರ್ಥರ ವೃಂದಾವನವು ಮಳಖೇಡದಲ್ಲಿದೆ ಎಂದು ಬರೆದಿದ್ದಾರೆ. ಇವೆಲ್ಲವುಗಳನ್ನು ಪರಿಶೀಲನೆ ಮಾಡಿದರೆ ಶ್ರೀಮಟ್ಟೀಕಾಕೃತ್ಪಾದರ ಮೂಲವೃಂದಾವನವು ಮಳಖೇಡದಲ್ಲಿಯೇ ಇದೆ ಎನ್ನುವದು ಸೂರ್ಯನಷ್ಟು ಸ್ಪಷ್ಟ

ಇನ್ನು ತೀರ್ಥಪ್ರಬಂಧದಲ್ಲಿ ಶ್ರೀವಾದಿರಾಜಶ್ರೀಚರಣರು ಗಜಗಹ್ವರವನ್ನು (ಆನೆಗುಂದಿ) ವರ್ಣಿಸುವಾಗ

ರಾಜಧಾನೀ ಜಯತಿ ಸಾ ಗಜಗಹ್ವರಸಂಜ್ಞಿತಾ ।
ಯತ್ರ ಭಾಂತಿ ಗಜಾ ಮಾಧ್ವರಾದ್ಧಾಂತಧರಣೀಧರಾಃ ॥

ಎಂದು ಅಲ್ಲಿ ನೆಲೆಸಿರುವ ಪದ್ಮನಾಭತೀರ್ಥರೇ ಮೊದಲಾದ ಜ್ಞಾನಿಗಳನ್ನು ವರ್ಣಿಸಿದ್ದಾರೆ. ನಂತರದ ಶ್ಲೋಕದಲ್ಲಿ "ಮಾಧ್ವಗ್ರಂಥಾನ್.....ಜಯಮುನಿ

ರಸಕೃದ್ ವೀಕ್ಷ್ಯ ರೇಮೇ ಕೃತಾರ್ಥಃ " ಎಂಬುದಾಗಿ ಶ್ರೀಜಯತೀರ್ಥರ ವರ್ಣನೆಯು ಕಂಡುಬರುತ್ತದೆ. ಈ ಶ್ಲೋಕದ ವ್ಯಾಖ್ಯಾನದಲ್ಲಿ " ಗಜಗಹ್ವರೇ ಜಯತೀರ್ಥಂ ವರ್ಣಯತಿ " ಎಂದು ಶ್ರೀನಾರಾಯಣಾಚಾರ್ಯರು ಅವತರಣಿಕೆಯನ್ನು ನೀಡಿದ್ದಾರೆಂದು ತಿಳಿದು ಆನೆಗುಂದಿಯಲ್ಲಿಯೇ ಶ್ರೀಜಯತೀರ್ಥರ ಮೂಲವೃಂದಾವನವಿದೆಯಂದು ಕೆಲವರು ವಾದಿಸುತ್ತಾರೆ. ಕೆಲವು ಹಸ್ತಪ್ರತಿಗಳಲ್ಲಿ "ಗಜಗಹ್ವರೇ ಜಯತೀರ್ಥಂ ವರ್ಣಯತಿ " ಎಂದು ಇರದೇ "ಜಯತೀರ್ಥಂ ವರ್ಣಯತಿ, ಜಯತೀರ್ಥಾಚಾರ್ಯಂ ವರ್ಣ-ಯತಿ" ಎಂದು ಮಾತ್ರ ಅವತರಣಿಕೆ ಇದ್ದು ಮುಂದೆ "ಯತ್ರ = ಗಜಗಹ್ವರೇ, ಜಯಮುನಿಃ = ಜಯತೀರ್ಥಾಖ್ಯೋಮುನಿಃ, ಮಾಧ್ವಗ್ರಂಥಾನ್..." ಇತ್ಯಾದಿ ಯಾಗಿ ನಾರಾಯಣಾಚಾರ್ಯರ ವ್ಯಾಖ್ಯಾನವು ಕಂಡುಬರುತ್ತದೆ. ಈ ರೀತಿಯ ವಾಕ್ಯಗಳನ್ನು ಗಮನಿಸಿದಾಗ ಸಹಜವಾಗಿ ಯಾರಿಗಾದರೂ ತಿಳಿದು ಬರುವ ವಿಷಯ ಹೀಗಿದೆ -


ಮೊದಲು "ರಾಜಧಾನೀ ಜಯತಿ ಸಾ ಗಜಗಹ್ವರಸಂಜ್ಞಿತಾ । ಯತ್ರ ಭಾಂತಿ ಗಜಾ ಮಾಧ್ವರಾದ್ಧಾಂತಧರಣೀಧರಾಃ" ಎಂಬ ಶ್ಲೋಕದಲ್ಲಿ ಆನೆಗೊಂದಿಯ ವರ್ಣನೆಯನ್ನು ಮಾಡಿದ್ದಾರೆ. ಮುಂದೆ 'ಯತ್ರ ಗಜಗಹ್ವರೇ' ಎಂಬುದಾಗಿ ಯಾವ ಆನೆಗೊಂದಿಯಲ್ಲಿ ಶ್ರೀಮಜ್ಜಯತೀರ್ಥರು ತಮ್ಮ ಟೀಕಾವಾಕ್ಯಗಳನ್ನೂ ಹಾಗೂ ಶ್ರೀಮದಾಚಾರ್ಯರ ವಾಕ್ಯಗಳನ್ನು ಮೇಲನ ಮಾಡಿ ಸಂತೋಷಪಟ್ಟರು ಅರ್ಥಾತ್ ಪಾಠಪ್ರವಚನಗಳನ್ನು ಯಾವ ಕ್ಷೇತ್ರದಲ್ಲಿ ಮಾಡಿದರೋ ಅಂತಹ ಆನೇಗೊಂದಿಯು ಜಯತಿ ಎಂಬುದಾಗಿ ಹಿಂದಿನ ಶ್ಲೋಕದಲ್ಲಿ ಅನ್ವಯವಾಗುತ್ತದೆ. ಇಲ್ಲಿ ವೃಂದಾವನ ಇರುವ ವಿಚಾರವೇ ಪ್ರಸಕ್ತವಾಗಿಲ್ಲ.

ಅಷ್ಟೆ ಅಲ್ಲದೆ ಆನೆಗೊಂದಿಯಲ್ಲಿ ಜಯತೀರ್ಥರನ್ನು ವರ್ಣನೆ ಮಾಡಿದ ಮಾತ್ರಕ್ಕೆ ಮೂಲವೃಂದಾವನವು ಅಲ್ಲಿಯೇ ಇದೆಯೆಂದು ಸಿದ್ಧವಾಗಲಾರದು. ಪ್ರಾಚೀನ ಟೀಕಾಕಾರರಾದ ಶ್ರೀ ಪದ್ಮನಾಭತೀರ್ಥರನ್ನು ಕಂಡಾಗ ' ನ ತತ್ತ್ವ ಮಾರ್ಗೇ ಗಮನಂ ವಿನಾ ಯದುಪಜೀವನಮ್" "ಕೃಪಾಲವಃ ಸ್ಯಾನ್ಮಯಿ ನಿತ್ಯಮೇಷಾಮ್" 'ಭವತಾದ್ವಿಭೂತ್ಯೈ' ಇತ್ಯಾದಿಯಾಗಿ ಅಂತ್ಯಂತ ಭಕ್ತಿಯಿಂದ ಶ್ರೀಪದ್ಮನಾಭತೀರ್ಥರನ್ನು ಕೊಂಡಾಡಿದ ನವೀನ ಟೀಕಾಕಾರರಾದ

ಶ್ರೀಮಜ್ಜಯತೀರ್ಥರ ಸ್ಮರಣೆಯಾಗಿದೆ. ಟೀಕಾಚಾರ್ಯರ ಪ್ರಶಿಷ್ಯರಾದ ಶ್ರೀಕವೀಂದ್ರರೇ ಮೊದಲಾದವರನ್ನು ಕಂಡಾಗ ಆಚಂದ್ರಾರ್ಕವಾಗಿ ಮಾಧ್ವ ಸಮಾಜದ ಯಾವ ಗ್ರಂಥಕಾರರು ವ್ಯಾಖ್ಯಾನಕಾರರೂ ಮರೆಯಲು ಸಾಧ್ಯವಾಗದ ನ್ಯಾಯಾಮೃತಾದಿಗ್ರಂಥಗಳನ್ನು ರಚಿಸಲು ವ್ಯಾಸರಾಜರಿಗೆ ಮೂಲಸ್ರೋತಸ್ಸಾದ ಶ್ರೀ ಕವೀಂದ್ರರ ವಾದರತ್ನಾವಲೀಗ್ರಂಥಕ್ಕೂ ಸ್ಫೂರ್ತಿಯ ಸೆಲೆಯಾದ ಶ್ರೀಮಜ್ಜಯತೀರ್ಥರ ಸ್ಮರಣೆಯಾಗಿದೆ. ಸ್ವಯಂ ತಾವು (ಶ್ರೀವಾದಿರಾಜರು) "ಗುರ್ವರ್ಥದೀಪಿಕಾ" ಎಂಬ ಗ್ರಂಥವನ್ನು ಯಾರ ಟೀಕೆಗೆ ವ್ಯಾಖ್ಯಾನರೂಪವಾಗಿ ರಚಿಸಿ, ಯಾರ ಹೃದಯವನ್ನು ತಾವೂ ತಿಳಿದು ಜಗತ್ತಿಗೂ ತಿಳಿಸಿರುವರೋ ಅಂತಹ ಮಹಾನುಭಾವರ ಸ್ಮರಣೆ ಉತ್ಕಟವಾಗಿ ತಡೆಯಲಾಗದೆ ಶ್ರೀಮಟ್ಟೀಕಾಕೃತ್ಪಾದರ ದಿವ್ಯ ವರ್ಣನೆಯನ್ನು ಶ್ರೀವಾದಿರಾಜ ತೀರ್ಥರು ಮಾಡಿದ್ದಾರೆ.

ಮಳಖೇಡದ ಸುತ್ತ ಮುತ್ತ ಸಂಚರಿಸಿ ಅಲ್ಲಿರುವ ತೀರ್ಥ ಕ್ಷೇತ್ರಗಳನ್ನು ವರ್ಣಿಸಿ ಮಳಖೇಡದಲ್ಲಿರುವ ಶ್ರೀಮಜ್ಜಯತೀರ್ಥರನ್ನು ವರ್ಣಿಸುವುದಕ್ಕೆ ಅವಕಾಶವಿದ್ದಿದ್ದರೆ ಆ ಪ್ರಸಂಗದಲ್ಲಿಯೇ ವರ್ಣಿಸುತ್ತಿದ್ದರು. ಆದರೆ ಗುಲಬರ್ಗಾ ಸೇಡಂ ಪ್ರಾಂತದ ಕ್ಷೇತ್ರಗಳ ಸಂಚಾರಮಾಡಿ ವರ್ಣನೆ ಮಾಡುವ ಪ್ರಸಂಗ ಬರುವದಿಲ್ಲ ಎಂದು ಮೊದಲೇ ತಿಳಿದರು ಶ್ರೀವಾದಿರಾಜರು. ಹಾಗಾದರೆ ಶ್ರೀಜಯತೀರ್ಥರ ವರ್ಣನೆಯನ್ನು ಬಿಡುವುದು ಸಾಧ್ಯವಿಲ್ಲ. "ಚೇಟೀಭವತ್ ಸ್ವರ್ಧುನಿ" ಶ್ರೀಟೀಕಾಕೃತ್ಪಾದರ ಧಾಟಿಗೆ ಗಂಗಾದೇವಿಯೇ ದಾಸಿಯಾಗುವಳು ಎಂದು ಬಣ್ಣಿಸಿದ್ದಾರೆ. ಅಂತಹ ಮಹಾತೀರ್ಥವನ್ನು ರಚಿಸಿದ ಶ್ರೀಮಜ್ಜಯತೀರ್ಥರನ್ನು ವರ್ಣಿಸದೇ ತೀರ್ಥಪ್ರಬಂಧ ಪರಿಪೂರ್ಣವಾಗುವುದಿಲ್ಲ. ಪ್ರಾಚೀನ ಟೀಕಾಕಾರರ ವರ್ಣನೆಯ ಸಂದರ್ಭ ಹಾಗೂ ವಾದರತ್ನಾವಲೀಕಾರರಾದ ಶ್ರೀ ಕವೀಂದ್ರರ ಹಾಗೂ ನ್ಯಾಯಾಮೃತಾದಿ ಗ್ರಂಥಗಳಿಗೆ ಕಾರಣರಾದ ಶ್ರೀ ವ್ಯಾಸರಾಜರ ವರ್ಣನೆಯ ಸಂದರ್ಭಗಳನ್ನು ಬಿಟ್ಟು ಬೇರೆ ಸಂದರ್ಭಗಳಲ್ಲಿ ವರ್ಣಿಸುವದು ಸೂಕ್ತವಲ್ಲವೆಂದು ತಿಳಿದು ಉಕ್ಕಿ ಬಂದ ಭಾವನೆಯನ್ನು ಹತ್ತಿಕ್ಕದೆ ಇದೇ ಸಂದರ್ಭದಲ್ಲಿ ಶ್ರೀಮಜ್ಜಯತೀರ್ಥರನ್ನು ಸ್ತುತಿಸಿದ್ದಾರೆ ಎಂದು ತಿಳಿಯುವುದೇ ಎಲ್ಲ ಪ್ರಮಾಣಗಳಿಗೆ ಗೌರವ ನೀಡುವ ಕಾರ್ಯವಾಗುವದು.

ಈ ಸತ್ಯವನ್ನು ಅತ್ಯಂತನಿಷ್ಠೆಯಿಂದ ಸಂಶೋಧಕನಲ್ಲಿರಬೇಕಾದ ಎಲ್ಲ ಗುಣಗಳನ್ನೂ ಅಳವಡಿಸಿಕೊಂಡು ಸಂಶೋಧಿಸಿದ್ದಾರೆ ನಮ್ಮ ಪ್ರಿಯಶಿಷ್ಯರಾದ ಶ್ರೀಮುಕ್ಕುಂದಿ ಶ್ರೀಕಾಂತಾಚಾರ್ಯರು. ತಾವು ಸ್ವತಃ ಅನೇಕ ಪ್ರಮಾಣಗಳನ್ನು ಹುಡುಕಿ ಈ 'ಶ್ರೀಮಟ್ಟೀಕಾಕೃತ್ಪಾದರ ಮೂಲವೃಂದಾವನ' ಎಂಬ ಕೃತಿಯನ್ನು ರಚಿಸಿದ್ದಾರೆ. ಸತ್ಯವನ್ನು ಜಗತ್ತಿನ ಮುಂದಿಟ್ಟು ತಪ್ಪು ತಿಳಿದು ಅನರ್ಥ ಹೊಂದುವದನ್ನು ತಪ್ಪಿಸಿದ್ದಾರೆ. ಶ್ರೀ ಟೀಕಾರಾಯರ ಈ ಸೇವೆಯನ್ನು ನಿರ್ವ್ಯಾಜವಾಗಿ ಮಾಡಿದ ಶ್ರೀಕಾಂತಾಚಾರ್ಯರಿಗೆ ನಮ್ಮ ಗುರುಗಳ ಅಂತರ್ಯಾಮಿಯಾದ ಟೀಕಾಚಾರ್ಯಾಂತರ್ಯಾಮಿಯಾದ ಭಾರತೀರಮಣ ಮುಖ್ಯಪ್ರಾಣಾಂತರ್ಯಾಮಿ ಶ್ರೀಮೂಲರಾಮದಿಗ್ವಿಜಯರಾಮ ವೇದವ್ಯಾಸ ದೇವರು ನಿರಂತರವಾಗಿ ಟೀಕಾಚಾರ್ಯರ, ಶ್ರೀಮದಾಚಾರ್ಯರ ಗ್ರಂಥ ಗಳನ್ನು ಅಧ್ಯಯನಮಾಡಿ ಪಾಠ ಪ್ರವಚನಮಾಡುವ ಶಕ್ತಿಯನ್ನು ಕೊಟ್ಟು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.



ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಶ್ರೀ ಉತ್ತರಾದಿಮಠ

H.H. Sri Vishvesha Tirtha Swamiji
Sri Pejavara Adhokshaja Matha
Jagadguru Sri Madhwacharya Maha Samsthana
Udupi - 576 101, Karnataka
Phone : 0820-2524198, 2526598

श्री श्री विश्वेशतीर्थश्रीपादाः
श्री पेजावराधोक्षज मठः
जगद्गुरु श्रीमध्वाचार्यमहासंस्थानम्
उडुपि - ५७६ १०१, कर्णाटक

ಅನುಗ್ರಹ ಸಂದೇಶ-2

ಸುಧಾದಿಗ್ರಂಥಕರ್ತರೂ ನಮಗೆಲ್ಲರಿಗೂ ಮಹಾಗುರುಗಳೂ ದಾರ್ಶನಿಕ ಕ್ಷೇತ್ರದಲ್ಲಿಯೇ ಶಕಪುರುಷರೆನಿಸಿದ ಶ್ರೀ ಜಯತೀರ್ಥರ ವೃಂದಾವನದ ಸ್ಥಳದ ವಿಷಯದಲ್ಲಿ ಇತ್ತೀಚೆಗೆ ಪ್ರಾರಂಭವಾದ ವಿವಾದದ ಹಿನ್ನೆಲೆಯಲ್ಲಿ ಚಿಕ್ಕೇರೂರು ಶ್ರೀಕಾಂತಾಚಾರ್ಯರು ಹೆಚ್ಚಿನ ಸಂಶೋಧನೆಯನ್ನು ನಡೆಸಿ ಮಳಖೇಡದಲ್ಲಿಯೇ ಶ್ರೀಜಯತೀರ್ಥರ ವೃಂದಾವನವಿದೆ ಎಂದು ಅನೇಕ ಆಧಾರಗಳಿಂದ ಸಮರ್ಥಿಸುವ ಈ ಕೃತಿಯನ್ನು ಬರೆದಿದ್ದಾರೆ. ಟೀಕಾಚಾರ್ಯರ ವೃಂದಾವನವು ಮಳಖೇಡದಲ್ಲಿಯೇ ಇದೆ ಎಂಬುದು ಶತಮಾನಗಳಿಂದಲೂ ಎಲ್ಲರೂ ತಿಳಿದುಕೊಂಡು, ಅದರಂತೆ ನಡೆದುಕೊಂಡು ಬಂದಿದ್ದಾರೆ. ಇಂತಹ ಶ್ರದ್ಧಾಕ್ಷೇತ್ರಗಳ ಬಗ್ಗೆ ಅನವಶ್ಯವಾಗಿ ವಿವಾದವನ್ನೆಬ್ಬಿಸುವುದು ಸೂಕ್ತವಲ್ಲ. ತಿರುಪತಿ ಶ್ರೀನಿವಾಸ, ಉಡುಪಿ ಕೃಷ್ಣನ, ರಾಮಜನ್ಮಭೂಮಿಗಳ ಬಗ್ಗೆಯೂ ಇಂತಹ ವಿವಾದಗಳನ್ನು ಹಲವರು ಎಬ್ಬಿಸಿದ್ದಾರೆ. ಡಾ|| ಬಿ.ಎನ್.ಕೆ. ಶರ್ಮಾ ಮತ್ತು ಟಿ.ಕೆ. ವೇಣುಗೋಪಾಲದಾಸರ ಬಗ್ಗೆ ನನಗೆ ವಿಶೇಷ ಗೌರವ ಅಭಿಮಾನಗಳಿವೆ. ಆದರೆ ಪರಂಪರೆಯಿಂದ ಪ್ರಚಲಿತವಾದ ಇಂತಹ ವಿಷಯಗಳ ಬಗ್ಗೆ ನಿರವಕಾಶ ಪುರಾವೆಗಳಿಲ್ಲದೆ ವಿವಾದಗಳನ್ನು ನಿರ್ಮಿಸುವುದರಿಂದ ಸಮಾಜದಲ್ಲಿ ಅನಾವಶ್ಯಕ ಗೊಂದಲಗಳಿಗೆ ಅವಕಾಶವಾಗುವುದರಿಂದ ಇಂತಹ ವಿವಾದಗಳನ್ನು ನಾವು ಬೆಂಬಲಿಸುವುದಿಲ್ಲ.

ಪ್ರಚಲಿತ ಪರಂಪರೆಗೆ ಅನುಗುಣವಾಗಿ ಮಳಖೇಡದಲ್ಲಿಯೇ ಶ್ರೀಜಯತೀರ್ಥರ ವೃಂದಾವನ ಇದೆಯೆಂಬ ಶ್ರೀಕಾಂತಾಚಾರ್ಯರ ಈ ಸಂಶೋಧನಾತ್ಮಕ ಕೃತಿಯನ್ನು ನಾವು ಸ್ವಾಗತಿಸುತ್ತೇವೆ. ಶ್ರೀ ಕಾಂತಾಚಾರ್ಯರಿಗೆ ನಮ್ಮ ಅಭಿನಂದನೆಗಳು.

ಇತಿ ನಾರಾಯಣ ಸ್ಮರಣೆಗಳೊಂದಿಗೆ

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು

ಪರಮಪೂಜ್ಯ
ಶ್ರೀ ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದಂಗಳವರು

ಅನುಗ್ರಹ ಸಂದೇಶ-3


योऽन्यथासन्तमात्मानमन्यथा प्रतिपद्यते ।
किं तेन न कृतं पापं चोरेणात्मापहारिणा ॥

ಎಂಬ ಪ್ರಮಾಣವಚನದಂತೆ ಯಾವುದೇ ವಿಷಯವನ್ನು ವಿಮರ್ಶೆ ಮಾಡಿ ಸರಿಯಾಗಿ ತಿಳಿಯಬೇಕು. 'ಪ್ರತ್ಯಕ್ಷ ಕಂಡದ್ದನ್ನೂ ಪರಾಂಬರಿಸಿ ನೋಡು' ಎನ್ನುತ್ತಾರೆ ಹಿರಿಯರು. ಅತೀಂದ್ರಿಯ ಹಾಗೂ ಅತೀತ ವಿಷಯಗಳ ಬಗ್ಗೆಯಂತೂ ಯಾವುದೇ ಒಂದು ತೀರ್ಮಾನಕ್ಕೆ ಬರುವಾಗ ಬಹಳ ಎಚ್ಚರವಹಿಸಬೇಕು. ಪ್ರಾಚೀನರ, ಅಪರೋಕ್ಷಜ್ಞಾನಿಗಳ ವಚನವನ್ನು ಅವಲಂಬಿಸುವಾಗಲೂ ಎಚ್ಚರ ಅಗತ್ಯ. ಅವುಗಳು ನಾನಾ ಬಗೆಯಾಗಿ ಕಂಡು ಬಂದಾಗ ಆಪಾತತಃ ವಿರುದ್ಧಾರ್ಥ ಪ್ರತಿಪಾದಕಳಾಗಿವಿಯೋ ಏನೋ ? ಎಂಬ ಸಂದೇಹ ಬಂದಾಗ ಉಪಕ್ರಮಾದಿ ಲಿಂಗಗಳಿಂದ ಪ್ರಾಬಲ್ಯ ದೌರ್ಬಲ್ಯ ವಿಚಾರಮಾಡಿ ಕೆಲವು ವಾಕ್ಯಗಳಿಗೆ ಅರ್ಥಾಂತರ ಮಾಡಬೇಕಾಗುವುದು. **न स्नेहान्न च विस्नेहात् युक्त्याकृष्टेन केवलं,** ಎಂಬಂತೆ ನಿಷ್ಪಕ್ಷಪಾತ ದೃಷ್ಟಿಯಿಂದ ವಚನಗಳ ವಿಮರ್ಶೆ ನಡೆಯಬೇಕು. ಆ ವಿಮರ್ಶೆಯನ್ನು **एकस्य प्रतिभातं तु** ಎಂಬ ನ್ಯಾಯದಂತೆ ಹತ್ತಾರು ಜನ ಅವಲೋಕಿಸಬೇಕು. ಅವಲೋಕನ ಮಾಡುವವರೂ ಕೂಡ **न चात्रातीव कर्तव्यं दोषदृष्टिपरं मनः** ಎಂಬ ಮಾತನ್ನು ಗಮನದಲ್ಲಿಡಬೇಕು.

ಪ್ರಸ್ತುತ ಪ್ರಬಂಧದಲ್ಲಿ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶ್ರೀಕಾಂತಾಚಾರ್ಯ ಮುಕ್ಕುಂದಿಯವರು ಶ್ರೀಮಜ್ಜಯತೀರ್ಥರ ಮೂಲ

ವೃಂದಾವನದ ವಿಷಯದಲ್ಲಿ ಹಿಂದಿನಿಂದ ಬಂದ ಎಲ್ಲ ವಾದಗಳನ್ನು ಸಂಗ್ರಹಿಸಿ ಅವುಗಳಲ್ಲಿರುವ ಹೇಯೋಪಾದೇಯತೆಗಳನ್ನು ವಿಮರ್ಶಿಸಿದ್ದಾರೆ. **वस्तुति विकल्पो न युज्यते** ಎಂಬಂತೆ ಮೂಲ ವೃಂದಾವನ ಒಂದೇ ಆಗಿರಬೇಕು ಎರಡಾಗಿರಲು ಸಾಧ್ಯವಿಲ್ಲ. ಹೀಗಿರುವಾಗ ಉಪಾಸನೆ ಆರಾಧನೆಗಳಲ್ಲಿ ಕಂಡುಬರುವ ವೈವಿಧ್ಯವೂ ದೂರವಾಗಿ ಶ್ರೀಮಜ್ಜಯತೀರ್ಥರ ಭಕ್ತರಲ್ಲಿ ಐಕಮತ್ಯ ಬರಲಿ ಎಂಬ ಕಳಕಳಿಯಿಂದ ಈ ಪ್ರಬಂಧವನ್ನು ಮಂಡಿಸಿದ್ದಾರೆ. ಸಜ್ಜನರೆಲ್ಲರೂ ಇದರ ಉಪಯೋಗವನ್ನು ಪಡೆದುಕೊಳ್ಳಲಿ ಹಾಗೂ ಶ್ರೀಕಾಂತಾಚಾರ್ಯರಿಗೂ ಶ್ರೀಹರಿವಾಯುಗುರುಗಳು ಶ್ರೇಯಸ್ಸನ್ನುಂಟು ಮಾಡಲೆಂದು ನಾವು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು



श्री सुविद्येन्द्रतीर्थाः

ವಿದ್ವಾನ್ ಬಾಳಗಾರು ಶ್ರೀನಿವಾಸಾಚಾರ್ಯ
ಹನುಮಂತನಗರ, ಬೆಂಗಳೂರು.

॥ ಶ್ರೀಗುರುರಾಜೋ ವಿಜಯತೇ ॥

"ಅಪ್ಯಲ್ಪೋऽಸೌ ಸಹ್ಯುಪೇಕ್ಷಾಂಬಭೂವೇ" ಎಂಬ ನಿಯಮಾನುಸಾರ ತಮ್ಮ ಈ ಕಿರುಹೊತ್ತಿಗೆಯನ್ನು ಶ್ರೀ ಚಿಕ್ಕೇರೂರು ಶ್ರೀಕಾಂತಾಚಾರ್ಯ ಮುಕ್ಕುಂದಿ ಇವರು ಪ್ರಕಟಿಸುತ್ತಿದ್ದಾರೆ. ಇದಕ್ಕೆ ನಮ್ಮ ಅಭಿಪ್ರಾಯದ ಲೇಖನವನ್ನು ಬಯಸಿ ಬಹಳ ಸಲ ದೂರದಿಂದ ನಮ್ಮ ಮನೆಗೆ ಬರುವ ಶ್ರಮವಹಿಸಿದ್ದಾರೆ.

ನಾನೀಗ ಈ ಲೇಖಕರ ಬಗ್ಗೆ ಹೊಗಳಿ ಎರಡು ಮಾತು ಬರೆದು ಕೈತೊಳೆದುಕೊಳ್ಳುವ ಕೆಲಸಮಾಡಿದರೆ, ಅದು ಅಭಿಪ್ರಾಯವ್ಯಕ್ತಪಡಿಸುವ ವಿಮರ್ಶಕನ ಜವಾಬ್ದಾರಿಗೆ ಅನುಚಿತವರ್ತನೆಯಾಗುತ್ತದೆ. ಕೃತಿಯ ಅಂತಸ್ಸತ್ವಕ್ಕೆ ಸ್ಪಂದಿಸಿ ನುಡಿಗಳಾಡದ ಅಭಿಪ್ರಾಯಕ್ಕೆ ಬೆಲೆ ಏನು ? ತತ್ರಾಪಿ, ಸಮಾಜದಲ್ಲಿ ವಿವಾದಗ್ರಸ್ತವಾದ ಸಂಗತಿಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವಾಗ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಕೆಲಸ ಖಂಡಿತ ಸಲ್ಲದು. ಸ್ವಯಂ ಸತ್ಯವೇನೆಂದು ಗೊತ್ತಿದ್ದರೂ, ಒಂದುವರ್ಗಕ್ಕೆ ಅಪ್ರಿಯವಾದೀತೆಂದೆಣಿಸಿ ಮೌನ ವಿಮರ್ಶೆಯ ಹಾರಿಕೆಯ ಮಾತುಗಳಾಡಿದಲ್ಲಿ, ಆತ್ಮವಂಚನೆಯಾಗುತ್ತದೆ. ಲೋಕಾಯತರ ರೀತಿಯಾಗುತ್ತದೆ. ವಿವಾದಿತ ವಿಷಯದಲ್ಲಿ ತನಗೆ ತಿಳಿದಿಲ್ಲದಿದ್ದರೆ ಗೊತ್ತಿಲ್ಲವೆಂದೇ ಅಭಿಪ್ರಾಯ ನೀಡಬೇಕು. ಇಲ್ಲವೇ, ತಮ್ಮ ಸ್ಪಷ್ಟ ನಿಖರ ನಿಲುವನ್ನು ವ್ಯಕ್ತಪಡಿಸಬೇಕು. ಇವೆರಡೂ ಗುರಿ ಇಲ್ಲದ ಮಾತು ಸದಸದ್ವಿಲಕ್ಷಣ ವಾದಿಯ ವ್ಯವಹಾರವಾಗುವುದಷ್ಟೆ

ಈ ನಿಟ್ಟಿನಲ್ಲಿ, ಪ್ರಕೃತ "ಶ್ರೀಜಯತೀರ್ಥರ ಮೂಲ ಬೃಂದಾವನ" ಎಂಬ ಸಂಗತಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವವರ ಜವಾಬ್ದಾರಿ ಗುರುತರವಾಗಿದೆ. ಇದಕ್ಕೆ ಅನುಗುಣವಾಗಿ ಕೆಲವು ಸಂಗತಿಗಳನ್ನೀಗ ಪ್ರಸ್ತಾಪಿಸಬೇಕಾಗಿದೆ.

"ಶ್ರೀ ಜಯತೀರ್ಥರ ಮೂಲ ಬೃಂದಾವನ ಆನೆಗೊಂದಿಯಲ್ಲಿದೆ. ಮಳಖೇಡದಲ್ಲಿ ಇಲ್ಲ. ನವವೃಂದಾವನಗಳಲ್ಲಿ ಶ್ರೀರಘುವರ್ಯರದ್ದೆಂದು ಪ್ರಸಿದ್ಧವಾದ ಬೃಂದಾವನವೇ ಶ್ರೀ ಜಯತೀರ್ಥರ ಮೂಲಬೃಂದಾವನ. ರಘುವರ್ಯರ ಬೃಂದಾವನ ಆನೆಗೊಂದಿಯ ನಡುಗಡ್ಡೆಯಲ್ಲಿ ಇಲ್ಲ" ಎಂಬ ಆಧುನಿಕ ವಾದವನ್ನು ಸಾಕಷ್ಟು ಚರ್ಚಿಸಿ ಈ ಹೊತ್ತಿಗೆಯಲ್ಲಿ ಹಲವು ಸವಾಲೊಡ್ಡಲಾಗಿದೆ.

ಇದಕ್ಕೆ ಸಂಬಂಧಿಸಿ ಗಮನಿಸಬೇಕಾದ ಮುಖ್ಯಸಂಗತಿ ಏನೆಂದರೆ - ಎರಡೂ ಪಕ್ಷದವರಿಗೂ ಸಮಕಾಲೀನ ದಾಖಲೆ ಪ್ರಸ್ತುತಪಡಿಸಲು ಅವಕಾಶವಾಗಿಲ್ಲ. ತತ್ರಾಪಿ, 'ಇದು ಈ ಯತಿಗಳ ಬೃಂದಾವನ' ಎಂಬುದನ್ನು ಶತಮಾನಗಳ ಅಂತರವಿರುವ ಜನತೆಗೆ ಬೃಂದಾವನದ ಬಳಿ ಶಾಸನೋಲ್ಲೇಖಾದಿಗಳಿಲ್ಲದಿದ್ದಾಗ ಅನೂಚಾನ ಪರಂಪರೆಯೇ ತಿಳಿಸಿಕೊಡಬೇಕಾಗಿದೆ. ಶ್ರೀ ಜಯತೀರ್ಥರು ಬೃಂದಾವನಸ್ಥರಾದ ಮೇಲೆ ಈ ವರೆಗೆ ಅನೇಕ ಮಹನೀಯರು ಬಂದಿದ್ದಾರೆ. ಶ್ರೀರಾಜೇಂದ್ರರು, ಶ್ರೀಕವೀಂದ್ರರು, ಶ್ರೀವಿಬುಧೇಂದ್ರರು, ಶ್ರೀ ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀರಘೂತ್ತಮರು, ಶ್ರೀ ವಿಜಯೀಂದ್ರರು, ಶ್ರೀರಾಘವೇಂದ್ರರು ಮುಂತಾದ ಯತಿವರೇಣ್ಯರು ತಮ್ಮದೇ ಆದ ಶಿಷ್ಯಪರಂಪರೆ ಬೆಳೆಸಿದ ಮೂರ್ಧನ್ಯ ಮಹಾಪುರುಷರು. ಸಾಮಾನ್ಯರೇನಲ್ಲ. ಇವರೆಲ್ಲರೂ ಶ್ರೀಪದ್ಮನಾಭತೀರ್ಥರ ಬೃಂದಾವನ ಆನೆಗೊಂದಿಲ್ಲಿ ಇರುವುದಾಗಿ ಪ್ರಚುರಪಡಿಸಿದ್ದರಿಂದಲೇ ಇಂದಿನವರೆಗೆ 'ಇದೇ ಇವರ ಬೃಂದಾವನ'ವೆಂದು ತಿಳಿಯಲು ಸಾಧ್ಯವಾಗಿದೆ. ಇಲ್ಲದಿದ್ದರೆ ಈ ತಿಳುವಳಿಕೆ ದುಃಸಾಧ್ಯವು. ಇದರಂತೆ ಶ್ರೀಜಯತೀರ್ಥರ ಮೂಲ ಬೃಂದಾವನವು ನವವೃಂದಾವನದಲ್ಲಿರುವ ಶ್ರೀ ರಘುವರ್ಯರದ್ದೆಂದು ಪ್ರಸಿದ್ಧವಾದ ವೃಂದಾವನವೇ ಆಗಿದ್ದರೆ, ಸರ್ವಮಾನ್ಯರಾದ ಶ್ರೀ ಜಯತೀರ್ಥರ ಆರಾಧನೆ, ಅಭಿಷೇಕ, ಹಸ್ತೋದಕ, ಮುಂತಾದ ಸತ್ ಸಂಪ್ರದಾಯ ನಡವಳಿಕೆ ಆ ವೃಂದಾವನಕ್ಕೇ ಏಕೆ ಬೆಳೆಸಲಿಲ್ಲ? ಆ ಮಹನೀಯರಿಗೆ ಅಡ್ಡಿ ಒಡ್ಡುವವರು ಯಾರು ತಾನೆ

ಇದ್ದಾರು ? ಶ್ರೀಪದ್ಮನಾಭತೀರ್ಥರ ಆರಾಧನೆ ನೂರಾರು ವರ್ಷಗಳಿಂದ ನಡೆಯುತ್ತಿಲ್ಲವೆ ? ಶ್ರೀ ಜಯತೀರ್ಥರೇನು ಸಾಮಾನ್ಯ ವ್ಯಕ್ತಿಗಳೇ ? ಬಿಡಿ ಸನ್ಯಾಸಿಗಳಾದ ಶ್ರೀಗೋವಿಂದ ಒಡೆಯರನ್ನೂ ಗುರುತಿಸುವ ಪರಂಪರೆ ಶ್ರೀ ಜಯತೀರ್ಥರನ್ನು ಮರೆಯುವುದು ಸಾಧ್ಯವೆ ? ಎಲ್ಲರಿಗಿಂತಲೂ ಅದ್ದೂರಿಯಾಗಿ ಆರಾಧನಾದಿ ಉತ್ಸವವು ಶ್ರೀ ಜಯತೀರ್ಥರಿಗೇ ಅರ್ಹವಾಗಿದ್ದು, ಇತರ ಎಲ್ಲಕಡೆ ನಡೆಯುತ್ತಿದ್ದು, ಆನೆಗೊಂದಿಯಲ್ಲಿ ಇನ್ನೂ ಮಿಗಿಲಾಗಿ ಆಗಬೇಕಾಗಿತ್ತು. ಆದರೆ ಹಾಗಾಗದೆ, ಇತ್ತೀಚಿನ 25-30 ವರುಷಗಳ ಹಿಂದಿನವರೆಗೂ, ಎಲ್ಲ ಮಠೀಯ ಪಂಚಾಂಗಗಳಲ್ಲಿ ನಡವಳಿಕೆಯಲ್ಲಿ ಮಳಖೇಡವನ್ನೇ ಶ್ರೀ ಟೀಕಾರಾಯರ ಮೂಲಸ್ಥಳವೆಂದು ತಿಳಿದು ತಿಳಿಸುವ ಸಂಪ್ರದಾಯ ಅವ್ಯಾಹತವಾಗಿ ಬಂದಿದೆ. ಇದರಲ್ಲಿ ಎರಡು ಮಾತಿಲ್ಲ. ಪಂಚಾಂಗದಲ್ಲಿ 'ಆನೆಗೊಂದಿ' ಎಂದು ತಿಳಿಸುವುದು, ಅಲ್ಲಿಗೇ ಹೋಗಿ ಶ್ರೀ ಟೀಕಾರಾಯರ ಆರಾಧನೆ ಸೇವಾ ಅಲಂಕಾರಾದಿಗಳನ್ನು ಮಾಡುವುದು, ಯಾವ ಯತಿ - ಗೃಹಸ್ಥ - ಪಂಡಿತ - ಪಾಮರರಲ್ಲೂ ಕಂಡಿಲ್ಲ. ಮಳಖೇಡಕ್ಕೆ ಹೋಗಿ ಸೇವಾದಿಗಳನ್ನು ಮಾಡುವ ಸತ್ ಸಂಪ್ರದಾಯವೇ ಇಂದಿಗೂ ಜ್ವಲಂತವಾಗಿದೆ. ಶ್ರೀರಘುವರ್ಯರ ವೃಂದಾವನವೇ ಶ್ರೀ ಜಯತೀರ್ಥರ ಮೂಲವೃಂದಾವನವೆಂದು ವಾದಿಸುವವರು ಇದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಹಿಂದಿನವರಾರಿಗೂ ಇದು ತಿಳಿದಿಲ್ಲವೆಂದು, ಇತ್ತೀಚಿನ ಸಂಶೋಧನೆಯಿಂದ ನಮಗೆ ತಿಳಿದು ಬಂದಿದೆಯೆಂದು ಹೇಳುವುದು ಬಹಳ ಸಾಹಸದ ಮಾತಾಗುತ್ತದೆ. ಪೂರ್ವಪರಂಪರೆಗೆ ಅನನುಗುಣವಾಗಿ ಕೇವಲ ಕರಗಜ ಸಾಮಗ್ರಿಯಿಂದ 'ಇದೇ ಶ್ರೀ ಜಯತೀರ್ಥರ ವೃಂದಾವನ'ವೆಂದು ಬೆಟ್ಟುತೋರಿಸಿ ನುಡಿವುದು ಸರ್ವಥಾ ಅಸಂಭಾವ್ಯವಾಗಿದೆ.

ಆದ್ದರಿಂದ, ಇತ್ತೀಚಿನ 20-30 ವರ್ಷಗಳಲ್ಲಿ ಹುಟ್ಟಿಬಂದ ಈ ವಾದಗಳಲ್ಲಿ ಕೇವಲ ತಮ್ಮ ತಮ್ಮ ಮಠ ಪ್ರತಿಷ್ಠೆಗಳ ದುರಭಿಮಾನದಿಂದ ನಾನಾ ಪುರಾವೆಗಳನ್ನು ಸೃಷ್ಟಿಸಿಕೊಂಡು ಮೈವೆತ್ತಿ ಬಂದಿರುವುದೆಂದು ಹೇಳದೇ ಗತಿಯಿಲ್ಲ.

ತೀರ್ಥಪ್ರಬಂಧದ ವ್ಯಾಖ್ಯಾನದಲ್ಲಿ ಬಂದಿರುವ ವಿಷಯವನ್ನು ಮೂಲಬೃಂದಾವನದ ಗೋಜಿಗೆ ಹೋಗದೆ ಈ ಮೇಲಿನ ಜ್ಞಾನಿಪ್ರಸಿದ್ಧಿಗೆ ಅನುಗುಣವಾಗಿ ಯೋಜಿಸುವುದು ಒಳ್ಳೆಯದು. ಅಥವಾ "ಗಜಗಹ್ವರೇ" ಎಂಬ ಪದವು ಕೆಲವು ಹಸ್ತಪ್ರತಿಗಳಲ್ಲಿ ಕಾಣದಿರುವುದರಿಂದ ಪ್ರಕ್ಷಿಪ್ತವೆಂದು ತೀರ್ಮಾನಿಸುವುದು ಸಮಂಜಸವು.

ವಸ್ತುತಃ ತೀರ್ಥಪ್ರಬಂಧದಲ್ಲಿ ಶ್ರೀ ಜಯತೀರ್ಥರನ್ನು ವರ್ಣಿಸುವುದಕ್ಕೆ ಪೂರ್ವದಲ್ಲಿ "ಯತ್ರಭಾಂತಿ" ಎಂದು ವರ್ತಮಾನ ಕಾಲವಾಚಕ ಲಟ್ ಪ್ರಯೋಗದಿಂದ ಶ್ರೀಪದ್ಮನಾಭತೀರ್ಥಾದಿಗಳನ್ನು ವೃಂದಾವನದಲ್ಲಿ ಉಪಸ್ಥಿತರಿದ್ದು ವಿರಾಜಿಸುತ್ತಿದ್ದಾರೆಂದು ತಿಳಿಸಿ, ನಂತರ ಶ್ರೀ ಜಯತೀರ್ಥರನ್ನು ವರ್ಣಿಸುವಾಗ "ವೀಕ್ಷ್ಯ ರೇಮೇ" ಎಂದು ಪರೋಕ್ಷ ಭೂತಕಾಲೀನ ಲಿಟ್ ಪ್ರಯೋಗವಿರುವುದರಿಂದ, ಬೃಂದಾವನತಃ ಪ್ರತ್ಯಕ್ಷೋಪಸ್ಥಿತಿಯಿಂದ ಶ್ರೀ ಜಯತೀರ್ಥರನ್ನು ಪರಿಗ್ರಹಿಸುವುದು ಅನುಚಿತವಾಗುತ್ತದೆ. ಪ್ರತ್ಯಕ್ಷ ವರ್ತಮಾನರಾದ ಶ್ರೀ ಜಯತೀರ್ಥರ ಬಗ್ಗೆ 'ರಮತೇ' ಎಂದು ಪ್ರಯೋಗವು ಆವಶ್ಯಕವಾಗಿತ್ತಷ್ಟೆ "ರೇಮೇ" ಪ್ರಯೋಗದಿಂದಲೇ ಬೃಂದಾವನರೂಪದಿಂದ ಪ್ರತ್ಯಕ್ಷೋಪಸ್ಥಿತಿ ಇಲ್ಲವೆಂದೇ ತಿಳಿಯುತ್ತದೆ. ಗಜಗಹ್ವರ ಎಂಬ ರಾಜಧಾನಿಯನ್ನು ಮಧ್ವಸಿದ್ಧಾಂತ ರಾಜಧಾನಿಯನ್ನಾಗಿ ನಿರೂಪಿಸಿ, ಶ್ರೀ ಪದ್ಮನಾಭತೀರ್ಥಾದಿಗಳನ್ನು ದಿಗ್ಗಜಗಳನ್ನಾಗಿ ಯೋಜಿಸಿ, ಮಾಧ್ವಗ್ರಂಥಗಳನ್ನು ರಾಜನೆಂದು ಬಣ್ಣಿಸುವಾಗ ಪಟ್ಟದ ರಾಣಿಯಾಗಿ ಟೀಕಾಗ್ರಂಥಗಳನ್ನು ಯೋಜಿಸುವ ಪ್ರಕ್ರಿಯೆಯ ಕ್ರಮದಲ್ಲಿ, ಹಿಂದೆ, ಅಲ್ಲಿ ವ್ಯಾಸರಾಜರಿಂದ ಕ್ರಾಂತಿಯಂತೆ ನಡೆದ ಮೂಲ–ಟೀಕಾಗ್ರಂಥಗಳ ಪಾಠಪ್ರವಚನವೈಭವವನ್ನು ಗಮನಿಸುತ್ತ ಶ್ರೀ ಜಯತೀರ್ಥರನ್ನು ಶ್ರೀವಾದಿರಾಜರು ಸ್ಮರಿಸಿದ್ದಾರೆಂಬುದೇ ಬಹಳ ಸ್ವಾರಸಿಕ ವಿಶ್ಲೇಷಣೆಯಾಗುತ್ತದೆ. ಆದ್ದರಿಂದಲೇ ಶ್ರೀ ಛಲಾರಿ ಆಚಾರ್ಯರು ತಮ್ಮ ಶ್ರೀಜಯತೀರ್ಥವಿಜಯದಲ್ಲಿ ಗ್ರಂಥವರ್ಣನಾ ಸಂದರ್ಭದಲ್ಲಿ ಶ್ರೀವಾದಿರಾಜರ ವಾಕ್ಯವನ್ನು ಯೋಜಿಸುವ ರೀತಿ ಗಮನಾರ್ಹವಾಗುತ್ತದೆ.

ಇನ್ನು "ಕಿಟಿತಟಿನೀ" ಗ್ರಂಥವನ್ನು ಉದಾಹರಿಸುವುದು "ತಿಲಕಾಷ್ಠಮಹಿಷಿಬಂಧನ" ಕಥೆಯನ್ನು ನೆನಪುಮಾಡುತ್ತದೆ. ಕೃಷ್ಣದೇವ ರಾಯನ ರಜತಶಾಸನದ ಬಗ್ಗೆ ಶಾಸನತಜ್ಞರು ದೃಢೀಕರಿಸಿದ ನಂತರವೇ ಪ್ರತಿಕ್ರಿಯೆ ಉಚಿತವೆನಿಸುತ್ತದೆ. ಆದರೂ, "ಭುಜಂಗನಾಲಯದಲಿ ಗಜಗೊಂದಲದಿ ನಿಂದೆ" ಎಂಬ ಶಾಸನೋಕ್ತಿಯು, ಶ್ರೀ ಟೀಕಾರಾಯರು ಸರ್ಪರೂಪದಲ್ಲಿ ಸನ್ನಿಹಿತರೆಂಬುದನ್ನು ನಿರೂಪಿಸಲಷ್ಟೇ ಶಕ್ತವಾಗಿದೆ. "ಭುಜಂಗನಾಲಯ" ಎಂಬ ಮಾತು ಗಮನಾರ್ಹವಷ್ಟೇ. ಟೀಕಾರಾಯರು ಅನೇಕಕಡೆ ಸರ್ಪರೂಪದಿಂದ ವಿಶೇಷತಃ ಸನ್ನಿಹಿತರಾಗಿರುವ ಸಂಗತಿ ಪ್ರಚಲಿತವೇ ಇದೆ. "ಪಾವಿನ ಪರಿಯಲಿ ಇರುತಿಪ್ಪ" ಎಂಬ ವಿಜಯದಾಸರ ನುಡಿಯೂ ಸಾಂಗತ್ಯ ನೀಡುತ್ತದೆ.

ಪ್ರಕೃತ ಈ ಕೃತಿಯಲ್ಲಿ ಇದಲ್ಲದೆ ಇಂಥಾ ಅನೇಕ ಸಂಗತಿಗಳು ಇನ್ನೂ ವಿಶದವಾಗಿ ತಿಳಿಯುತ್ತಿದೆ. ಆದರೂ ಕೆಲವೊಂದು ಗಮನಾರ್ಹ ವಿಷಯಗಳನ್ನಿಲ್ಲಿ ಪ್ರಸ್ತಾಪಿಸಿದ್ದೇವೆ. ಅನೇಕ ಹಿರಿಯರ ಜ್ಞಾನಿಗಳ ವಾಕ್ಯಗಳನ್ನು, ದಾಖಲೆಗಳನ್ನು, ಏಕತ್ರ ಸಂಗ್ರಹಿಸಿ, ಆಧುನಿಕ ಕುಯುಕ್ತಿಗಳ ಬೊಂಬೆಯಾಟವನ್ನು ನಿರ್ಜೀವಗೊಳಿಸಿ, ಮುಕ್ತಮಾರ್ಗದಲ್ಲಿ ಚರ್ಚಿಸಲು ಪ್ರಯತ್ನಿಸಿರುವ ಶ್ರೀಕಾಂತಾಚಾರ್ಯ ಮುಕ್ಕುಂದಿ ಇವರ ಈ ಕೃತಿ ಇನ್ನಷ್ಟು ಪುಷ್ಟಿಗೊಳ್ಳಲೆಂಬುದೇ ನಮ್ಮ ಹಿರಿದಾಸೆ. ಸಮರಸವಾಗಿ ಬಾಳಿದ ಪ್ರಾಚೀನರ ಸರ್ವಮಾನ್ಯ ವ್ಯಕ್ತಿತ್ವಕ್ಕೆ ಸ್ವಪ್ರತಿಷ್ಠಾ ಅಭಿಮಾನಾದಿಗಳಿಂದ ಅಪಚಾರವೆಸಗುವ ಪ್ರವೃತ್ತಿ ಕೊನೆಗೊಳ್ಳಲೆಂದು ಆಶಿಸುವೆ.

[illegible] [illegible]

ಬಾಳಗಾರು ಶ್ರೀನಿವಾಸಾಚಾರ್ಯ

ಪಂಡಿತರತ್ನಮ್, ಸಚ್ಛಾಸ್ತ್ರವಿಚಕ್ಷಣರತ್ನಮ್
ಪಂ. ಜಯತೀರ್ಥಾಚಾರ್ಯ ವಾ. ಮಳಗಿ
ಎಂ.ಎ.(ಸಂಸ್ಕೃತ), ಎಂ.ಎ.(ಕನ್ನಡ), ಎಂ.ಎ.(ಹಿಂದಿ)

ಒಬ್ಬ ಬುದ್ಧಿ ಜೀವಿ ದಾರಿ ತಪ್ಪಿದರೆ ಸಮಾಜ ಕೆಡಲು ಹೆಚ್ಚು ವೇಳೆ ಹಿಡಿಯುವುದಿಲ್ಲ. ಧಡ್ಡನ ಅಪರಾದ ವೈಯಕ್ತಿಕ. ಬಿಂದುವಿನಷ್ಟು ಬುದ್ಧಿ ಜೀವಿ ತಪ್ಪಿದರೆ ಅದು ಸಿಂಧುವಾಗುವದು. ಅದು ವೈಯಕ್ತಿಕವಾಗಿ ಉಳಿಯದೇ ಸಾಮಾಜಿಕವಾಗಿ ಬೆಳೆಯುವದು. ಬುದ್ಧಿಜೀವಿ ಸತ್ಯದಿಂದ ದೂರಸರಿಯಲು ಮೂರು ಕಾರಣ. ಜನ್ಮಜಾತಮತೀಯ ಆಗ್ರಹ, ಮಠೀಯ ಒತ್ತಡಗಳು, ಪ್ರಾದೇಶಿಕ ದುರಭಿಮಾನ. ಇವುಗಳಿಂದಾಗಿ ಪ್ರಮಾಣಸಿದ್ಧ ವಿಚಾರಗಳು, ನಿಶ್ಚಿತ ನಿಲುವುಗಳು ಅಲುಗಾಡುವವು. ಶುದ್ಧ ಬುದ್ಧಿ ಜೀವಿಗಳು ತ್ರಿಗುಣಗಳಿಂದಾಗಿ ಕೆಡುವರು. ಜನ ಸಾಮಾನ್ಯರ ದಾರಿ ತಪ್ಪಿಸುವರು. ಮೊದಲ ವರ್ಗ ಮತವು ದುರ್ಬಲವೆನ್ನದೇ ಮತಿ ದುರ್ಬಲವೆಂದು ಜಾರಿಕೊಳ್ಳುವರು. ಆಂತರಿಕ ಅಸಮಾಧಾನವಿದ್ದರೂ ಸಮರ್ಥಿಸಲು ಹೆಣಗುವರು. ಇವರು ಪರಮತೀಯರು. ವಸ್ತುನಿಷ್ಠ, ಪ್ರಮಾಣ ಸಿದ್ಧ, ಪರಂಪರಾ ಪ್ರಾಪ್ತ, ಸತ್ಯಗಳನ್ನು ತಿಳಿದು, ನಂಬಿ, ಹೇಳಿ ಮತ್ತೆ ಕಾಲಕಾಲಕ್ಕೆ ತಾನು ನೀಲುವು ಬದಲಾಯಿಸುವರು. ಇದು ಬುದ್ಧಿಯ ವ್ಯಭಿಚಾರ. ಶ್ರೀಜಯತೀರ್ಥರ ವೃಂದಾವನದ ಬಗ್ಗೆ ಅಭಿಪ್ರಾಯಭೇದ ಎರಡು ಮತ್ತು ಮೂರನೇ ಕಾರಣದಿಂದಾಗಿ ಬೆಳೆದದ್ದು.

ಅತ್ಯುತ್ತಮಗ್ರಂಥಕಾರರಾದ, ಟಿಪ್ಪಣಿಕಾರರಾದ ಶ್ರೀ ಜಯತೀರ್ಥರು, ಶ್ರೀಯಾದವಾರ್ಯರು, ಶ್ರೀನಿವಾಸತೀರ್ಥರನ್ನು ಕಡೆಗಣಿಸುವುದು ಇಲ್ಲದ ತಪ್ಪು ಎಣಿಸುವುದು. ಇದು ಮೂರನೇ ಗುಣದ, ಕಾರಣದ ಪರಿಣಾಮ. ಆದರೆ ಇವುಗಳಿಂದ ಸತ್ಯಬದಲಾಗುವುದಿಲ್ಲ. ಅರಿತು, ಅರ್ಥಮಾಡಿಕೊಂಡು ತಾಳಿದ ಅಭಿಪ್ರಾಯ ಅಲುಗಾಡುವುದಿಲ್ಲ. ಬಾಹ್ಯ ಮಾತು ಕ್ಷಣಕ್ಷಣಕ್ಕೆ ಪರಿವರ್ತನೆ

ಹೊಂದುವವು. ಆನೆಯ ಕಿವಿಯಲ್ಲಿ ಕ್ರಿಮಿ ಬಂದು ಕುಳಿತಿತು. ನಾನು ಇಲ್ಲಿಯೇ ಇರುವೆ, ಎಂದಿತು. ಒಂದು ದಿನ ಹಾರಿಹೋಗುವಾಗ ಏss ಆನೆಯೇ ನಾನು ಹೊರಡುವೆ ಎಂದಿತು. ಕೇಳಿಸಿಕೊಳ್ಳದ ಆನೆ ಕೊನೆಗೊಮ್ಮೆ ಕ್ರಿಮಿಗೆ ಹೇಳಿತು – “ನನಗೆ ನೀನು ಬಂದದ್ದು ತಿಳಿದಿಲ್ಲ, ನೀನು ಹೋಗುವದು ತಿಳಿಯಲಾರದು. ನೀನು ಬಂದರೂ ಅಷ್ಟೇ! ಹೋದರೂ ಅಷ್ಟೇ. ಗಮನಿಸುವಂತಹದ್ದೇನೂ ಅಲ್ಲ, ಇಲ್ಲವೆಂದಿತು. ಹಾಗಿವೆ ಈ ಬದಲಾಗುವ ಬುದ್ಧಿಜೀವಿಗಳ ಅಭಿಪ್ರಾಯ. ಇದರಿಂದ ಮೂಲಭೂತ ಸತ್ಯದಲ್ಲಿ ಏನೂ ಬದಲಾವಣೆ ಆಗುವುದಿಲ್ಲ.

ಲೌಕಿಕ ಓದಿ ಶಾಸ್ತ್ರಕ್ಕಿಳಿದ ಪಂ. ಶ್ರೀಕಾಂತಾಚಾರ್ಯರು ಎಲ್ಲವನ್ನೂ ಚಿಕಿತ್ಸಕ ಬುದ್ಧಿಯಿಂದ ವಿಮರ್ಶಿಸಿ, ಸಂಗ್ರಹಿಸಿ, ವಿಶ್ಲೇಷಿಸಿ ಶ್ರೀಜಯತೀರ್ಥರ ವೃಂದಾವನದ ಬಗ್ಗೆ ಅಭಿಪ್ರಾಯ ಸಮರ್ಥಿಸಿದ್ದಾರೆ. ವಾಸ್ತವತೆಯನ್ನು ಹೊರಗೆಡಹಿದ್ದಾರೆ. ಅವರ ಪ್ರಯತ್ನ, ನಿಷ್ಠೆ ಶಿಸ್ತು, ಸಂಯಮಗಳಿಗೆ ಅಭಿನಂದನೆ. ಅವರಿಂದ ಇನ್ನೂ ಇಂತಹ ಹಲವಾರು ಕೃತಿಗಳು ಬರಲೆಂದು ಹಾರೈಸುವೆ.

ತಮ್ಮ

ಜಯತೀರ್ಥಾಚಾರ್ಯ ಮಳಗಿ

ಧಾರವಾಡ

ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರು

ಮೊಕ್ಕಾಂ - ಹೈದರಾಬಾದ್.

ಸತ್ಯಾನ್ವೇಷಣೆ ಒಂದು ನಿರಂತರಕ್ರಿಯೆ. ಆದರೆ ಸತ್ಯ ಸುಲಭದಲ್ಲಿ ದಕ್ಕುವಂಥದಲ್ಲ. ಕೆಲವರು ತಮಗೆ ಸತ್ಯ ಸಿಕ್ಕಿತು ಎಂದು ಭ್ರಮಿಸುತ್ತಾರೆ. ತಮಗೆ ಸಿಕ್ಕಿದ್ದೇ ಸತ್ಯ ಎಂದು ಭ್ರಮಿಸುತ್ತಾರೆ; ಸಂಭ್ರಮಿಸುತ್ತಾರೆ.

ಕೆಲವೊಮ್ಮೆ ಸತ್ಯದ ಮುಖವಾಡ ಮಾತ್ರ ಸಿಗುತ್ತದೆ. ಕೆಲವೊಮ್ಮೆ ಸತ್ಯದ ಯಾವುದೋ ಒಂದು ಮುಖ ಮಾತ್ರ ಸಿಗುತ್ತದೆ. ಸತ್ಯ ದೂರದಲ್ಲಿ ನಿಂತು ನಗುತ್ತಿರುತ್ತದೆ.

ಕೆಲವೊಮ್ಮೆ ನಮ್ಮ ಪೂರ್ವನಿರ್ಧಾರ ತಪ್ಪು ಎಂದು ಮತ್ತೆ ತಿಳಿಯುತ್ತದೆ. ಆಗ ನಾವೇ ನಮ್ಮ ತಪ್ಪನ್ನು ತಿದ್ದಿಕೊಳ್ಳಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಪೂರ್ವೋಕ್ತ ವಿರೋಧ ಅಥವಾ ಸ್ವವ್ಯಾಹತಿ ಗುಣವಾಗಿ ಬಿಡುತ್ತದೆ. ನಾನು ಮಾಡಿದ ತಪ್ಪನ್ನು ಪ್ರಾಂಜಲವಾಗಿ ಒಪ್ಪಿಕೊಳ್ಳುವ ಮತ್ತು ತಿದ್ದಿಕೊಳ್ಳುವ ಸಜ್ಜನಿಕೆಯಾಗಿ ಬಿಡುತ್ತದೆ.

ಇವೆಲ್ಲ ಒಬ್ಬ ಸಂಶೋಧಕನಲ್ಲಿರಬೇಕಾದ ಎಚ್ಚರಗಳು ಶ್ರೀ ಚಿಕ್ಕೇರೂರು ಶ್ರೀಕಾಂತಾಚಾರ್ಯರಲ್ಲಿ ಈ ಎಚ್ಚರ ಇದೆ ಎಂದೇ ಅವರ "ಶ್ರೀಮಟ್ಟೀಕಾ ಕೃತ್ಪಾದರ ಮೂಲ ವೃಂದಾವನ" ಎಂಬ ಕೃತಿ ಗಮನಾರ್ಹವಾಗುತ್ತದೆ.

ಇಂಥ ಎಚ್ಚರ ಇರದವರುಂಟು. ಅಂಥವರು ತಾವೂ ದಾರಿ ತಪ್ಪುತ್ತಾರೆ; ಜನರನ್ನೂ ದಾರಿ ತಪ್ಪಿಸುತ್ತಾರೆ. ಇಂಥವರ ಬಗೆಗೆ ನಾವು ಎಚ್ಚರವಾಗಿರಬೇಕು. ಸಂತೋಷದ ಸಂಗತಿ ಎಂದರೆ ಶ್ರೀಕಾಂತಾಚಾರ್ಯರು ಈ ವರ್ಗಕ್ಕೆ ಸೇರಿದವರಲ್ಲ, ಅವರು ಪ್ರಾಚೀನ ಮತ್ತು ಅರ್ವಾಚೀನ ವಿದ್ಯೆಗಳನ್ನು ಓದಿಕೊಂಡವರು. ಪೂರ್ವದ ಅಧ್ಯಾತ್ಮದ ಜತೆಗೆ ಪಶ್ಚಿಮದ ಲೌಕಿಕವನ್ನೂ ಪರಿಚಯಿಸಿಕೊಂಡವರು. ಸಂಸ್ಕೃತವಾಙ್ಮಯಕ್ಕೆ ಇಂಥವರು ಬೇಕು.

ಶ್ರೀಕಾಂತಾಚಾರ್ಯರು ಇನ್ನಷ್ಟು ಮಾಗುವುದನ್ನು, ಮಾಗಿದ ಅವರಿಂದ ಇನ್ನಷ್ಟು ಪಕ್ವ ಫಲಗಳನ್ನು ನಾನು ನಿರೀಕ್ಷಿಸುತ್ತೇನೆ.

— ಬನ್ನಂಜೆ ಗೋವಿಂದಾಚಾರ್ಯ

ಬನ್ನಂಜೆ ಗೋವಿಂದಾಚಾರ್ಯ

ವಿದ್ವಾನ್ ಶ್ರೀ ಹರಿದಾಸ ಭಟ್ಟ
ಪ್ರಾಂಶುಪಾಲರು
ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು

ನಿಷ್ಪಕ್ಷಪಾತ ವಿಮರ್ಶೆ

ಶ್ರೀಮಜ್ಜಯತೀರ್ಥರು ಮಾಧ್ವವಾಙ್ಮಯಕ್ಕೆ ದೊಡ್ಡ ಕೊಡುಗೆಯನ್ನಿತ್ತವರು. ಅವರ ಟೀಕೆಗಳ ಬೆಳಕಿನಲ್ಲೇ ಶ್ರೀಮಧ್ವಾಚಾರ್ಯರ ಸರ್ವಮೂಲಗ್ರಂಥಗಳನ್ನು ಅಧ್ಯಯನ ಮಾಡುವ ಸಂಪ್ರದಾಯ ಅನೇಕ ವರ್ಷಗಳಿಂದ ಬೆಳೆದು ಬಂದಿದೆ. ಇಂತಹ ಮಹಾತ್ಮರನ್ನು ಮಾಧ್ವಸಮಾಜ ಮರೆಯಲು ಸಾಧ್ಯವೇ ಇಲ್ಲ. ಹೀಗಿರುವಾಗ ಅವರ ಮೂಲ ವೃಂದಾವನ ಎಲ್ಲಿದೆ ಎನ್ನುವುದರ ಬಗ್ಗೆ ಪ್ರಮಾದ ಉಂಟಾಗಲು ಸಾಧ್ಯವಿಲ್ಲ. ಇತ್ತೀಚಿನವರೆಗೂ ಈ ಬಗ್ಗೆ ವಿವಾದವೂ ಇರಲಿಲ್ಲ. ಇದ್ದಕ್ಕಿದ್ದಂತೆ ಅಂತಹ ಗೊಂದಲವೊಂದು ಉಂಟಾಗಿ ಪ್ರಕೃತ, ಶಾಂತವಾಗಿದೆ.

ಶ್ರೀ ಚಿಕ್ಕೇರೂರು ಶ್ರೀಕಾಂತಾಚಾರ್ಯರು ಟೀಕಾಕೃತ್ಪಾದರ ಮೂಲ ವೃಂದಾವನವು ಎಲ್ಲಿದೆ ಎನ್ನುವುದನ್ನು ನಿರ್ವಿವಾದವಾದ ಅನೇಕ ಆಧಾರಗಳನ್ನು ಕೊಟ್ಟು ಸಮರ್ಥಿಸಿದ್ದಾರೆ. ಮಳಖೇಡದಲ್ಲೇ ಮೂಲ ವೃಂದಾವನವಿದೆ ಎನ್ನುವುದೇ ಅವರು ನೀಡಿದ ಆಧಾರಗಳಿಂದ ಸಿದ್ಧವಾಗುತ್ತದೆ. ಅದಕ್ಕೆ ವಿರುದ್ಧವಾದ ವಾದಗಳನ್ನು ಪರಿಶೀಲಿಸಿ ವಿಮರ್ಶಿಸಿದ್ದಾರೆ. ಅವರು ನಡೆಸಿರುವ ನಿಷ್ಪಕ್ಷಪಾತವಾದ ಈ ವಿಮರ್ಶೆ ವಿವಾದಕ್ಕೆ ತೆರೆ ಎಳೆದರೆ ಗ್ರಂಥವು ಸಾರ್ಥಕವಾದೀತು.

ಎ. ಹರಿದಾಸ ಭಟ್ಟ

ವಿದ್ವಾನ್ ಶ್ರೀ. ಸಿ.ಹೆಚ್. ಬದರೀನಾಥಾಚಾರ್ಯರು
ಪ್ರಾಧ್ಯಾಪಕರು
ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು

ವಿದ್ವಾನ್ ಶ್ರೀ ಮುಕ್ಕುಂದಿ ಶ್ರೀಕಾಂತಾಚಾರ್ಯರ “ಶ್ರೀಮಟ್ಟೀಕಾಕೃತ್ಪಾದರ ಮೂಲ ವೃಂದಾವನ” ಹೊತ್ತಿಗೆಯು ಐತಿಹಾಸಿಕ ಸತ್ಯದ ವಿಷಯಗಳನ್ನು ನಿರೂಪಿಸುವುದರಲ್ಲಿ ಸಮರ್ಥವಾಗಿದೆ. ಅನೇಕ ಶಿಲಾಶಾಸನಗಳು ದಾಸರಾಯರ ಪದ್ಯಗಳು, ಹಾಗೂ ಯತಿವರೇಣ್ಯರ ಸ್ತೋತ್ರ ಸಾಹಿತ್ಯದಲ್ಲಿಯೂ ಅಡಗಿರುವ ವಿಚಾರಗಳನ್ನು ಓದುಗರಿಗೆ ಒದಗಿಸಿ ನೀಡುವ ಅವರ ಪ್ರಯತ್ನ ಪ್ರಶಂಸಾರ್ಹವಾದುದು. ಐತಿಹಾಸಿಕವಿಚಾರಗಳನ್ನು ಬರೆಯುವಾಗ ಬೇಕಾಗುವ ಸೂಕ್ಷ್ಮದೃಷ್ಟಿ ಅನೇಕ ಕೃತಿಗಳ, ಶಾಸನಗಳ ಅಧ್ಯಯನ ನಿಷ್ಠೆ ಎಲ್ಲವನ್ನು ಶ್ರೀ ಶ್ರೀಕಾಂತಾಚಾರ್ಯರಲ್ಲಿ ಕಾಣಬಹುದು.

ಅನೇಕ ದಾಸವರೇಣ್ಯರ ಪದ್ಯಗಳನ್ನು ಯುಕ್ತಿ ಬದ್ದವಾಗಿ ವಿಮರ್ಶಿಸಿ ಸತ್ಯಕ್ಕೆ ಅಪಚಾರವಾಗಬಾರದೆಂಬ ಕಾಳಜಿಯಿಂದ ಈ ಕೃತಿಯು ರಚಿತವಾಗಿರುವುದು ಅಭಿನಂದನೀಯವಾಗಿದೆ.

ಸಿ.ಹೆಚ್ ಬದರೀನಾಥಾಚಾರ್ಯರು

ಡಾ|| ಎಂ. ಚಿದಾನಂದ ಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು,
ಖ್ಯಾತ ಸಂಶೋಧಕರು,
ಶಾಸನತಜ್ಞರು ಹಾಗೂ ಪ್ರಸಿದ್ಧ ಸಾಹಿತಿಗಳು.

ವಾದದಲ್ಲಿ ಸತ್ಯಾಂಶವಿದೆ

ಶ್ರೀ ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯರು ತಾವು ಬರೆದಿರುವ ‘‘ಶ್ರೀಮಟ್ಟೀಕಾಕೃತ್ಪಾದರ ಮೂಲ ವೃಂದಾವನ’’ ಎಂಬ ಕಿರುಕೃತಿಗೆ ನನ್ನ ಅಭಿಪ್ರಾಯದ ಕೆಲವು ಮಾತುಗಳನ್ನು ಬಯಸಿದ್ದಾರೆ. ನನಗೆ ದ್ವೈತ ಸಿದ್ಧಾಂತದ, ಮಾಧ್ವ ಪರಂಪರೆಯ ಸೂಕ್ಷ್ಮ ಪರಿಚಯ ಇಲ್ಲವೆಂಬುದು ಸ್ಪಷ್ಟ. ಹರಿದಾಸ ಸಾಹಿತ್ಯದ ವಿದ್ಯಾರ್ಥಿಯೆಂಬುದು ನಿಜ. ಅಲ್ಲಿಯೂ ನಾನು ‘ವಿದ್ಯಾರ್ಥಿ’ಯೇ. ಹೀಗಿದ್ದರೂ ಅವರು ನನ್ನಿಂದ ಕೆಲವು ನುಡಿಗಳನ್ನು ಬಯಸಿರುವುದರಿಂದ ಈ ಮುಂದಿನ ವಾಕ್ಯಗಳನ್ನು ಸಂತೋಷದಿಂದ ಬರೆಯುತ್ತಿದ್ದೇನೆ.

ಮಾಧ್ವಪರಂಪರೆಯಲ್ಲಿ ಬಹು ದೊಡ್ಡ ಹೆಸರಾಗಿರುವ ಶ್ರೀ ಜಯತೀರ್ಥರ (ಅರ್ಥಾತ್ ಟೀಕಾಚಾರ್ಯರ) ನಿಜವಾದ ‘‘ವೃಂದಾವನ’’ವು ಯಾವುದು ಎಂಬ ವಿವಾದವನ್ನು ಶ್ರೀಕಾಂತಾಚಾರ್ಯರು ಕೈಗೆತ್ತಿಕೊಂಡು, ಈಗಾಗಲೇ ಬಹುತೇಕ ಎಲ್ಲರ ಒಪ್ಪಿಗೆ ಪಡೆದಿರುವ ಗುಲ್ಬರ್ಗ ಜಿಲ್ಲೆಯ ಕಾಗಿಣೀ ನದೀ ತೀರದ ಮಳಖೇಡದ ವೃಂದಾವನವೇ ಜಯತೀರ್ಥರು ಸಮಾಧಿಸ್ಥರಾದ ಜಾಗ ಎಂಬುದನ್ನು ಹಲವು ಸ್ಪಷ್ಟಾಧಾರಗಳಿಂದ ಪ್ರತಿಪಾದಿಸಿದ್ದಾರೆ. ಸಂಶೋಧನೆಯಲ್ಲಿ ಎಷ್ಟೋ ಸಾರಿ ಅಲ್ಲಿ ಪ್ರತಿಪಾದಿತವಾಗಿರುವ ಸತ್ಯವೇ ಅಂತಿಮವಾಗಿ ಮುಖ್ಯವಾಗಿದ್ದರೂ ಸಂಶೋಧಕರು ಹೆಚ್ಚಿನ ಪ್ರಾಮುಖ್ಯ ನೀಡುವುದು ಅಂತಹ ತೀರ್ಮಾನಕ್ಕೆ ಬರಲು ನೀಡಲಾಗುವ ಆಧಾರಗಳಿಗೆ. ಆ ಆಧಾರಗಳಲ್ಲೂ ಸ್ಥೂಲವಾಗಿ ಪ್ರಾಸಂಗಿಕ ಅಥವಾ ಅನುಕೂಲ ಎಂದು ಕರೆಯಬಹುದಾದ ಆಧಾರಗಳಿಗಿಂತ ಮೂಲ ಅಥವಾ ನಿರ್ಣಾಯಕ ಆಧಾರಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡುತ್ತಾರೆ. ಶ್ರೀ ಶ್ರೀಕಾಂತಾಚಾರ್ಯರು

ಅಂತಹ ಹಲವು ನಿರ್ಣಾಯಕ (clinching) ಆಧಾರಗಳನ್ನು ನೀಡಿ, ಈಗಾಗಲೇ, ಸಾರ್ವಜನಿಕರಿಂದ ಮಾನ್ಯತೆ ಪಡೆದಿರುವ ಮಳಖೇಡದ ವೃಂದಾವನವೇ ಶ್ರೀ ಜಯತೀರ್ಥರ ವೃಂದಾವನವೆಂದೂ ಹಂಪಿಯ ಪಕ್ಕದ ನವವೃಂದಾವನಕ್ಕೂ ಶ್ರೀ ಜಯತೀರ್ಥರಿಗೂ ಯಾವುದೇ ಸಂಬಂಧವಿಲ್ಲವೆಂದೂ ಖಚಿತಪಡಿಸಿದ್ದಾರೆ. ಅವರ ಈ ಕೃತಿಯು ಅನಗತ್ಯವಾಗಿ ಕೆಲವರು ಏಳಿಸಿರುವ ವಿವಾದವನ್ನು ಅಂತಿಮಗೊಳಿಸುವುದೆಂಬ ಭರವಸೆ ನನ್ನದಾಗಿದೆ.

ನನಗೆ ಹೆಚ್ಚು ಪರಿಚಯವಿರುವ ವೀರಶೈವ ಸಾಹಿತ್ಯದಲ್ಲೂ ಇಂತಹ ಅನಗತ್ಯ ವಿವಾದಗಳು ಕಾಣಿಸಿಕೊಂಡಾಗ ಆ ವಿವಾದಗಳನ್ನು ಉಪೇಕ್ಷೆ ಮಾಡದೆ ಆಗಾಗ್ಗೆ ನನ್ನ ಸ್ಪಷ್ಟ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ ಬಂದಿದ್ದೇನೆ. ಮೇಲಿನಂತಹ ವಿವಾದಗಳು ನೋಡಲು ಅಲ್ಪವೆನ್ನಿಸಿದರೂ ಅವು ಮುಂದೆ ದುಷ್ಪರಿಣಾಮಗಳನ್ನು ಮಾಡುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀ ಶ್ರೀಕಾಂತಾಚಾರ್ಯರನ್ನು ಮೇಲ್ಕಂಡ ಕೃತಿಗಾಗಿ ನಾನು ಹೃತ್ಪೂರ್ವಕ ಅಭಿನಂದಿಸುತ್ತೇನೆ.

ಎಂ. ಚಿದಾನಂದ ಮೂರ್ತಿ

ಡಾ॥ ಕೃಷ್ಣಕೊಲ್ಹಾರ್
ಬಿಜಾಪುರ

'ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ನವವೃಂದಾವನದಲ್ಲಿದೆ' ಎನ್ನುವ ಒಂದು ಸುಳ್ಳನ್ನು ನೂರು ಬಾರಿ ಹೇಳಿ ಸತ್ಯವನ್ನಾಗಿಸುವ ಹೊನ್ನಾರವನ್ನು ಪಂ. ಚಿಕ್ಕೇರೂರು. ಮುಕ್ಕುಂದಿ. ಶ್ರೀಕಾಂತಾಚಾರ್ಯರು ಸಮರ್ಥವಾಗಿ ಎದುರಿಸಿ ಶ್ರೀಮಜ್ಜಯತೀರ್ಥರ ವೃಂದಾವನವು ಮಳಖೇಡದಲ್ಲಿಯೇ ಇದೆ ಎಂದು ಸಿದ್ಧಮಾಡಿ ತೋರಿಸಿದ್ದಾರೆ.

ಕಳೆದ ಆರು ಶತಮಾನಗಳಿಂದ ಶ್ರೀ ಜಯತೀರ್ಥರ ವೃಂದಾವನವು ಮಳಖೇಡದಲ್ಲಿಯೇ ಇದೆ ಎಂದು ಯತಿಗಳು ಪಂಡಿತರು ಪಾಮರರು ಹರಿದಾಸರು ಸಾರಿ ಸಾರಿ ಹೇಳಿದ್ದರೂ ಕಳೆದ ಎರಡು-ಮೂರು ದಶಕಗಳಿಂದ ವಿನಾಕಾರಣ ಎಬ್ಬಿಸಿದ ಹುಯಿಲನ್ನು ಪಂ. ಶ್ರೀಕಾಂತಾಚಾರ್ಯರು ತುಂಬಾ ಅಕೆಡೆಮಿಕ್ ಆಗಿ ದಾಖಲೆಗಳ ಸಹಿತ ಸಿದ್ಧಮಾಡಿ ತೋರಿಸಿ ಅಭಿನಂದನೆಗಳಿಗೆ ಪಾತ್ರರಾಗಿದ್ದಾರೆ.

ಡಾ. ಕೃಷ್ಣ.ಕೊಲ್ಹಾರ್

Dr. S.R. Rao
Former Deputy Director General
Archaeological Survey of India

ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿಯೇ ಇರುವುದೆಂದು ಪ್ರತಿಯೊಬ್ಬ ಮಾಧ್ವನಿಗೂ ತಿಳಿದ ವಿಷಯ. ಇದರ ಬಗ್ಗೆ ಅನುಮಾನ ಹುಟ್ಟಿಸುವುದು ಸರಿಯಲ್ಲವಾದರೂ, ಪಂಡಿತ ಶ್ರೀ ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯರು ಅತ್ಯಂತ ಶ್ರದ್ಧೆ ಹಾಗೂ ನಿಸ್ಪ್ರಹತೆಯಿಂದ ಸಂಶೋಧನೆ ನಡೆಸಿ ಒದಗಿಸಿರುವ ಪ್ರಮಾಣಗಳ ಪಟ್ಟಿಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅವರು ವೈಜ್ಞಾನಿಕ ರೀತಿಯಲ್ಲಿ ನಡೆಸಿರುವ ಸಂಶೋಧನೆಯನ್ನು ಎಲ್ಲಾ ವಿದ್ವಾಂಸರು ಒಪ್ಪುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ.

ಶ್ರೀಕಾಂತಾಚಾರ್ಯರು ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿಯಲ್ಲದೆ ನವವೃಂದಾವನದಲ್ಲಿಯಾಗಲಿ ಅಥವಾ ಬೇರೆ ಸ್ಥಳದಲ್ಲಿಯಾಗಲಿ ಇರಲು ಸಾಧ್ಯವಿಲ್ಲ ಎಂಬುದನ್ನು ನಂಬಲರ್ಹ ಗ್ರಂಥಗಳ ಆಧಾರದ ಮೇಲೆ ನಿರ್ಧರಿಸಿರುವುದು ಅತ್ಯಂತ ಶ್ಲಾಘನೀಯ ವಿಷಯ.

ನಾನು ಅನೇಕ ಬಾರಿ ಮಳಖೇಡದಲ್ಲಿರುವ ಶ್ರೀಮಜ್ಜಯತೀರ್ಥರ ವೃಂದಾವನದಲ್ಲಿ ಸೇವೆ ಸಲ್ಲಿಸಿ ಗುರುಗಳ ಕೃಪಾಪಾತ್ರನಾಗಿರುವುದಕ್ಕೆ ನಾನೇ ಸಾಕ್ಷಿ.

ಶ್ರೀಕಾಂತಾಚಾರ್ಯರ ಉನ್ನತ ಮಟ್ಟದ ಸಂಶೋಧನೆಯ ಮಾರ್ಗವನ್ನು ಇತರ ಸಂಶೋಧಕರು ಅನುಸರಿಸಿದರೆ ಉತ್ತಮವೆಂದು ನನಗೆ ತೋರುತ್ತದೆ.

ಶಿಕಾರಿಪುರ ರಂಗನಾಥರಾವ್
(ಎಸ್.ಆರ್. ರಾವ್)

ಇಳಿಯವಯಸ್ಸಿನಲ್ಲೂ ಅವರ ಉತ್ಸಾಹ ಅಸದೃಶ. ಪೂಜ್ಯರಾದ ಪ್ರೊ. ಕೆ.ಟಿ. ಪಾಂಡುರಂಗಿಯವರಿಗೆ ಅನೇಕ ನಮನಗಳು.

ಪ್ರಾಮಾಣಿಕವಾದ ಸಂಶೋಧನೆಗೆ ಬೆಲೆ ಇಲ್ಲದ ಕಾಲವಿದು. ಸಾಮಾನ್ಯವಾಗಿ ಇಂಥ ವಿಮರ್ಶಾತ್ಮಕ ಪ್ರಬಂಧಗಳ ಬಗ್ಗೆ ಸಹಕರಿಸುವವರು ಪ್ರೋತ್ಸಾಹಿಸುವವರು ವಿರಳ. ಅದರಲ್ಲೂ ಪ್ರಸಿದ್ಧ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಲಿಖಿತರೂಪದಲ್ಲಿ ನೀಡುವುದಂತೂ ತುಂಬಾ ವಿರಳ. ಈ ಕೃತಿಯ ವಿಷಯದ ಬಗ್ಗೆ ಮುಕ್ತವಾಗಿ ಚರ್ಚಿಸಿ ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ನೀಡಿ ಆಶೀರ್ವದಿಸಿರುವ ಎಲ್ಲ ಹಿರಿಯ ವಿದ್ವಾಂಸರಿಗೆ ನನ್ನ ಅನಂತ ನಮನಗಳು.

ಡಾ. ಪ್ರಭಂಜನಾಚಾರ್ಯ ವ್ಯಾಸನಕೆರೆಯವರು ಶ್ರೀ ನಾರಾಯಣ ತೀರ್ಥರ ಪತ್ರದ ಪ್ರತಿಯ ಕೊಟ್ಟು ಉಪಕರಿಸಿದ್ದಾರೆ. ಅವರ ಉಪಕಾರ ಸಲಹೆ ಸಹಕಾರಗಳಿಗೆ ನನ್ನ ಅನಂತ ನಮನಗಳು.

ಈ ಸಂದರ್ಭದಲ್ಲಿ ಪಂ. ಶ್ರೀ ವಿದ್ಯಾಧೀಶಾಚಾರ್ಯ ಗುತ್ತಲ ಡಾ. ಎ.ವಿ. ನಾಗಸಂಪಿಗೆ ನನ್ನ ವಿದ್ಯಾಗುರುಗಳಾದ ಪಂ. ಜಯತೀರ್ಥಾಚಾರ್ಯ ಪಗಡಾಲ, ಪಂ. ರುಚಿರಾಚಾರ್ಯ ಬಾಳಗಾರು ಮುಂತಾದವರ ಸಹಕಾರ ಮರೆಯಲಾರೆ. ಇವರೆಲ್ಲರಿಗೂ ಶಿ.ಶಾ. ನಮಸ್ಕಾರಗಳು.

ಅಂದವಾಗಿ ಮುದ್ರಿಸಿ ಕೊಟ್ಟ ವಾಗರ್ಥ ಮುದ್ರಕರಿಗೆ ಮುದ್ರಣಕ್ಕೆ ಧನ ಸಹಾಯ ಮಾಡಿದ ಶ್ರೀ ಪಾಂಡುರಂಗರಾವ್ ದೇಶಪಾಂಡೆಯವರಿಗೆ ಕರಡುತಿದ್ದುವ ಕಾರ್ಯದಲ್ಲಿ ತನ್ನ ಕರ್ತವ್ಯ ನಿರ್ವಹಿಸಿದ ನನ್ನ ಧರ್ಮಪತ್ನಿಗೆ ಮತ್ತು ಸಹಕರಿಸಿದ ಶ್ರೀ ಗುರುರಾಜ್ ದೇಶಮುಖ್‌ರವರಿಗೆ ಶ್ರೀಜಯತೀರ್ಥರ ಅನುಗ್ರಹವಾಗಲಿ.

ಪರೋಕ್ಷ ಅಪರೋಕ್ಷವಾಗಿ ಸಹಕರಿಸಿದ ಎಲ್ಲ ಆತ್ಮೀಯರಿಗೂ ಕೃತಜ್ಞತೆಗಳು.

ಶ್ರೀಮಜ್ಜಯತೀರ್ಥರ ಆರಾಧನಾ ಮಹೋತ್ಸವ | ಸಜ್ಜನ ವಿಧೇಯ
ಸರ್ವಜಿನ್ನಾಮ ಸಂ. ಆಷಾಡ ಕೃಷ್ಣ | **ಚಿ.ಮು.ಶ್ರೀಕಾಂತಾಚಾರ್ಯ**
ಪಂಚಮಿ, 03-08-2007, ಮಳಖೇಡ | ಬೆಂಗಳೂರು

ಮುನ್ನುಡಿ

ಶ್ರೀ ಜಯತೀರ್ಥರ ಮೂಲ ವೃಂದಾವನವು ಮಳಖೇಡದಲ್ಲಿದೆಯೋ ಅಥವಾ ನವವೃಂದಾವನಗಳಲ್ಲಿ ಒಂದಾಗಿದೆಯೋ ಎನ್ನುವ ವಾದ ಕಳೆದ ಎರಡು ದಶಕಗಳಷ್ಟು ಇತ್ತೀಚಿನದು. ಈ ವಾದವನ್ನು ಆರಂಭಿಸಿದವರು ಶ್ರೀ ಟಿ.ಕೆ. ವೇಣುಗೋಪಾಲದಾಸರು ಮತ್ತು ಇದನ್ನು ಸಮರ್ಥಿಸಲು ಪ್ರಯತ್ನಿಸಿದವರು ಡಾ। ಬಿ.ಎನ್.ಕೆ. ಶರ್ಮಾರವರು. ಇವರಿಬ್ಬರೂ ಪ್ರಸಿದ್ಧ ವಿದ್ವಾಂಸರು. ದ್ವೈತ ವಾಙ್ಮಯಕ್ಕೂ ಹರಿದಾಸ ವಾಙ್ಮಯಕ್ಕೂ ವಿಶಿಷ್ಟ ಸೇವೆ ಸಲ್ಲಿಸಿದವರು. ಈ ವಾದವು ಸಾಮಾನ್ಯರಿಂದ ಪ್ರಾರಂಭವಾಗಿದ್ದರೆ ಇದರ ಬಗ್ಗೆ ಉದಾಸೀನವಾಗಿರಬಹುದಾಗಿತ್ತು.ಆದರೆ ಇಬ್ಬರು ಪ್ರಸಿದ್ಧರು ಈ ವಾದ ಆರಂಭಿಸಿದ್ದರಿಂದ ಅವರ ಅಭಿಪ್ರಾಯವನ್ನು ಪರಿಶೀಲಿಸುವುದು ನಿರಾಕರಿಸುವುದು ಹಾಗೂ ಶ್ರೀಮಜ್ಜಯತೀರ್ಥರ ಮೂಲ ವೃಂದಾವನವು ಮಳಖೇಡದಲ್ಲಿಯೇ ಇರುವುದೆಂದು ಸಮರ್ಥಿಸುವುದು ಅಗತ್ಯವಾಗಿದೆ.

ಜಯತೀರ್ಥ ವಿಜಯಗಳು ಸ್ತೋತ್ರಗಳು ಮಾಧ್ವ ಯತಿಗಳ ಚಾರಿತ್ರಿಕ ಗ್ರಂಥಗಳು ಮತ್ತು ಇತ್ತೀಚಿಗೆ ಕನ್ನಡದಲ್ಲಿ ಬಂದ 'ಸತ್ಕಥಾ' 'ಗುರುಚರಿತೆ' ಇತ್ಯಾದಿ ಚಾರಿತ್ರಿಕ ಗ್ರಂಥಗಳಲ್ಲಿಯೂ ಜಯತೀರ್ಥರ ವೃಂದಾವನವು ಕಾಗಿಣೀ ನದಿಯ ದಂಡೆಯ ಮೇಲೆ ಮಳಖೇಡ ಕ್ಷೇತ್ರದಲ್ಲಿದೆ ಎಂಬುದಾಗಿ ಸ್ಪಷ್ಟವಾಗಿ ಉಲ್ಲೇಖಿತವಾಗಿದೆ. ಡಾ। ಬಿ.ಎನ್.ಕೆ. ಶರ್ಮರು ತಮ್ಮ ಮಾಧ್ವವಾಙ್ಮಯ ಇತಿಹಾಸ ಎಂಬ ಇಂಗ್ಲೀಷ್ ಗ್ರಂಥದ ಎಲ್ಲ ಆವೃತ್ತಿಗಳಲ್ಲೂ Philosophy of Madwacharya ಎಂಬ ಗ್ರಂಥದ ಮೊದಲನೇ ಆವೃತ್ತಿಯಲ್ಲೂ ಸ್ಪಷ್ಟವಾಗಿ ಮಳಖೇಡ ಎಂಬುದಾಗಿ ಬರೆದಿದ್ದಾರೆ.

ಶ್ರೀಜಯತೀರ್ಥರ ವೃಂದಾವನವು ಮಳಖೇಡದಲ್ಲಿದೆ ಎಂಬ ಉಲ್ಲೇಖಗಳನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಇದು

ನವವೃಂದಾವನದಲ್ಲಿದೆ ಎಂಬ ವಾದ ಆರಂಭವಾದಾಗಿನಿಂದ ಮಳಖೇಡದಲ್ಲಿಯ ವೃಂದಾವನವು ಮೂಲ ವೃಂದಾವನ ಅಲ್ಲ ಅದು ಮೃತ್ತಿಕಾ ವೃಂದಾವನ ಎಂಬ ವಾದವನ್ನು ಜಯತೀರ್ಥರ ಮೂಲ ವೃಂದಾವನವು ನವವೃಂದಾವನದಲ್ಲಿದೆ ಎಂಬುದಕ್ಕೆ ಪೂರಕವಾಗಿ ವಾದಿಸುತ್ತಾರೆ. ಮೃತ್ತಿಕಾ ವೃಂದಾವನಗಳನ್ನು ಮಾಡುವ ಸಂಪ್ರದಾಯವು ಶ್ರೀ ರಾಘವೇಂದ್ರ ಸ್ವಾಮಿಗಳ ನಂತರದಲ್ಲಿ ಬಂದಿದೆ. ಅದಕ್ಕಿಂತ ಮೊದಲು ಯಾವ ಯತಿಗಳ ವೃಂದಾವನವೂ ಮೃತ್ತಿಕಾ ವೃಂದಾವನವಾಗಿ ಮಾಡಲ್ಪಟ್ಟ ಉದಾಹರಣೆಗಳಿಲ್ಲ. ಮಳಖೇಡದಲ್ಲಿರುವ ಜಯತೀರ್ಥರ ವೃಂದಾವನವು ಮೃತ್ತಿಕಾ ವೃಂದಾವನ ಎಂದು ಹೇಳಲು ಸಬಲವಾದ ಕಾರಣ ಹೇಳಬೇಕಾಗುತ್ತದೆ. ಆದರೆ ಟಿ.ಕೆ. ವೇಣುಗೋಪಾಲದಾಸರಾಗಲೀ ಡಾ| ಬಿ.ಎನ್.ಕೆ. ರವರಾಗಲೀ ಸಬಲ ಕಾರಣ ಹೇಳಿಲ್ಲ.

ಮಳಖೇಡದಲ್ಲಿ ಟೀಕಾರಾಯರು ವೃಂದಾವನಸ್ಥರಾದ ಕಾಲದಿಂದ ಇಂದಿನವರೆಗೂ ಆರಾಧನೆ ಪೂಜೆ ಸುಧಾಮಂಗಳ ಇತ್ಯಾದಿಗಳು ನಿರಂತರ ನಡೆಯುತ್ತ ಬಂದಿವೆ. ಅಲ್ಲಿಯ ವೃಂದಾವನ ಮೂಲವಾಗಿರದೆ ನವವೃಂದಾವನದಲ್ಲಿಯ ವೃಂದಾವನ ಮೂಲವಾಗಿದ್ದರೆ ಅಲ್ಲಿಯೂ ಆರಾಧನೆ ಪೂಜೆ ಸುಧಾಮಂಗಳಾದಿಗಳು ನಡೆಯಬೇಕಾಗಿತ್ತು. ಮೂಲ ವೃಂದಾವನ-ವಿದ್ದಲ್ಲಿ ಈ ಕಾರ್ಯಗಳನ್ನು ಮಾಡದೇ ಕೇವಲ ಮೃತ್ತಿಕಾ ವೃಂದಾವನ ಸ್ಥಳದಲ್ಲಿ ಇವೆಲ್ಲ ನಡೆದವು ಎಂದು ಹೇಳುವುದು ಅಸಂಗತವಾಗುವುದು.

ಮೇಲೆ ಹೇಳಿದ ಜಯತೀರ್ಥರ ಚರಿತ್ರೆ ಹಾಗೂ ಸ್ತೋತ್ರಗಳಲ್ಲಿ ಮಳಖೇಡದಲ್ಲಿಯ ವೃಂದಾವನವನ್ನಲ್ಲದೆ ಬೇರೊಂದು ಕಡೆಗೂ ಅವರ ವೃಂದಾವನವಿದ್ದಿದ್ದರೆ ಅದರ ಉಲ್ಲೇಖವು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಬಂದೇ ಬರುತ್ತಿತ್ತು. ಅಂತಹ ಯಾವ ಉಲ್ಲೇಖವೂ ಬಾರದೇ ಇರುವುದು ಬೇರೇ ಇನ್ನೊಂದೆಡೆ ವೃಂದಾವನ ಇರಲೇ ಇಲ್ಲ ಎಂಬುದನ್ನು ಸೂಚಿಸುವುದು.

ಇದ್ದರೂ ಅದು ಈ ಚರಿತ್ರೆಕಾರರಿಗೆ ತಿಳಿದಿರಲಿಲ್ಲ ಅಥವಾ ಅವರು ಅದನ್ನು ಉಲ್ಲೇಖಿಸಲಿಲ್ಲ ಎಂದು ಹೇಳುವುದೂ ಅಸಂಗತವಾಗುವುದು. ಆದ್ದರಿಂದ ಮಳಖೇಡದಲ್ಲಿ ಮೃತ್ತಿಕಾ ವೃಂದಾವನ ಇದೆ ಎಂಬ ಕಲ್ಪನೆ ಅತ್ಯಂತ ಅಸಂಗತವಾದ ಕಲ್ಪನೆ.

ಶ್ರೀ ಜಯತೀರ್ಥರ ಮೂಲ ವೃಂದಾವನವು ನವವೃಂದಾವನಗಳಲ್ಲಿ ಒಂದಾಗಿದೆ ಎಂದು ಹೇಳುವವರು ಕೊಡುವ ಕಾರಣಗಳು ಸಮರ್ಪಕ-ವಾಗಿಲ್ಲವೆಂದು ಈ ಕೆಳಗೆ ತೋರಿಸಲಾಗಿದೆ –

1. ಶ್ರೀಜಗನ್ನಾಥ ಯತಿಗಳ 'ಕಿಟಿತಟಿನಿ' ಎಂಬ ಗ್ರಂಥವು ಚಾರಿತ್ರಕ ಗ್ರಂಥವೇ ಅಥವಾ ವೇದಾಂತ ಗ್ರಂಥವೇ. ಇದು ಹಸ್ತ ಲಿಖಿತ ರೂಪದಲ್ಲಾದರೂ ಉಪಲಬ್ಧವಿದೆಯೇ. ಇಲ್ಲವೇ. ಎಂಬುದನ್ನು ಸ್ಪಷ್ಟ ಪಡಿಸದೇ ಇರುವುದರಿಂದ ಈ ಶ್ಲೋಕವನ್ನು ಪ್ರಮಾಣ ಎಂಬುದಾಗಿ ಸ್ವೀಕರಿಸಲು ಬರುವುದಿಲ್ಲ. ಜಗನ್ನಾಥಯತಿಗಳು ಮಾನ್ಯಯತಿ ಗಳಾಗಿದ್ದರೂ ಅವರ ಹೆಸರಿನಲ್ಲಿ ಪ್ರಚಲಿತವಿರುವ ಈ ಶ್ಲೋಕ ಅನೇಕ ಇತರ ಪ್ರಮಾಣಗಳಿಗೆ ವಿರುದ್ಧವಾದದ್ದರಿಂದ ಪ್ರಮಾಣವೆಂದು ಸ್ವೀಕರಿಸಲು ಬರುವುದಿಲ್ಲ.

2. ಶ್ರೀಕೃಷ್ಣದೇವರಾಯ ಬರೆದ ರಜತ ಶಾಸನವು ತಾಮ್ರದ್ದೋ ಬೆಳ್ಳಿಯದೋ ಶಿಲಾಶಾಸನ ರೂಪದ್ದೋ ಎಂಬುದು ಸ್ಪಷ್ಟವಾಗಿಲ್ಲ. ರಜತಶಾಸನ ಎಂದು ಕರೆದಿರುವುದರಿಂದ ರಜತ ಪತ್ರದಲ್ಲಿದೆ ಎಂದು ಊಹಿಸುವುದಾದರೆ ರಜತ ಪತ್ರದ ಶಾಸನಗಳ ಸಂಪ್ರದಾಯವು ಬೇರೆ ಎಲ್ಲೂ ಇಲ್ಲದ್ದರಿಂದ ಇಂತಹ ಊಹೆ ಅಸಂಗತವಾಗುವುದು. ಅಲ್ಲದೆ ಸ್ವತಃ ಶ್ರೀಕೃಷ್ಣದೇವರಾಯನು ಈ ಶಾಸನವನ್ನು ಬರೆದನೋ ಅಥವಾ ಬರೆಸಿದನೋ ಎಂಬುದಕ್ಕೆ ಯಾವ ಆಧಾರಗಳಿಲ್ಲ. ಶಾಸನಗಳನ್ನು ಬರೆಯುವ ಒಂದು ವಿಶಿಷ್ಟವಾದ ಶೈಲಿ ಇದೆ. ಆ ಶೈಲಿಯಲ್ಲಿ ಈ

ಶಾಸನವು ಇಲ್ಲ. ಆದ್ದರಿಂದ ಈ ಶಾಸನ ಪ್ರಮಾಣವನ್ನು ಒಪ್ಪಲು ಬರುವುದಿಲ್ಲ.

3. ತೀರ್ಥಪ್ರಬಂಧದ ವ್ಯಾಖ್ಯಾನಕಾರರಾದ ಶ್ರೀನಾರಾಯಣಾಚಾರ್ಯರು ಶ್ರೀ ಟೀಕಾಚಾರ್ಯರನ್ನು ಸ್ತುತಿಸುವ ಸ್ತೋತ್ರವನ್ನು ವ್ಯಾಖ್ಯಾನಿಸುವಾಗ "ಗಜಗಹ್ವರೇ ಜಯತೀರ್ಥಂ ವರ್ಣಯತಿ" ಎಂಬ ಉಲ್ಲೇಖವನ್ನು ಮಾಡಿರುವರು ಎಂಬ ವಾದವು ಸಮರ್ಪಕವಾಗಿಲ್ಲ. ಈ ವಾಕ್ಯದಲ್ಲಿರುವ 'ಗಜಗಹ್ವರೆ' ಎಂಬ ಶಬ್ದ ಕೆಲವು ಹಸ್ತ ಪ್ರತಿಗಳಲ್ಲಿ ಇಲ್ಲ.

4. ಡಾ|| ಬಿ.ಎನ್.ಕೆ. ಶರ್ಮಾರವರು ತಮ್ಮ ಗ್ರಂಥವಾದ ದ್ವೈತ ವಾಙ್ಮಯ ಇತಿಹಾಸದ ಮೊದಲ ಎರಡನೆಯ ಹಾಗೂ ಮೂರನೆಯ ಆವೃತ್ತಿಗಳಲ್ಲಿ ನವವೃಂದಾವನದ ಫೋಟೋ ಹಾಕಿದ್ದಾರೆ. ಅದರಲ್ಲಿ ರಘುವರ್ಯರ ವೃಂದಾವನಕ್ಕೆ ರಘುವರ್ಯರೆಂದೇ ಉಲ್ಲೇಖಿಸಿದ್ದಾರೆ. ಜಯತೀರ್ಥರ ಉಲ್ಲೇಖವಿಲ್ಲ. ತಮ್ಮ Philosophy of Madwacharya ಎಂಬ ಗ್ರಂಥದ ಮೊದಲನೆಯ ಆವೃತ್ತಿಯಲ್ಲಿ ಶ್ರೀಟೀಕಾಚಾರ್ಯರ ವೃಂದಾವನ ಮಳಖೇಡದಲ್ಲಿದೆ ಎಂದು ಬರೆದಿರುವರು. ಆದರೆ ಎರಡನೇ ಆವೃತ್ತಿಯಲ್ಲಿ ಶ್ರೀಟೀಕಾಚಾರ್ಯರು ಅನೇಕ ವರ್ಷ ಮಳಖೇಡ ದಲ್ಲಿಯೇ ಇದ್ದು ಕೊನೆಕಾಲದಲ್ಲಿ ಆನೆಗೊಂದಿಗೆ ಹೊರಟರೆಂದು ಅಲ್ಲಿಯೇ ನವವೃಂದಾವನದಲ್ಲಿರುವ ಶ್ರೀಪದ್ಮನಾಭತೀರ್ಥರ ವೃಂದಾವನದ ಎದುರಿಗೆ ವೃಂದಾವನಸ್ಥರಾದರೆಂದು ಬರೆದಿದ್ದಾರೆ. ಮಳಖೇಡ ಬಿಟ್ಟು ಶ್ರೀಜಯತೀರ್ಥರು ಆನೆಗೊಂದಿಗೆ ಹೋಗಲು ಕಾರಣವೇನೆಂಬುದನ್ನು ಹೇಳಿಲ್ಲ. Later he seems to have moved towards Anegundi ಎಂದು ಮಾತ್ರ ಬರೆದಿದ್ದಾರೆ. ಅಲ್ಲದೆ ಈ ಮೊದಲು ಅವರು ಫೋಟೋಗಳಲ್ಲಿ ತೋರಿಸಿದ ರಘುವರ್ಯರ ವೃಂದಾವನದಲ್ಲಿದ್ದ ರಘುವರ್ಯರು ಅಲ್ಲಿ ಇಲ್ಲವಾದರೆ ಎಲ್ಲಿಗೆ ಅವರು

ರವಾನೆಯಾಗಿದ್ದಾರೆ ಎಂಬುದನ್ನೂ ತಿಳಿಸಿಲ್ಲ. ಆದ್ದರಿಂದ ಈ ಅಭಿಪ್ರಾಯ ವಿಶ್ವಾಸಾರ್ಹವಲ್ಲ. ಬಿ.ಎನ್.ಕೆ ರವರು ರಘುವರ್ಯರ ವೃಂದಾವನವನ್ನು ಜಯತೀರ್ಥರ ವೃಂದಾವನವೆಂದು ಗುರುತಿಸಲು ಒಂದೇ ಕಾರಣ ಕೊಡುತ್ತಾರೆ. ಆ ಕಾರಣವೇನೆಂದರೆ ಆ ವೃಂದಾವನದ ಮೇಲೆ ಎರಡು ಮೂರ್ತಿಗಳ ಚಿತ್ರಗಳಿವೆ. ಒಂದರ ಕೈಯಲ್ಲಿ ಖಡ್ಗ ಮತ್ತೊಂದರ ಕೈಯಲ್ಲಿ ಕಮಂಡಲವು ಇರುವುದು. ಇದು ಜಯತೀರ್ಥರ ಪೂರ್ವಾಶ್ರಮದ ಮತ್ತು ಆಶ್ರಮ ನಂತರದ ಪ್ರತೀಕಗಳೆಂದು ಊಹಿಸುತ್ತಾರೆ. ಈ ಚಿತ್ರಗಳು ಸ್ಪಷ್ಟವಾಗಿಲ್ಲ. ಕೇವಲ ರೇಖಾ ಚಿತ್ರರೂಪಗಳು. ಯಾವ ವೃಂದಾವನಗಳ ಮೇಲೆಯೂ ಪೂರ್ವಾಶ್ರಮದ ಚಿತ್ರಗಳಿರುವುದಿಲ್ಲ. ಈ ಊಹೆ ಅಸಂಗತವಾಗುವುದು.

ಈ ಎಲ್ಲ ಸಾಧಕ ಬಾಧಕ ಪ್ರಮಾಣಗಳನ್ನು ಈ ಪುಸ್ತಕದಲ್ಲಿ ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯರು ಸಂಗ್ರಹಿಸಿ ಶ್ರೀಜಯತೀರ್ಥರ ವೃಂದಾವನವು ಮಳಖೇಡದಲ್ಲಿಯೇ ಇದೆ ಎಂದು ಸಮರ್ಥಿಸಿದ್ದಾರೆ. ತಮ್ಮ ಸಮರ್ಥನೆಯನ್ನು ಅನೇಕ ಹಿರಿಯ ವಿದ್ವಾಂಸರಿಗೆ ತೋರಿಸಿ ಅವರ ಅಭಿಪ್ರಾಯಗಳನ್ನು ಪಡೆದಿದ್ದಾರೆ. ಆದ್ದರಿಂದ ಈ ವಾದ ವಿವಾದವನ್ನು ಇಲ್ಲಿಗೆ ವಿರಾಮಗೊಳಿಸಿ ಶ್ರೀಜಯತೀರ್ಥರ ಅನುಗ್ರಹಕ್ಕೆ ಪಾತ್ರರಾಗುವುದು ಅಗತ್ಯವಾಗಿದೆ.

ಪ್ರೊ. ಕೆ.ಟಿ. ಪಾಂಡುರಂಗಿ
ಬೆಂಗಳೂರು

ವಿದ್ಯಾಗುರುಗಳ ಆಶೀರ್ವಾದ

ಸತ್ಯದ ಹುಡುಕಾಟ ಸಮುದ್ರಮಥನದಂತೆ. ಮೊದಲು ಸಿಗುವುದು ನಂಜು (ವಿಷ). ಪ್ರಾಯಃ ಆಧುನಿಕ ಸಂಶೋಧನೆಯಲ್ಲಿ ನಂಜುಂಡರೇ ಹೆಚ್ಚು. ಯಾವುದೇ ವಿಷಯವನ್ನು ಅನ್ಯಥಾ ತಿಳಿಯಬಾರದೆಂದು ಶ್ರೀಮಧ್ವರ ಕಟ್ಟಪ್ಪಣೆ. ನನ್ನ ಶಿಷ್ಯ ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯ ಅಮೃತ (ಸತ್ಯ) ಸಿಗುವವರೆಗೆ ಮಾಡಿರುವ ಈ ಮಂಥನ ಕಾರ್ಯ ಸಾರ್ಥಕವಾಗಿದೆ. ಶ್ರೀ ಜಯತೀರ್ಥ ಗುರುಸಾರ್ವಭೌಮರ ಅನುಗ್ರಹ ಸದಾ ಇರಲೆಂದು ಪ್ರಾರ್ಥಿಸುವೆ.

ಪಂ. ಶ್ರೀ. ಜಯತೀರ್ಥಾಚಾರ್ಯ ಪಗಡಾಲ

ಲಿಂಗಪಲ್ಲಿ ಉತ್ತರಾದಿಮಠ, ಹೈದರಾಬಾದ್.

ಪ್ರಸ್ತಾವನೆ

ಶ್ರೀಮಜ್ಜಯತೀರ್ಥರು ಶ್ರೀಜಯರಾಯರು ಶ್ರೀಮಟ್ಟೀಕಾಕೃತ್ಪಾದರು ಟೀಕಾಚಾರ್ಯರು ಕಾಗಿನೀ ತಟ ನಿವಾಸಿ ಮಳಖೇಡದ ಮಹಾಮಹಿಮರು ಇತ್ಯಾದಿಯಾಗಿ ಲೋಕ ಪ್ರಸಿದ್ಧರಾದವರು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀಮದಕ್ಷೋಭ್ಯತೀರ್ಥರ ಕರಕಮಲ ಸಂಜಾತರಾದ ಶ್ರೀಮಜ್ಜಯತೀರ್ಥರು. ಹಂಸನಾಮಕ ಪರಮಾತ್ಮನ ಸಾಕ್ಷಾತ್ ಪರಂಪರೆಯ ವೇದಾಂತ ಸಾಮ್ರಾಜ್ಯದಲ್ಲಿ ದೇವತೆಗಳ ಮಧ್ಯೆ ಇಂದ್ರನಂತೆ ಮೆರೆದವರು. ಅಪರೋಕ್ಷಜ್ಞಾನಿಗಳೆಂದು ಪ್ರಸಿದ್ಧರಾದ ಶ್ರೀ ಶ್ರೀಪಾದರಾಜರು ಶ್ರೀವ್ಯಾಸತೀರ್ಥರು ಶ್ರೀವಿಜಯೀಂದ್ರರು ಶ್ರೀವಾದಿರಾಜರು ಶ್ರೀರಘೂತ್ತಮರು ಶ್ರೀರಾಘವೇಂದ್ರರು ಶ್ರೀವಿದ್ಯಾಧೀಶರು ಶ್ರೀಸತ್ಯಭೋಧರೇ ಮೊದಲಾದವರಿಂದ ಗೇಗೀಯ ಮಾನರಾದವರು. ವೈರಾಗ್ಯದ ಸಾಕಾರ ಮೂರ್ತಿಗಳು. ಶ್ರೀಮದಾನಂದತೀರ್ಥರ ಅನೇಕ ಗ್ರಂಥಗಳಿಗೆ ಅದ್ಭುತ ಅಚ್ಛೇದ್ಯ ಅಭೇದ್ಯ ಟೀಕೆಗಳನ್ನು ರಚಿಸಿದ ಮಹಾನ್ ಟೀಕಾಕಾರರು. ಶಿಷ್ಯರು ಮಧುಕರ ವೃತ್ತಿಯಿಂದ ಬೇಡಿ ತಂದ ಜೋಳದ ನುಚ್ಚನ್ನೇ ವೈಶ್ವಾನರ ಪೂಜೆಯನ್ನಾಗಿಸಿ ಯರಗೋಳ ಗುಹೆಯಲ್ಲಿ ಗ್ರಂಥರಚನಾ ತಪಸ್ಸನ್ನು ಆಚರಿಸಿದ ಧೀಮಂತರು. ಮಾಯ್ಗೋಮಾಯ್ಗಳಿಗೆ ಕಡು ಗರ್ಜಿಸುವ ಕೇಸರಿಯಾಗಿ ವೇದಾಂಬುಧಿಯೋಳು ಸುಧೆ ತೆಗೆದು ಸಜ್ಜನರಿಗೆ ಉಣಿಸಿದ ಧೀರರು. ಶ್ರೀಮದಾಚಾರ್ಯರ ನಂತರ ಇತಿಹಾಸದಲ್ಲಿ ಇಂತಹ ವ್ಯಕ್ತಿತ್ವ ಅಪರೂಪ. " ಈ ಮುನಿ ಒಲಿದರೆ ಅವನೆ ಭಾಗ್ಯವಂತ", "ಸೃಷ್ಟಿಯೊಳಗೆ ಇವರ ಸಂದರುಶನವಾಗದೆ ಸ್ಪಷ್ಟ ಜ್ಞಾನ ಪುಟ್ಟದು" ಎನ್ನುತ್ತದೆ ಮಹಾತ್ಮರ ಅನುಭವದ ವಾಣಿ.

ಶ್ರೀಮಜ್ಜಯತೀರ್ಥರು ಇಡೀ ತಮ್ಮ ಜೀವನದಲ್ಲಿ ಗುರುಗಳಾದ ಶ್ರೀಮದಕ್ಷೋಭ್ಯತೀರ್ಥರಲ್ಲಿ ಮಾಡಿದ ನಿರ್ವ್ಯಾಜ ಅಮಲ ಭಕ್ತಿ ಅವರ ಜೀವನ

ಚರಿತ್ರೆ ಹಾಗೂ ಗ್ರಂಥಗಳಲ್ಲಿ ಸ್ಫುಟವಾಗಿ ಕಂಡು ಬರುತ್ತದೆ. ಗುರುಗಳಾದ ಶ್ರೀವಾಯುದೇವರ ಹಾಗೂ ಶ್ರೀಮದಕ್ಷೋಭ್ಯರ ಆಜ್ಞಾಪ್ರಕಾರ ತಮ್ಮ ಇಹ ಜೀವನದ ಮಹತ್ಕಾರ್ಯ ಮುಗಿಸಿದ ಮೇಲೆಯೂ ತಮ್ಮ ಗುರುಭಕ್ತಿ ದ್ಯೋತಕವಾಗಿ ಗುರುಗಳಾದ ಶ್ರೀಮದಕ್ಷೋಭ್ಯತೀರ್ಥರ ಮೂಲ ವೃಂದಾವನ ಸನ್ನಿಧಾನದಲ್ಲೇ ತಾವೂ ವೃಂದಾವನಸ್ಥರಾಗಬೇಕೆಂದು ಬಯಸಿ ಉತ್ತರ ಭಾರತದಿಂದ ದಕ್ಷಿಣಕ್ಕೆ ಪ್ರಯಾಣ ಬೆಳೆಸಿ ಮಳಖೇಡದಲ್ಲಿರುವ ತಮ್ಮ ಗುರುಗಳ ವೃಂದಾವನದ ಸನ್ನಿಧಾನದಲ್ಲಿ ಕಾಗಿಣೀ ತೀರದಲ್ಲಿ ವೃಂದಾವನಸ್ಥರಾದದ್ದು ಸರ್ವವಿದಿತ ಲೋಕಪ್ರಸಿದ್ಧ ಹಾಗೂ ಅನೇಕ ಪ್ರಮಾಣಗಳಿಂದ ಪುಷ್ಟ.

ಸತ್ಸಂಪ್ರದಾಯ ಪರಂಪರಾ ಪ್ರಾಪ್ತವಾದ ಪ್ರಮಾಣ ಸಿದ್ಧವಾದ ಸರ್ವವಿದಿತವಾದ ಸರ್ವಮತೀಯರಿಂದಲೂ ಏಕಮತೀಯವಾದ ವಿವಾದವೇ ಇಲ್ಲದ ವಿಷಯಗಳನ್ನೇ ಸಂಶೋಧನೆಯ ಸೆರಗಿನಲ್ಲಿ ಎಳೆದು ಪ್ರಾಚೀನ ಪ್ರಮಾಣಗಳನ್ನು ಅಲ್ಲಗಳೆದು ಮತ್ಯೈಕ್ಯವನ್ನು ಧ್ವಂಸಗೊಳಿಸಿ ವಿವಾದವೆಬ್ಬಿಸಿ ಜನಸಾಮಾನ್ಯರಲ್ಲಿ ಸಂಶಯ ಬೀಜಬಿತ್ತಿ ಸ್ವಾರ್ಥಸಾಧಿಸುವ ಪ್ರವೃತ್ತಿ ತುಂಬಾ ಇತ್ತೀಚಿನದು. ಪ್ರಚಾರಮಾಧ್ಯಮದ ಓಟದಲ್ಲಿ ತುಂಬಾ ಅಪಾಯಕಾರಿ ಪ್ರಭಾವವುಳ್ಳದ್ದು. ಇದಕ್ಕೊಂದು ಪ್ರತ್ಯಕ್ಷ ದೃಷ್ಟಾಂತ "ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿಲ್ಲ", "ನವ ವೃಂದಾವನದಲ್ಲಿಯ ಶ್ರೀರಘುವರ್ಯರ ವೃಂದಾವನವೇ ಶ್ರೀಜಯತೀರ್ಥರ ಮೂಲ ವೃಂದಾವನ" ಎಂಬ ಹೊಸ ಶೋಧನೆ.

ಯಾವ ವ್ಯಕ್ತಿಯನ್ನು ದೂಷಣೆ ಮಾಡುವ (ವೈಯಕ್ತಿಕವಾಗಿ) ಗೋಜಿಗೆ ಹೋಗದೆ ಇರುವ ಪ್ರಾಮಾಣಿಕ ವಿಷಯಗಳನ್ನು ಸಜ್ಜನರ ಮುಂದೆ ತೆರೆದಿಡುವ ಪ್ರಯತ್ನ ಇಲ್ಲಿದೆ. ಈ ವಿಷಯದ ಬಗ್ಗೆ ಕೆಲವರು ಮಾಡಿರುವ ಆಕ್ಷೇಪಗಳಿಗೆ ಉತ್ತರಿಸಿರುವುದು ಪ್ರಾಸಂಗಿಕ. ಸತ್ಯಾಸತ್ಯತೆಗಳ ನಿರ್ಣಯ ನಿರ್ಮತ್ಸರರಾದ ಸಜ್ಜನರಿಗೆ ಬಿಟ್ಟದ್ದು. ಆದರೆ ಸತ್ಯ ಯಾವಾಗಲೂ ಕಟುವಾಗಿರುತ್ತದೆ ಎಂಬುದನ್ನು ಮಾತ್ರ ಸ್ಮರಣೆಗೆ ತರ ಬಯಸುತ್ತೇನೆ.

ಪೀಠಿಕೆ

ಶ್ರೀಮಜ್ಜಯತೀರ್ಥರು ವೃಂದಾವನ ಪ್ರವೇಶ ಮಾಡಿದ್ದು ಕ್ರಿ.ಶ. ೧೩೮೮. ವೃಂದಾವನ ಪ್ರವೇಶ ಮಾಡಿ ಆರು ಶತಮಾನಗಳು ದಾಟಿವೆ. ಅಂದಿನಿಂದಲೂ ಆಬಾಲವೃದ್ಧರಿಗೂ ಖಚಿತವಾಗಿ ಗೊತ್ತಿರುವ ಸುಪ್ರಸಿದ್ಧ ವಿಷಯ ತಮ್ಮ ಗುರುಗಳಾದ ಶ್ರೀಮದಕ್ಷೋಭ್ಯರ ಸನ್ನಿಧಾನ ಉಳ್ಳ ಮಳಖೇಡದಲ್ಲಿಯೇ ಎಂಬುದು. ಹಿಂದಿನಿಂದಲೂ ಸಕಲ ಮಾಧ್ವ ಪೀಠಾಧಿಪತಿಗಳೂ, ದಾಸವರೇಣ್ಯರೂ, ಮಹನೀಯರೂ, ಶಿಷ್ಯಮಂಡಲಿಗಳೂ ಶ್ರೀಮಜ್ಜಯತೀರ್ಥರ ದರ್ಶನ ಪಡೆಯಲು ಮಳಖೇಡಕ್ಕೆ ಬಂದಿರುವ ಅನ್ಯ ಕಡೆ ಹೋಗದಿರುವ ದಾಖಲೆಗಳೂ ಅನೇಕ. ಮಳಖೇಡದಲ್ಲಿಯೇ ಸೇವಾ ಸೂತ್ರಗಳನ್ನು ಮಾಡಿ ಶ್ರೀ ಟೀಕಾರಾಯರ ಅನುಗ್ರಹಕ್ಕೆ ಪಾತ್ರರಾದ ಭಕ್ತರ ಸಂಖ್ಯೆಯೂ ಅಪಾರ. ಹೀಗಾಗಿ ಶ್ರೀಮಜ್ಜಯತೀರ್ಥರ ಮೂಲ ವೃಂದಾವನದ ಬಗ್ಗೆ ವಿವಾದವೇ ಇಲ್ಲ. ಹೀಗಿದ್ದರೂ ಕೆಲವರು ಈಚೀಚೆಗೆ ಕೆಲವು ದಶಕಗಳಿಂದ ವಿವಾದವೆಬ್ಬಿಸುವ ಪ್ರಯತ್ನ ನಡೆಸಿ ಯಾವ ಆಧಾರಗಳಿಲ್ಲದೆ ನವವೃಂದಾವನದಲ್ಲಿರುವ ಶ್ರೀರಘುವರ್ಯತೀರ್ಥರ ವೃಂದಾವನವೇ ಶ್ರೀಮಜ್ಜಯತೀರ್ಥರ ಮೂಲ ವೃಂದಾವನವೆಂಬ ಆಗ್ರಹದಲ್ಲಿ ಮುಳುಗಿದ್ದಾರೆ. ಇದರಿಂದ ಅವರಿಗೆ ಲಾಭವೇನು ? ಎಂಬ ಪ್ರಶ್ನೆ ಸಹಜ. ಅವರ ಮನದ ಆಳದಲ್ಲಿ ಏನೇ ಉದ್ದೇಶ್ಯವಿದ್ದರೂ ಈ ಪ್ರಶ್ನೆ ಕೇಳಿದಾಗ "ಸತ್ಯವನ್ನು ಸಜ್ಜನರ ಮುಂದೆ ತೆರೆದಿಡುವುದೇ ಉದ್ದೇಶ್ಯ" ಎಂಬುದು ಅವರ ಉತ್ತರ. ಹಾಗಾದರೆ ಅವರ ಈ ಸತ್ಯಸಂಗತಿಗೆ ಅವರಲ್ಲೇ ಇರುವ ಪ್ರಮಾಣಗಳೇನು ? ಅವುಗಳ ಸಂಖ್ಯೆ ಎಷ್ಟು? ಅವುಗಳ ನಿರ್ದುಷ್ಟತೆ ಎಷ್ಟು? ಯಾವುದು ಸತ್ಯ ? ಈ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಾಮಾಣಿಕ ಪ್ರಯತ್ನ ಹಾಗೂ ವಿಮರ್ಶೆ ಇಲ್ಲಿದೆ. ಸಹೃದಯರಾದ ಸಜ್ಜನರು ನಿರ್ಮತ್ಸರರಾಗಿ ಇದನ್ನು ಅವಲೋಕಿಸಿದರೆ ನನ್ನ ಪ್ರಯತ್ನ ಸಾರ್ಥಕ. ಪ್ರಾಚೀನರ ಸ್ವೋತ್ತಮರ ಪ್ರಾಮಾಣಿಕ ನುಡಿಗಳಿಗೆ ವಿರುದ್ಧ ನಡೆದರೆ ಅನರ್ಥಕಾದಿದೆ ಎಂಬ ಭಯ ಹುಟ್ಟಿಸಿದರೆ ಈ ನನ್ನ ವಿಮರ್ಶೆಗೆ ಅದುವೇ ಪಾರಿತೋಷಕ.

ಶ್ರೀಮಜ್ಜಯತೀರ್ಥರ ಮೂಲ ವೃಂದಾವನದ ಬಗ್ಗೆ ಪ್ರಮಾಣಗಳು ಹಾಗೂ ಒಕ್ಕಣಿಕೆಗಳು

ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿದೆ ಎನ್ನುವುದಕ್ಕೆ ಅವರು ವೃಂದಾವನಸ್ಥರಾದ ದಿನದಿಂದ ಆರು ಶತಮಾನಗಳಿಂದ ಕಾಲಕಾಲಕ್ಕೆ (ಎಲ್ಲ ಮಾಧ್ವ ಮಠದ) ಪ್ರಾಚೀನರಿಂದ ಹಿಡಿದು ಅರ್ವಾಚೀನರ ವರೆಗೆ ದಾಖಲಿಸಿರುವ ಪ್ರಮಾಣಗಳನ್ನು ಸಂಗ್ರಹಿಸಲಾಗಿದೆ. ಅವುಗಳಲ್ಲಿ ಕೆಲವು ಈ ರೀತಿಯಾಗಿವೆ –

1. ಶ್ರೀ. ವ್ಯಾಸರಾಜ ಗುರುಸಾರ್ವಭೌಮರ ಸಾಕ್ಷಾತ್ ವಿದ್ಯಾ ಶಿಷ್ಯರಾದ ಶ್ರೀವಾದಿರಾಜತೀರ್ಥ ಶ್ರೀಪಾದಂಗಳವರ ಆಪ್ತ ಸ್ನೇಹಿತರಾದ ಸ್ವಯಂ ತಪಸ್ವಿಗಳಾದ ಶ್ರೀ. ಕೂಡ್ಲಿ ಆರ್ಯ ಅಕ್ಷೋಭ್ಯತೀರ್ಥ ಸಂಸ್ಥಾನಾಧಿಪತಿಗಳಾಗಿದ್ದ ಶ್ರೀನಾರಾಯಣತೀರ್ಥರ 'ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿದೆ' ಎಂಬ ಕೈಬರಹದ ದಾಖಲೆ ಇದೆ.[1]
(ನೋಡಿರಿ ಪರಿಶಿಷ್ಟ-2)

2. ಶ್ರೀಮದುತ್ತರಾದಿ ಮಠದ ಶ್ರೀ ಸತ್ಯನಿಧಿತೀರ್ಥ ಶ್ರೀಪಾದಂಗಳವರ (ಕ್ರಿ.ಶ. 1638–1660) (ಶ್ರೀ. ರಾಘವೇಂದ್ರ ಸ್ವಾಮಿಗಳವರ ಸಮಕಾಲೀನರು) ಕಾಲದಲ್ಲಿ ರಚಿತವಾಗಿದೆ ಎಂದು ಹೇಳಲ್ಪಡುವ ಗ್ರಂಥ "ಗುರುಚರ್ಯಾ" (ಈ ಗ್ರಂಥದ ಬಗ್ಗೆ ಅದರ ಮೂಲ ಪ್ರತಿ ಬಗ್ಗೆ

---

1. ಪಂ. ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯರ – "ಮಳಖೇಡದ ಮಹಾಮಹಿಮರು" ಹಾಗೂ
ಡಾ। ಪ್ರಭಂಜನಾಚಾರ್ಯ ವ್ಯಾಸನಕೆರೆಯವರ 'ಜಯತೀರ್ಥದರ್ಶನ' ಮತ್ತು ತತ್ವವಾದ 1980 ನವೆಂಬರ್
ಈ ದಾಖಲೆ (ಕೈ ಬರಹ) ಕ್ರಿ.ಶ. 1545 ರಷ್ಟು ಹಳೆಯದು.

ಕೃತಿಕಾರರ ಬಗ್ಗೆ ಸಂಶೋಧನೆ ಆಗಬೇಕಿದೆ.) ಈ ಪ್ರಾಚೀನ ಗ್ರಂಥದಲ್ಲೂ -

''ವಿಭವಾಷಾಢ ಕೃಷ್ಣಾಯಾಂ ಪಂಚಮ್ಯಾಂ ಜಯತೀರ್ಥರಾಟ್ ।
ಭೇಜೇ ವಿಷ್ಣುಪದಂ ತೀರೇ ಕಾಗಿನ್ಯಾ ಮಳಖೇಡಗೇ ॥

ಎಂದಿದೆ.

(ಇದರ ಹಸ್ತಪ್ರತಿ ನಂಜನಗೂಡು ಪರಿಮಳ ಸಂಶೋಧನ ಮಂದಿರದಲ್ಲಿದೆ ಎಂದು ಡಾ॥ ಬಿ.ಎನ್.ಕೆ. ಶರ್ಮಾ ತಿಳಿಸಿದ್ದಾರೆ.)

3. ದಿವಾನ್ ಶ್ರೀ ಖಂಡೇರಾಯನ ಪ್ರಾರ್ಥನೆ ಮೇರೆಗೆ ಶ್ರೀ ಸತ್ಯಬೋಧತೀರ್ಥ ಶ್ರೀಪಾದಂಗಳವರೇ ಹೇಳಿ ಬರೆಸಿದ ಶ್ರೀ ಪೂರ್ಣಬೋಧ ಗುರುವಂಶ ಕಥಾಕಲ್ಪತರು [2] ಎಂಬ ಗ್ರಂಥದಲ್ಲಿ

''ತತಸ್ತು ಜಯತೀರ್ಥಾಸ್ತೇ ಜಿತ್ವಾ ವಾದಿಗಜಾನ್ ಬಹೂನ್ ।
ವೃಷ್ಟಿಖೇಟಂ ಸಮಾಗತ್ಯ ಗುರೋ ರ್ವೃಂದಾವನಾಂತಿಕೇ'' ॥
ವಿದ್ಯಾಧಿರಾಜತೀರ್ಥೇಭ್ಯೋ ದತ್ವಾ ಸಂಸ್ಥಾನಮುತ್ತಮಂ ।
ವಿಭವಾಷಾಢ ಕೃಷ್ಣಾಹಿದಿನೇ ಹರಿಪದಂ ಯಯುಃ ॥

ಎಂದಿದೆ.

4. ಶ್ರೀ. ರಘುನಾಥತೀರ್ಥರಿಂದ ರಚಿತವೆಂದು ಪ್ರಾಚೀನರಿಂದಲೂ ಉಲ್ಲೇಖಿಸುತ್ತ ಬಂದಿರುವ ಶ್ಲೋಕದಲ್ಲಿ

---

2. ಶ್ರೀ ಸತ್ಯಬೋಧರ ಕಾಲದಲ್ಲಿ (ಕ್ರಿ.ಶ. 1744-84) ರಚಿತವಾದ ಈ ಕೃತಿಯು ಅನೇಕ ವಿದ್ವಾಂಸರಿಂದ ಸಂಶೋಧಕರಿಂದ ಅಂದಿನಿಂದಲೂ ಪ್ರಾಮಾಣಿಕವೆಂದು ಸ್ವೀಕರಿಸುತ್ತ ಬರಲಾಗಿದೆ. ತೀರ ಇತ್ತೀಚೆಗೆ ಕೆಲವರು ಈ ಕೃತಿಯನ್ನು 'ಕಲ್ಪಿತ ಗುರುಕಥಾ' ಎಂದು ಮೊದಲಿಸಿದ್ದಾರೆ. ತಾವೇ ಈ ಕೃತಿಯಲ್ಲಿಯ ಅನೇಕ ವಿಚಾರಗಳನ್ನು ಪ್ರಾಮಾಣಿಕವೆಂದು ಸ್ವೀಕರಿಸಿ ಕೇವಲ ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕೋಸ್ಕರ ಇಂತಹ 'ಕಲ್ಪನಾ ಗೌರವ ದೋಷ' ಕೊಡುವುದಾದರೆ ಅನೇಕ ಪ್ರಾಚೀನ ಕೃತಿಗಳ ಮೇಲೂ ಈ ದೋಷ ಬಂದು ಅವರಿಗೇ ಬಾಧಕ ಎಂಬುದನ್ನು ಮರೆತಂತಿದೆ. (ಈ ಕೃತಿಯ ಹಸ್ತಪ್ರತಿಗಳಿವೆ).

"ಕಾಗಿನೀತಟನೀತೀರಮಂದಿರಂ ಯತಿಶೇಖರಮ್ ।
ಶ್ರೀಗುರುಂ ಜಯತೀರ್ಥಾಖ್ಯಂ ಸಾದರಂ ನೌಮಿ ಸಂತತಮ್" ।

ಎಂದು ಇದೆ.[3]

5. ಶ್ರೀಮತ್ಸತ್ಯಸಂಧವಿಜಯ ಕಾವ್ಯದಲ್ಲೂ (5/26) (ಕ್ರಿ.ಶ. 1800)

"ದುರ್ಗೋಲ್ಲಸನ್ಮಲಯಖೇಟಪುರೋಪಕಂಠ
ಸತ್ಕಾಗಿನೀಪುಳಿನಸುಂದರಮಂದಿರಸ್ಥಮ್ ।
ಅಕ್ಷೋಭ್ಯತೀರ್ಥಜಯರಾಟ್‌ರಘುನಾಥತೀರ್ಥ
ವೃಂದಾವನತ್ರಿತಯಮಾನಮದೇಷ ಸಾಧುಃ ॥

ಎಂಬುದಾಗಿದೆ.

6. ಶ್ರೀಕೂಡ್ಲಿ ಆರ್ಯ ಅಕ್ಷೋಭ್ಯತೀರ್ಥ ಸಂಸ್ಥಾನಾಧಿಪತಿಗಳಾದ ಶ್ರೀರಘುದಾಂತತೀರ್ಥರು (ಕ್ರಿ.ಶ. 1913–1948) ತಮ್ಮ "ಶ್ರೀಮಜ್ಜಯತೀರ್ಥ ವಿಜಯ" ಎಂಬ ಕಾವ್ಯದಲ್ಲಿ (ಶ್ಲೋ.55)

"ವೃಂದಾವನೇ ಸ್ವ ಸೇವಾಕರಾಣಾಂ ಸರ್ವದೈವ ಸರ್ವೇಷ್ಟಮ್ ।
ದಾಸ್ಯನ್ ಮಲಖೇಡಸ್ಥೇ ತಾರ್ತಿಯೇನಾಸ್ತಿ ಸನ್ನಿಧಾನೇನ" ॥

ಎಂದಿದ್ದಾರೆ.

7. ಮಳಖೇಡದಲ್ಲಿ ಶ್ರೀಮಜ್ಜಯತೀರ್ಥರ ಸೇವೆಮಾಡಿ ಅವರ ಅನುಗ್ರಹ ಪಡೆದು ವಾದಿಯನ್ನು ನಿಗ್ರಹಿಸಿದ ಶ್ರೀಗುರ್ಜಾಲಾಚಾರ್ಯರು (ಶ್ರೀ ಸತ್ಯಧರ್ಮರ ಸಮಕಾಲೀನರು ಕ್ರಿ.ಶ.1797–1830) ತಮ್ಮ "ಶ್ರೀಟೀಕಾಕೃತ್ಪಾದಾಷ್ಟಕಮ್" ಎಂಬ ಕೃತಿಯಲ್ಲಿ (ಶ್ಲೋ.8)

---

3. ಈ ರಘುನಾಥ ತೀರ್ಥರು ಶ್ರೀ ಸೋಸಲೆ ವ್ಯಾಸರಾಜ ಮಠದ ಶ್ರೀ ಶೇಷ ಚಂದ್ರಿಕಾಚಾರ್ಯರೆಂದು (ಕ್ರಿ.ಶ.1700–55). ಕೆಲವರು ಹಾಗೂ ಶ್ರೀಮದುತ್ತರಾದಿ ಮಠದ ಶ್ರೀವಿದ್ಯಾನಿಧಿತೀರ್ಥರ ಶಿಷ್ಯರಾದ ಶ್ರೀ ರಘುನಾಥ ತೀರ್ಥರೆಂದು (ಕ್ರಿ.ಶ. 1445–1502 ಮಾಧ್ವ ಮಠಗಳು ಪುಸ್ತಕದಿಂದ) ಇನ್ನು ಕೆಲವರು ಅಭಿಪ್ರಾಯ ಪಡುತ್ತಾರೆ. (ಶ್ರೀಮದುತ್ತರಾದಿ ಮಠದ ಶ್ರೀ ರಘುನಾಥ ತೀರ್ಥರು ಶ್ರೀಮಜ್ಜಯತೀರ್ಥರ ಮೇಲೆ ರಚಿಸಿದ ಸ್ತೋತ್ರಗಳು ಪಂ. ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯರ ಹಸ್ತಪ್ರತಿಗಳಿಂದ ಲಬ್ದವಾಗಿವೆ. ಹೀಗಾಗಿ ಈ ಶ್ಲೋಕ ಇವರದ್ದೇ ಇರಬೇಕು.)

"ವೃಷ್ಟಿಗ್ರಾಮ ಇತೋಪಿ ಯಚ್ಚುಭಜಪವ್ಯಾಖ್ಯಾಪದಾಂಶಂ ಗುಹಾತ್ ।
ಛಿಂದ್ಯಾಚ್ಛ್ರೀಜಯನಾಕಿರಾಣ್ಮಮ ದಯಾವಜ್ರೇಣ ಪಾಪಾಚಲಮ್ "॥

ಎಂದಿದ್ದಾರೆ.

8. ಶ್ರೀಜಯೀಂದ್ರೋದಯ ವೆಂಬ ಕಾವ್ಯದಲ್ಲಿ (6/72)

"ಧ್ಯಾಯನ್ಮಲಯಖೇಟೇಽಸೌ ರಾಮಪಾದಾಬ್ಜಹೃನ್ಮುನಿಃ ।
ಉತ್ಕ್ರಾಂತಃ ಸ್ವಂ ವಪುರ್ಭೇಜೇ ನಾಕಿಭಿಃ ಪರಿಪೂಜಿತಃ" ॥

ಎಂದಿದೆ.

(ಶ್ರೀ ಕರಿಕೇಹಳ್ಳಿ ಶ್ರೀನಿವಾಸಾಚಾರ್ಯಕೃತ ಈ ಕೃತಿಯ ಹಸ್ತಪ್ರತಿ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿದೆ).

9. ಶ್ರೀ ಜಮಖಂಡಿ ವಾದಿರಾಜಾಚಾರ್ಯರು ತಮ್ಮ ಶ್ರೀವಿಷ್ಣುತೀರ್ಥ ವಿಜಯ ವೆಂಬ ಕೃತಿಯಲ್ಲಿ - (ಶ್ರೀ ಸತ್ಯಪರಾಕ್ರಮರ ಕ್ರಿ.ಶ. 1872-79 ಶಿಷ್ಯರು)

"ನಮಾಮ್ಯವಿರತಂ ಶ್ರೀಮದವಧೂತಶಿರೋಮಣೀನ್ ।
ಕಾಗಿನೀತೀರಸಂವಾಸಿ ಸಮಾಹ್ವಾನ್ ದೀನರಕ್ಷಕಾನ್ ॥

ಎಂದು ಬರೆದಿದ್ದಾರೆ.

(ಶ್ರೀ ಜಮಖಂಡಿ ವಾದಿರಾಜಾಚಾರ್ಯರು ಶ್ರೀ ವಾದಿರಾಜರ ಅಚ್ಛಿನ್ನ ಭಕ್ತರು. ತೀರ್ಥಪ್ರಬಂಧ ಹಾಗೂ ಅದರ ವ್ಯಾಖ್ಯಾನಗಳ ವಿರುದ್ಧ ಈ ರೀತಿ ಬರೆಯಲು ಹೇಗೆ ಸಾಧ್ಯ?)

10. "ಶ್ರೀ ಜಯತೀರ್ಥಗುಣ ರತ್ನಮಾಲಾ" ಎಂಬ ಕೃತಿಯಲ್ಲಿ (3/37,38)

"ಆಷಾಢಕೃಷ್ಣ ಪಂಚಮ್ಯಾಂ ವಿಭವಾಭಿಧವತ್ಸರೇ
ಕಾಗಿನೀಕೂಲಸಂಶೋಭಿಮಲಖೇಡಾಖ್ಯಸತ್ಪುರೇ ।
ಸೀತಾರಾಮಂ ಸ್ಮರಂಶ್ಚಿತ್ತೇ ಲಯಚಿಂತನಪೂರ್ವಕಮ್ ।
ಪ್ರವಿವೇಶ ಹರಿಂ ಸ್ಮೃತ್ವಾ ಮುನಿರ್ವೃಂದಾವನಂ ತದಾ ॥ ಎಂದಿದೆ.

11. "ಗುರುಪರಂಪರಾವೃತ್ತಾಂತ"ವೆಂಬ ಪ್ರಾಚೀನ ಗ್ರಂಥದಲ್ಲಿ ಶ್ರೀಮದುತ್ತರಾದಿ ಮಠಾಧೀಶರಾಗಿದ್ದ ಶ್ರೀರಘುನಾಥತೀರ್ಥರು ಮಳಖೇಡದಲ್ಲಿರುವ ಶ್ರೀಜಯತೀರ್ಥರ ಸನ್ನಿಧಿಯಲ್ಲಿ ವೃಂದಾವನಸ್ಥರಾದರೆಂದಿದೆ. (ಚಿಕ್ಕೇರೂರು ಗೋವಿಂದಾಚಾರ್ಯರ ಹಸ್ತ ಪ್ರತಿಯಿಂದ ಉದ್ಧೃತ)

12. ಶ್ರೀ ಬಿದರಹಳ್ಳಿ ವೆಂಕಟಪತ್ಯಾಚಾರ್ಯ ಕೃತ 'ಜಯತೀರ್ಥಸ್ತುತಿ' ಯಲ್ಲೂ ಮಳಖೇಡವೆಂದಿದೆ.(ಚಿಕ್ಕೇರೂರು ಗೋವಿಂದಾಚಾರ್ಯರ ಹಸ್ತ ಪ್ರತಿಯಿಂದ ಉದ್ಧೃತ)

13. ಅಪರೋಕ್ಷಜ್ಞಾನಿಗಳೆಂದು ಪ್ರಸಿದ್ಧರಾದ ಶ್ರೀ ವಿಜಯದಾಸಾರ್ಯರು (ಕ್ರಿ.ಶ. 1682-1755) ತಮ್ಮ ಅನೇಕ ಕೃತಿಗಳಲ್ಲಿ ಶ್ರೀ ಮಜ್ಜಯ ತೀರ್ಥರು ಮಳಖೇಡದಲ್ಲಿದ್ದಾರೆಂದು ಸಾರಿದ್ದಾರೆ. ಉದಾಹರಣೆಗೆ-

i) "ಟೀಕಾಚಾರ್ಯರ ಪಾದ ಸೋಂಕಿದ ಕೊನೆ ದೂಳಿ"[4] ಎಂಬ ಕೃತಿಯಲ್ಲಿ

"ಯೋಗಿಗಳರಸನೆ **ಮಳಖೇಡ ನಿವಾಸ ।**
ಕಾಗಿಣೀ ತಟವಾಸ ವಿಜಯವಿಠಲದಾಸ ।

ii) ಸಾರಿಭಜಿಸಿರೋ ಟೀಕಾರಾಯರಂಘ್ರಿಯ ... ಎಂಬ ಕೃತಿಯಲ್ಲಿ

"ಮೋಕ್ಷದಾತರ **ಅಕ್ಷೋಭ್ಯತೀರ್ಥರ ।**
ಸಾಕ್ಷಿಲಿಪ್ತರ ಅಪೇಕ್ಷೆರಹಿತರ" ।

iii) ಸುಳಾದಿಯಲ್ಲಿ

"**ಮೇಘನಾಥಪುರ** ಕಕುರವೇಣೀವಾಸ
ವಿಜಯವಿಠಲನ್ನ ನಿಜದಾಸ ಶಿರೋಮಣಿ" । ಎಂದಿದ್ದಾರೆ.

---

4. ಈ ಕೃತಿ ಶ್ರೀ ವಿಜಯದಾಸರದ್ದಲ್ಲ, ಮೊದಲಕಲ್ಲು ಶ್ರೀ ಶೇಷದಾಸರದ್ದೆಂದು ಕೆಲವರು ಆಪಾದಿಸಿದ್ದಾರೆ. ಇದರ ಬಗ್ಗೆ ಮುಂದಿನ ಪುಟಗಳಲ್ಲಿ ವಿಮರ್ಶಿಸಲ್ಪಟ್ಟಿದೆ.

14. ಶ್ರೀ ವ್ಯಾಸವಿಠಲರು (ಕಲ್ಲೂರು ಸುಬ್ಬಣ್ಣಾಚಾರ್ಯರು - ಶ್ರೀ ವಿಜಯದಾಸರ ಸಾಕ್ಷಾತ್ ಶಿಷ್ಯರು ಹಾಗೂ ಶ್ರೀ ವಿಜಯಕವಚ ಕರ್ತೃಗಳು) ತಮ್ಮ ಕೃತಿಯಾದ
"ದಯದಿಪಾಲಿಸೋ ಜಯತೀರಥರಾಯ[5] ದ ಕೊನೆ ನುಡಿಯಲ್ಲಿ

"ಆಷಾಢ ಬಹುಳ ಪಂಚಮಿಯು ಬರುತ। ಕಳೆಬರುವನು ಬಿಡುತಾ। ವ್ಯಾಸವಿಠಲನ ಪಾದದಲೆ ನಿರುತಾ। **ಮಳಖೇಡದಿ ಸತತಾ।** ವಾಸಿಪ ಪಾವಿನ ತೆರೆದೊಳ್ ಪ್ರಖ್ಯಾತಾ।... ಎಂದಿದ್ದಾರೆ.

15. ಶ್ರೀ ವರದೇಶ ವಿಠಲರು - (ಕ್ರಿ.ಶ. 1885-1918)
"ಯತಿಕುಲ ಮುಕುಟ ಶ್ರೀಜಯತೀರ್ಥ" - ಎಂಬ ಕೃತಿಯಲ್ಲಿ **"ನಿಲಯ ಮಳಖೇಡ" ಕಾಗಿಣೀ ತೀರವಾಸ** ತಾಪತ್ರಯ ದೂರ ಎಂದು ಸಾರಿದ್ದಾರೆ.

16. ಶ್ರೀಕೊಪ್ಪರ ದಾಸರು (ಕ್ರಿ.ಶ. 1896-1979) ಮಂಗಳ ಪದ್ಯದಲ್ಲಿ **"ಮಳಖೇಡಾಖ್ಯ ಸುಮಂದಿರಗೆ।** ಇಳೆಸುರ ಸೇವಿತ ಚರಣನಿಗೆ। ಇಳೆಯೊಳು ಕಾರ್ಪರ ನಿಲಯನ ಹರಿಯ। ಒಲುಮೆಯ ಪಡೆದ ಯತೀಂದ್ರನಿಗೆ॥ ಮಂಗಳಂ ಜಯ ಮಂಗಳಂ॥ ... ಎಂದಿದ್ದಾರೆ.

17. ತೊರವಿಯ ನರಹರಿ ಕವಿಯ ಕನ್ನಡ ಜಯತೀರ್ಥವಿಜಯದಲ್ಲಿ **"ಮಳಖೇಡದೊಳು** ಬಂದು ತೊರವಿ ನರಹರಿ ಪಾದಗಳ ಸ್ಮರಿಸಿ ವೃಂದಾವನ ಕೊಂಡ ರಾಯರಿಗೆ ... ಎಂದಿದೆ.

18. Mysore state Gulbarga Gazetteer Page No-17 ... "The river Kagane rises near kolur in

---

5. ಈ ಕೃತಿ ವ್ಯಾಸವಿಠಲರದ್ದಲ್ಲ ಎಂದು ಕೆಲವರ ವಾದ. ಈ ವಿಷಯದ ಬಗ್ಗೆ ವಿಮರ್ಶೆಯ ಭಾಗ ನೋಡುವುದು.

Andhra Pradesh ...**Malkhed** and Chillapur are some important towns on the river bank. Malkhed is famous as a holy place where the Mortal remains of Sri Teekacharya are interred. Malkhed known historically as **Manyakheta**"... *(Please also see page 466 & 467 on this subject)*

19. Bombay Gazetteer, Karnataka Dharwad Dist - Chapter III Page no 58 & 59 ... "Amoung the Vaisnav Prontiffs he holds the Place of honour next to Sarvagnya ... After ruling for Twenty one years he died on the dark fifth of Ashada .... He was buried at **Malkhed** twenty three Miles south east of Gulbarga and offerings are still made at his tomb"...

20. ಆಧುನಿಕ ಆಂಗ್ಲ ಭಾಷೆಯಲ್ಲಿ ಮಧ್ವಮತದ ಗ್ರಂಥಗಳನ್ನು ತರ್ಜುಮೆ ಮಾಡಿ ಪಾಶ್ಚಿಮಾತ್ಯಾದಿ ಮ್ಲೇಂಛ ದೇಶಗಳಲ್ಲಿ ಮಧ್ವಮತ ಹರಡುವಂತೆ ಮಾಡಿ ಪ್ರಸಿದ್ಧರಾದ ಆಧುನಿಕ ಪಾಶ್ಚಿಮಾತ್ಯ ಶೈಲಿಯ ಸಂಶೋಧನೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡ ಡಾ|| ಬಿ.ಎನ್.ಕೆ. ಶರ್ಮಾರವರು

i) "He passed away at Malkhed in 1388. His Mortal remains lie entombed here"
Philosophy of Madwacharya

ii) "ಪರಿಮಳ" ಪತ್ರಿಕೆಯ ಅಗಸ್ಟ್, 1977 ರಜತೋತ್ಸವ ಸಂಚಿಕೆ ಹಾಗೂ

iii) “ಪರಿಮಳ” ಪತ್ರಿಕೆಯ ಅಗಸ್ಟ್ 1968 ಸಂಚಿಕೆಗಳಲ್ಲಿ ಮಳಖೇಡದಲ್ಲಿಯೇ ಜಯತೀರ್ಥರ ವೃಂದಾವನ ಪ್ರವೇಶ-ವೆಂದು ಬರೆದಿದ್ದಾರೆ.

iv) "Gurucharya" places his ..... meeting with Akshobya on the banks of Kagine .... The Location of Jayateertha's tomb at **Malkhed** might lend support to this view...

- B.N.K. Sharma - "The history of Dvaita School of Vedanta and its literature' Page No. 247, 3rd Revised Edition 2000.

ಇದರಿಂದ ಮಳಖೇಡದಲ್ಲಿಯೇ ಶ್ರೀ ಜಯತೀರ್ಥರ ವೃಂದಾವನ-ವಿದ್ದಿತೆಂದು ಶ್ರೀ ಶರ್ಮಾರವರಿಗೆ ದೃಢವಾದ ನಂಬಿಕೆ ಇತ್ತೆಂದು ತಿಳಿದು ಬರುತ್ತದೆ. (ಮೂರನೇ ಆವೃತ್ತಿಯಲ್ಲೂ ತಿದ್ದುಪಡಿ ಮಾಡದೇ ಇರುವುದು ಗಮನಾರ್ಹ. ತಮ್ಮ ಜೀವನದ ಕೊನೆಯ ಪ್ರಬಂಧದಲ್ಲಿ ತಿದ್ದುಪಡಿ ಮಾಡಿದ್ದರೂ ಸರಿಯಾದ ಆಧಾರ ಕೊಡದೆ ಕೇವಲ ಊಹೆ ಮಾಡಿದ್ದಾರೆ.)

21. Sri. B. Venkoba Rao
"Jayathirtha died in **Malkhed**" ...

- Introduction to Vyasayogicharita

22. ಶ್ರೀ. ಟಿ.ಕೆ. ವೇಣುಗೋಪಾಲದಾಸರು -

i) “ಪರಿಮಳ” ಪತ್ರಿಕೆಯ ಅಗಸ್ಟ್ 1977 ರಜತೋತ್ಸವ ಸಂಚಿಕೆಯಲ್ಲಿ ಹಾಗೂ

ii) “ಪರಿಮಳ” - ಷಾಷ್ಟಿಕ ವಂಶದವರೆಂದು ಬರೆಯುವಾಗ ‘ಗುರುಗಳ ಸನ್ನಿಧಾನದಲ್ಲಿಯೇ ಶ್ರೀಜಯತೀರ್ಥರ ಮೂಲ ವೃಂದಾವನವು ಮಳಖೇಡದಲ್ಲಿದೆ ಎಂದು ಬರೆದಿದ್ದಾರೆ.

23. ಶ್ರೀ. ಎಮ್. ರಾಮರಾಯರು ತಮ್ಮ "ಶ್ರೀ ಟೀಕಾರಾಯರು" ಎಂಬ ಪುಸ್ತಕದ ಪುಟ 46ರಲ್ಲಿ "ಮಳಖೇಡದಲ್ಲಿ ವೃಂದಾವನ ಪ್ರವೇಶ" ಎಂದಿದ್ದಾರೆ.

24. ಶ್ರೀ. ವಿ. ಗೋಪಾಲಕೃಷ್ಣರಾಯರು ತಮ್ಮ "ಮತತ್ರಯ ಸಾಮ್ಯಸಂಗ್ರಹ" ಎಂಬ 1930ರ ಪುಸ್ತಕದಲ್ಲಿ ಪುಟ 11ರಲ್ಲಿ ಮಳಖೇಡದಲ್ಲಿ ವೃಂದಾವನ ವಿದೆ ಎಂದಿದ್ದಾರೆ.

25. ಶ್ರೀರಾಯರ ಮಠದ ಅಧಿಕೃತ ಲೇಖನಕಾರರಾದ ಶ್ರೀ ಹೆಚ್.ಕೆ. ವೇದವ್ಯಾಸಾಚಾರ್ಯರು ಅವರೇ ತಿಳಿಸಿದಂತೆ ಅವರ ಮಠದ ಪ್ರಾಚೀನ ದಾಖಲೆ ಆಧಾರಗಳ ಮೇಲೆ ರಚಿಸಿರುವ "ಗುರುಚರಿತೆ" (ಕ್ರಿ.ಶ. 1949)[6] ಎಂಬ ಪುಸ್ತಕದ ಪುಟ 106ರಲ್ಲಿ "ಮಳಖೇಡಕ್ಕೆ ಹೋಗಿ ಅಲ್ಲಿ 1388 ನೇ ವಿಭವ ಆಷಾಢ ಕೃಷ್ಣ ಪಂಚಮಿ ದಿನ ಹರಿಧ್ಯಾನ-ಪರರಾದರು" ಎಂದು ಸ್ಪಷ್ಟ ಬರೆದಿದ್ದಾರೆ. ಅಲ್ಲದೆ ಶ್ರೀ ರಾಜಾ ಗುರುರಾಜಾಚಾರ್ಯರು ತಮ್ಮ "ಅಜಯ್ಯ ವಿಜಯೀಂದ್ರರು" ಎಂಬ ಕೃತಿಯ ಪ್ರಸ್ತಾವನೆ (1970) ರಲ್ಲಿ (ಪುಟ.33) "ಪೂಜ್ಯ ಕೀರ್ತಿಶೇಷ ಶ್ರೀ ಸುಯಮೀಂದ್ರ ತೀರ್ಥರು ಶ್ರೀಮಠದ ಮೂಲಗುರುಪೀಳಿಗೆ ಕಾಗದ ಪತ್ರಗಳು, ಶಾಸನಗಳು..... ಪರಿಶೀಲಿಸಿ...... ವಿಮರ್ಶಿಸಿ..... ಶ್ರೀಮಠದ ಅಧಿಕೃತ ಗುರುಪರಂಪರಾ ಚರಿತೆಯಾದ "ಗುರು ಚರಿತೆ"ಯನ್ನು ಬರೆಸಿದ್ದಾರೆ. ಅಲ್ಲಿ ನಿರೂಪಿಸಿದ ಕಾಲ ದೇಶಗಳು ಅಧಿ ಕೃತವಾಗಿವೆ; ಎಂದು ಬರೆದಿದ್ದಾರೆ. ಈಗ ಮಳಖೇಡದಲ್ಲಿಲ್ಲವೆಂದರೆ ಅವರ ಮಠದ ಪ್ರಾಚೀನ ದಾಖಲೆಗಳ ಗತಿ ಏನು?! ಅನಧಿಕೃತವೇ ?

---

6. ಈ 'ಗುರುಚರಿತೆ' ವಿವಾದಾಸ್ಪದವಾದ ವಿಷಯಗಳನ್ನೊಳಗೊಂಡಿದೆ. ಅಲ್ಲದೆ ಲೇಖಕರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಹೆಚ್ಚು ಬರೆದಿದ್ದಾರೆ. ಹೆಚ್ಚಿನ ವಿಷಯಗಳಿಗೆ ಈ ಗುರು ಚರಿತೆಯ ವಿಮರ್ಶೆ ಹಾಗೂ ಖಂಡನೆ (ಶ್ರೀ ಎಂ.ಎಸ್. ಕಟ್ಟಿಯವರ (1950) ಹಾಗೂ ಶ್ರೀ ಡಿ.ವಿ. ಸುಬ್ಬಾಚಾರ್ಯರ (1964) ಪುಸ್ತಕಗಳನ್ನು ನೋಡುವುದು.

26. ಶ್ರೀ. ಎನ್.ಕೆ. ನರಸಿಂಹಮೂರ್ತಿಗಳು ತಮ್ಮ “ಶ್ರೀಮನ್ ಮಧ್ವಮತ ಪ್ರಸಾರ” ಎಂಬ ಪುಸ್ತಕದ 144ನೇ ಪುಟದಲ್ಲಿ “ಮಳಖೇಡದಲ್ಲಿ ಗುರುಗಳ ಸನ್ನಿಧಾನದಲ್ಲಿ ಕ್ರಿ.ಶ. 1388ರಲ್ಲಿ ವೃಂದಾವನಸ್ಥರಾದರು” ಎಂದಿದ್ದಾರೆ.

27. “ಪರಿಮಳ” ಪತ್ರಿಕೆಯ 1962ರ ಜನವರಿ ಸಂಚಿಕೆಯಲ್ಲಿ ಸಂಪಾದಕರಾದ ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು “ಶ್ರೀಗುರುಭಕ್ತ ದಿ॥ ಭೀಮದಾಸರು” ಎಂಬ ಲೇಖನದಲ್ಲಿ ಪುಟ 28ರಲ್ಲಿ ಭೀಮದಾಸರ ಬಗ್ಗೆ ಬರೆಯುವಾಗ ಹೀಗೆ ಬರೆದಿದ್ದಾರೆ –

“ಶ್ರೀರಾಘವೇಂದ್ರ ಸ್ವಾಮಿಗಳ ಮಹಿಮೆಯನ್ನು ಮಿತ್ರರನೇಕರಿಂದರಿತು ಆಕರ್ಷಿತರಾದ ಇವರು (ಭೀಮದಾಸ ಅಥಣಿಯವರು) ಮಂತ್ರಾಲಯಕ್ಕೆ ಹೋದರು. ಅಲ್ಲಿ ಆಗ ಶ್ರೀಗುರುರಾಜರ ಸನ್ನಿಧಿಯಲ್ಲಿ ವಿರಾಜಮಾನರಾಗಿದ್ದ ಶ್ರೀಮತ್ಪೂಜ್ಯ ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರ ದರ್ಶನ ಮಾಡಿ ಅವರಲ್ಲಿ ತಮ್ಮ ಜೀವನ ವಿಚಾರವನ್ನು ತಿಳಿಸಿ ತಾವು ಉದ್ಧಾರವಾಗುವ ಹೆದ್ದಾರಿಯನ್ನು ತೋರಿ ಅನುಗ್ರಹಿಸಬೇಕೆಂದು ಕಣ್ಣೀರಿಟ್ಟು ಬೇಡಿಕೊಂಡರು. ಶ್ರೀ ಶ್ರೀಪಾದಂಗಳವರು ಕರುಣಾರ್ದ್ರ ಹೃದಯರಾಗಿ ಇವರಿಗಿರುವ ಗುರುಭಕ್ತಿಗೆ ಸಂತುಷ್ಟರಾಗಿ ಮಂತ್ರಾಲಯದಲ್ಲಿ ಕೆಲದಿನವಿದ್ದು ಶ್ರೀರಾಯರ ಸೇವೆ ಮಾಡಿದಲ್ಲಿ ಅನುಗ್ರಹವಾಗುವುದೆಂದು ಅಭಯವಿತ್ತರು. ಶ್ರೀಯವರ ಆಜ್ಞೆಯನ್ನು ಶಿರಸಾಧಾರಣ ಮಾಡಿ ಅನನ್ಯಭಾವದಿಂದ ಗುರುರಾಜರ ಸೇವೆ ಮಾಡಿದರು. ಅಲ್ಲಿಯೇ ಇವರಿಗೆ ಭಕ್ತಿಯ ಹಿರಿಮೆ ಅರಿವಾಯಿತು. ಇವರಲ್ಲಿ ದಿವ್ಯ ಜೀವನದ ಬೆಳಕು ಹೊಳೆಯಿತು. ಎರಡು ವರ್ಷಕಾಲ ಶ್ರೀಗುರುರಾಜರ ಸೇವೆ ಮಾಡಿ ಭಜಿಸಿದರು. ಶ್ರೀರಾಯರು ಇವರ ಭಕ್ತಿಗೆ ಮೆಚ್ಚಿ ಸ್ವಪ್ನದಲ್ಲಿ

ದರ್ಶನವಿತ್ತು ''ನೀನು ಕೆಲದಿನ **ಮಳಖೇಡದಲ್ಲಿ ಟೀಕಾರಾಯರ ಸೇವೆ ಮಾಡು''** ಎಂದಾಜ್ಞಾಪಿಸಿದರು. ಅದರಂತೆ – ಮಳಖೇಡಕ್ಕೆ ತೆರಳಿ ಅಲ್ಲಿ ಎರಡು ವರ್ಷಕಾಲ ಸತತ ಶ್ರೀಟೀಕಾರಾಯರ ಸೇವೆಯನ್ನು ಅನನ್ಯ ಭಕ್ತಿಯಿಂದ ಮಾಡಿ ... ಶ್ರೀಟೀಕಾರಾಯರು ಇವರ ಭಕ್ತಿಗೆ ಮೆಚ್ಚಿ ಸ್ವಪ್ನದಲ್ಲಿ ''ನೀನು ಇನ್ನು ಮೇಲೆ ಅಥಣಿಗೆ ಹೋಗಿ ಧಾರ್ಮಿಕ ಜಾಗೃತಿಯನ್ನು ಮಾಡು. ಹರಿಭಕ್ತಿಯನ್ನು ಬೆಳೆಸು'' ಎಂದು ಆಜ್ಞಾಪಿಸಿದರು. ... ಅಲ್ಲದೆ., –

28. ಶ್ರೀ ಸತ್ಯಧ್ಯಾನ ತೀರ್ಥರ ಶಿಷ್ಯರಾದ ಶ್ರೀ ಹೆಚ್. ಭೀಮರಾಯರಿಗೆ (ಹೊಳೇನರಸೀಪುರ) ಮಂತ್ರಾಲಯ ಪ್ರಭುಗಳು ಸ್ವಪ್ನದಲ್ಲಿ ಬಂದು ಮಳಖೇಡದಲ್ಲಿರುವ ಶ್ರೀಟೀಕಾರಾಯರ ಸೇವೆಗೆ ಕಳುಹಿಸಿದ್ದಾರೆ –

'ಪ್ರಾತಃಸ್ಮರಣೀಯರಾದ ಶ್ರೀ ಸತ್ಯಧ್ಯಾನ ಶ್ರೀಪಾದಂಗಳವರಲ್ಲಿ ಸಕಲ ಶಾಸ್ತ್ರಾಧ್ಯಯನವನ್ನು ಮಾಡಿ ... ಲೌಕಿಕದಲ್ಲಿ ವಕೀಲ ವೃತ್ತಿ ಹಿಡಿದು ಉತ್ತುಂಗ ಯಶಸ್ಸಿನ ಶಿಖರಕ್ಕೇರಿ ದೈವಪ್ರೇರಣೆಯಿಂದ ಮಂತ್ರಸಿದ್ಧ ಕ್ಷೇತ್ರವಾದ ಮಂತ್ರಾಲಯಕ್ಕೆ ತೆರಳಿ ಅಲ್ಲಿ ಗುರುಸಾರ್ವಭೌಮರ ಸೇವೆಯನ್ನು ನಿಷ್ಕಾಮ ಭಾವನೆಯಿಂದ ಮಾಡಿ ಮಂತ್ರಾಲಯ ಪ್ರಭುಗಳಿಂದಲೇ ಪ್ರೇರಿತರಾಗಿ ಮಳಖೇಡ ಕ್ಷೇತ್ರಕ್ಕೆ ಬಂದು ಕಾಗಿನೀ ತೀರನಿವಾಸಿ ಶ್ರೀಟೀಕಾಕೃತ್ಪಾದರ ಸೇವಾದ್ವಾರ ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾದವರು ಹೊಳೆನರಸೀಪುರದ ಶ್ರೀ ಭೀಮರಾಯರು... ಶ್ರೀ ಮಳಖೇಡ ಕ್ಷೇತ್ರದಿಂದ ಶ್ರೀಮಟ್ಟೀಕಾಕೃತ್ಪಾದರ ವೃಂದಾವನವನ್ನು ಅವರ ಸ್ವಪ್ನ ಸೂಚಿತ ಅನುಗ್ರಹದಿಂದಲೇ ಪಡೆದ ಪರಮ ಧನ್ಯರಿವರು'.

– ''ಶ್ರೀ ಜಯತೀರ್ಥ ವೈಜಯಂತೀ'' ಪುಸ್ತಕದ ಪುಟ 36.

ಹೀಗೆ ಶ್ರೀರಾಘವೇಂದ್ರ ಗುರು ಸಾರ್ವಭೌಮರೇ ತಮ್ಮ ಭಕ್ತರಾದ ಭೀಮದಾಸ ಅಥಣಿ ಹಾಗೂ ಹೆಚ್. ಭೀಮರಾಯರಿಗೆ (ಶ್ರೀ ಪಾಂಡವ ನವನೀತಧರ ಕೃಷ್ಣ ವಿಠಲಾಂಕಿತರು) ಮಳಖೇಡಕ್ಕೇ ಶ್ರೀ ಟೀಕಾರಾಯರ ಸೇವೆಗಾಗಿ ಕಳುಹಿಸಿದ್ದಾರೆ. ನವವೃಂದಾವನಕ್ಕೆ ಅಲ್ಲ. ಅಂದ ಮೇಲೆ ಶ್ರೀಮಜ್ಜಯತೀರ್ಥರು ಮೂಲತಃ ಮಳಖೇಡದಲ್ಲಿದ್ದಾರೆ ಎಂಬ ವಿಷಯ ಮಂತ್ರಾಲಯ ಪ್ರಭುಗಳಿಗೂ ಸಮ್ಮತವಾದದ್ದು ಎಂದು ನಿರ್ಣಯವಾಯಿತು. (ಇದಕ್ಕಿಂತ ಬೇರೆ ಪ್ರಮಾಣ ಬೇಕೆ ? **ಶ್ರೀ ರಾಘವೇಂದ್ರ ಸ್ವಾಮಿಗಳ ಮಾತಿಗೆ ವಿರುದ್ಧ ನಡೆಯುವ ಸಾಹಸವೇ?**)

29. ''ಪರಿಮಳ'' ಪತ್ರಿಕೆಯ ಜುಲೈ 1968ನೆ ಸಂಚಿಕೆಯಲ್ಲಿ ''ಶ್ರೀವ್ಯಾಸರಾಜ ಗುರು ಸಾರ್ವಭೌಮ ವಿರಚಿತ ಶ್ರೀಜಯತೀರ್ಥ ವಿಜಯ'' ಎಂಬ ಲೇಖನದಲ್ಲಿ ಆ ವಿಜಯದ ಭಾವಾನುವಾದ ಕೊಟ್ಟಿದ್ದಾರೆ. ಪುಟ 33ರಲ್ಲಿ 32ನೇ ಶ್ಲೋಕದ ಭಾವಾನುವಾದದಲ್ಲಿ ''ತಮ್ಮ ಗುರುಗಳವರ ಪರಮ ಬೃಂದಾವನ ಸನ್ನಿಧಿಯಲ್ಲೇ ತಾವೂ ಬೃಂದಾವನಸ್ಥರಾಗಿ ಶ್ರೀಗುರುಸೇವಾರತರಾಗಬೇಕೆಂದು ಆಶಿಸಿ ಅಲ್ಲಿಂದ ಹೊರಟು ... ಎಂದಿದೆ.

ಶ್ರೀಜಯತೀರ್ಥರ ಗುರುಗಳಾದ ಶ್ರೀಮದಕ್ಷೋಭ್ಯತೀರ್ಥರ ವೃಂದಾವನವಿರುವುದು ಮಳಖೇಡದಲ್ಲಿ, ಅವರ ಸನ್ನಿಧಾನದಲ್ಲಿ ಎಂದರೆ ಮಳಖೇಡದಲ್ಲಿಯೇ ಶ್ರೀಮದಕ್ಷೋಭ್ಯತೀರ್ಥರ ಸನ್ನಿಧಿಯಲ್ಲೇ ಶ್ರೀಜಯತೀರ್ಥರ ಮೂಲ ವೃಂದಾವನ ಎಂಬುದು ಶ್ರೀ ವ್ಯಾಸರಾಜರಿಗೂ ಸಮ್ಮತವೆಂದಾಯಿತು.

30. ಹಳೆಯ ಶ್ರೀರಾಯರ ಮಠದ ಪಂಚಾಂಗಗಳಲ್ಲಿ ಶ್ರೀ ಟೀಕಾಕೃತ್ಪಾದರ ಪು.ದಿ. **ಮಳಖೇಡ** ಎಂದಿದೆ.

31. ಹಳೆಯ ಶ್ರೀ ವ್ಯಾಸರಾಜ ಮಠದ ಪಂಚಾಂಗಗಳಲ್ಲಿ ಶ್ರೀ ಜಯತೀರ್ಥರ ಪು.ದಿ. **ಮಳಖೇಡ** ಎಂದಿದೆ.

32. ಮಳಖೇಡದಲ್ಲಿಯೇ ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ವಿದೆ ಎಂಬುದಕ್ಕೆ ಮತ್ತೊಂದು ಪ್ರಬಲ ಸಾಕ್ಷಾಧಾರವೆಂದರೆ ಅನೇಕ ಮಹನೀಯರು ಶ್ರೇಷ್ಠ ಟಿಪ್ಪಣಿಕಾರರು ತಪಸ್ವಿಗಳು ಯತಿ ಶಿರೋಮಣಿಗಳು ಅವರ ಸನ್ನಿಧಾನದಲ್ಲಿ ಬಂದು ನೆಲೆಸಿರುವುದು. ಮಳಖೇಡದ ಕಾಗಿನೀ ತೀರದಲ್ಲಿರುವ ಮಹನೀಯರುಗಳು

1.	ಶ್ರೀ ಅಕ್ಷೋಭ್ಯತೀರ್ಥರು	2.	**ಶ್ರೀ ಟೀಕಾರಾಯರು**
3.	ಶ್ರೀ ವ್ಯಾಸತೀರ್ಥರು	4.	ಶ್ರೀ ರಘುನಾಥರು
5.	ಶ್ರೀ ಕೃಷ್ಣದ್ವೈಪಾಯನರು	6.	ಶ್ರೀ ಜಿತಾಮಿತ್ರರು
7.	ಶ್ರೀ ರಾಘವೇಂದ್ರ ಸ್ವಾಮಿಗಳು	8.	ಶ್ರೀ ಸತ್ಯಾನಂದರು
9.	ಶ್ರೀ ಪೂರ್ಣಬೋಧತೀರ್ಥರು	10.	ಶ್ರೀ ರಾಜಗೋಪಾಲತೀರ್ಥರು
11.	ಶ್ರೀ ಸತ್ಯಬೋಧರು	12.	ಶ್ರೀ ಸತ್ಯವೀರರು
13.	ಶ್ರೀ ಸತ್ಯಧೀರರು	14.	ಶ್ರೀಸತ್ಯಜ್ಞಾನರು
15.	ಶ್ರೀ ಸತ್ಯಧ್ಯಾನರು	16.	ಶ್ರೀ ರಘುಕಾಂತರು.

ಹೀಗೆ 16 ಯತೀಶ್ವರರಿಗೆ ನಿತ್ಯ ಹಸ್ತೋದಕವಾಗುವುದು. ಈ ಯತಿಗಳಲ್ಲಿ ಕೆಲವರು ಸ್ವಪ್ನದಿಂದ ಇನ್ನು ಕೆಲವರು ಸ್ವಪ್ನಪ್ರಕಾರ ಬೃಂದಾವನ (ಮೃತ್ತಿಕಾ) ಮಾಡಿಸಿಕೊಂಡು ಬಂದವರು. ಉಳಿದವರದ್ದು ಮೂಲ ವೃಂದಾವನಗಳು. ಇವರೆಲ್ಲ (ಯಾವ ಮತಭೇದ ವಿಲ್ಲದೆ) ಶ್ರೀಮಟ್ಟೀಕಾರಾಯರ ಸೇವೆಗಾಗಿ ನೆಲೆಸಿರುವ ಈ ಸನ್ನಿಧಾನದಲ್ಲಿ (ಮಳಖೇಡದಲ್ಲಿ) ಶ್ರೀ ಟೀಕಾರಾಯರ ಮೂಲ ವೃಂದಾವನ ಇಲ್ಲ ಎನ್ನಬಹುದೇ ? ವಾಚಕರೆ ತೀರ್ಮಾನಿಸಲಿ.

33. ಹರಪನಹಳ್ಳಿ ಭೀಮವ್ವನ ಕೃತಿಯಾದ "ಪಾಲಿಸೆನ್ನನು ಜಯರಾಯ" ದಲ್ಲಿ "ಪರಮ ಪಾವನ ವೃಂದಾವನ ಮಳಖೇಡ ಕಾಗಿನೀನದಿ ತೀರದಿ ತಪವಾಚರಿಸುತ ಗುರುಗಳು ..." ಎಂದಿದೆ.

34. ಶ್ರೀಕಣ್ವಮಠೀಯ ಪಂಚಾಂಗ (1956-57 ದುರ್ಮುಖ ನಾಮ ಸಂವತ್ಸರ)ದಲ್ಲಿ ಶ್ರೀಜಯತೀರ್ಥಾನಾಮಾರಾಧನಂ (ಮಳಖೇಡ) ಎಂದಿದೆ.

35. ಶ್ರೀಭುವನೇಶ್ವರೀ ಪಂಚಾಂಗಗಳು ಹಾಗೂ ಸುರಪುರದ ಸಂಸ್ಕೃತ ಪಂಚಾಂಗ (1959-60 ವಿಕಾರೀ ನಾಮ ಸಂವತ್ಸರದಿಂದ ಇಂದಿನವರೆಗೂ)ಗಳಲ್ಲಿ ಶ್ರೀಜಯತೀರ್ಥಾನಾಂ ಪುಣ್ಯದಿನ (ಮಳಖೇಡ) ಎಂದಿದೆ.

36. "ಗುರುಚರ್ಯಾ" ಎಂಬ ಪ್ರಾಚೀನ (ಶ್ರೀ ರಾಘವೇಂದ್ರರ ಹಾಗೂ ಶ್ರೀ ಸತ್ಯನಿಧಿಗಳ ಕಾಲ ಕ್ರಿ.ಶ. 1638-1660) ಗ್ರಂಥದಲ್ಲಿ ಶ್ರೀರಘುನಾಥರ ವೃಂದಾವನ ಪ್ರವೇಶದ ಬಗ್ಗೆ-[7]

"ಮಾರ್ಗಶೀರ್ಷೇ ದ್ವಿತೀಯಕೇ ಕೃಷ್ಣೇ ವಿಷ್ಣುಪದಂ ಪ್ರಾಗಾತ್
ಜಯರಾಜಾರ್ಯ ಸನ್ನಿಧೌ" - ಎಂದಿದೆ.

ಶ್ರೀಮದುತ್ತರಾದಿ ಮಠದ ಶ್ರೀರಘುನಾಥತೀರ್ಥರ (ಶ್ರೀ ಶ್ರೀಪಾದರಾಜರ ಸಮಕಾಲೀನರು) ವೃಂದಾವನ ವಿರುವುದು ಮಳಖೇಡದಲ್ಲಿ. ಶ್ರೀಜಯರಾಜಾರ್ಯರ ಸನ್ನಿಧಿಯಲ್ಲೇ ಇವರು ವೃಂದಾವನಸ್ಥರಾದ ರೆಂದ ಮೇಲೆ ಶ್ರೀಜಯತೀರ್ಥರ ವೃಂದಾವನ ಮಳಖೇಡದಲ್ಲಿದೆ ಎಂದು ಸಿದ್ಧಿಸುತ್ತದೆ.

---

7. ಪಂ। ಚಿಕ್ಕೇರೂರು ಗೋವಿಂದಾಚಾರ್ಯರ ಹಸ್ತಪ್ರತಿಗಳಿಂದ

37. ಬೆಟ್ಟದ ಅನಂತ ಕೃಷ್ಣಾಚಾರ್ಯರೆಂಬುವರು ಕ್ರಿ.ಶ. 1951 ನೇ ಇಸವಿಯಲ್ಲಿ "ಷಾಷ್ಟಿಕನಾಮಾವಳಿ" ಎಂಬ ಹೆಸರಿನ ಪುಸ್ತಕವನ್ನು ಮುದ್ರಿಸಿರುವರು.[8] ಆ ಪುಸ್ತಕದ 50-51 ನೆಯ ಪುಟದಲ್ಲಿ - ದೊಡ್ಡಬಳ್ಳಾಪುರದಲ್ಲಿದ್ದ ಶ್ರೀರಾಘವೇಂದ್ರಪ್ಪನೆಂಬ ಕವಿಯು (ಷಾಷ್ಟಿಕ ವಂಶದ ಬಗ್ಗೆ ತನ್ನದೇ. ಆದ ನಿಲುವನ್ನು ಹೊಂದಿದವ. 18 ನೇ ಶತಮಾನದ ಕೊನೆಯಲ್ಲಿ ಹುಟ್ಟಿದವ. ಶ್ರೀ ಜಗನ್ನಾಥದಾಸರ ಶಿಷ್ಯನೆಂದು ಪ್ರಸಿದ್ಧಿ).

ಹೀಗೆ ಹೇಳಿದ್ದಾನೆಂದು ಬರೆದಿರುವರು -

"ಮತ್ತೆರಡು ಮನೆಯವರು ಬಾಂಧವ ಜನ್ಮ ಸಹಿತ ಮಳಖೇಡೆಯೊಳು ।
ಇರ್ಪರು ಅಲ್ಲಿ ಟೀಕಾಚಾರ್ಯವರ್ಯರ ಗುರು ಅಕ್ಷೋಭ್ಯತೀರ್ಥರ
ಘನ ವೃಂದಾವನ ... ನಮ್ಮವರಲ್ಲಿ ಅರ್ಚಕರಾಗಿ ...
ಗುರುಗಳಿಬ್ಬರು ನಮ್ಮ ಷಾಷ್ಟಿಕರೆಂದು ...

ಇದರಿಂದ 'ಸಾರಸ್ವತ ಪರಿಣಯ' ಎಂಬ ಗ್ರಂಥಕರ್ತನಾದ ಷಾಷ್ಟಿಕ ವಂಶದವನಾದ ರಾಘವೇಂದ್ರಪ್ಪನೆಂಬ ಕವಿಗೂ ಮಳಖೇಡದಲ್ಲಿ ಶ್ರೀಜಯತೀರ್ಥರ ಹಾಗೂ ಶ್ರೀ ಅಕ್ಷೋಭ್ಯತೀರ್ಥರ ಮೂಲ ವೃಂದಾವನಗಳಿವೆ ಎಂಬ ಖಚಿತ ವಿಶ್ವಾಸವಿತ್ತೆಂದು ಸ್ಪಷ್ಟ ತಿಳಿದು ಬರುತ್ತದೆ.

38. ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಹಿಂದಿನ ಪೀಠಾಧಿಪತಿಗಳಾದ ಶ್ರೀ ಸುಜಯೀಂದ್ರತೀರ್ಥರು ಖುದ್ದಾಗಿ ಪಂ. ಚಿಕ್ಕೇರೂರು ಗೋವಿಂದಾ ಚಾರ್ಯರಿಗೆ ಹಾಗೂ ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರಿಗೆ

---

8. ಶ್ರೀ ಎಂ. ಆರ್. ಅನಂತಪದ್ಮನಾಭರಾವ್‌ರವರ 'ಶ್ರೀ ಜಯಮುನಿಗಳು' ಎಂಬ ಪುಸ್ತಕದಿಂದ ಉದ್ಧೃತ.

"ಮಳಖೇಡದ ಶ್ರೀಜಯತೀರ್ಥರ ಮೂಲವೃಂದಾವನ ಸನ್ನಿಧಾನದಲ್ಲಿ ಶ್ರೀರಾಘವೇಂದ್ರತೀರ್ಥರು ಸುಧಾಮಂಗಳ ಮಾಡಿದ್ದಾರೆ. ಈ ಬಗ್ಗೆ ಶ್ರೀಮಠದಲ್ಲಿ ದಾಖಲೆ ಇದೆ [9] ಎಂದು ತಿಳಿಸಿದ್ದಾರೆ.

39. ಕ್ರಿ.ಶ. 1801 ಕ್ಕಿಂತ ಮುಂಚೆಯಿಂದಲೂ ಅಂದಿನ ಹೈದರಾಬಾದ್ ನೈಜಾಂ ಸರ್ಕಾರ ಆಗಿನ ಹಾಗೂ ಮುಂದಿನ ದಿನಗಳಲ್ಲಿ ಶ್ರೀಜಯತೀರ್ಥರ ವೃಂದಾವನ ಪೂಜೆ ಆರಾಧನೆಗಳಿಗಾಗಿ ಹಣ ಹಾಗೂ ಜಮೀನುಗಳನ್ನು ಮಂಜೂರು ಮಾಡಿದ ದಾಖಲೆಗಳಿವೆ. ಹೈದರಾಬಾದ್ ನೈಜಾಂ ಸರ್ಕಾರ ದಾಖಲೆ – ಮುಂಕಬ್ ನಂ – 19947 ದಿನಾಂಕ. 18.09.1980, 198 ನೆಯ ನಂ. ದಿನಾಂಕ 10.12.1887). ಈ ದಾಖಲೆಯ 20 ನೇ ನಂ. ಕಾಲಂನಲ್ಲಿ – For service of Temple of Sri Jayatheertha Swamy Malkhed[10] ಎಂದು ಸ್ಪಷ್ಟವಿದೆ. ಇದರಿಂದ ಮಳಖೇಡದಲ್ಲಿಯೇ ಶ್ರೀಜಯತೀರ್ಥರ ವೃಂದಾವನ ವಿದೆ ಎಂದು ಖಚಿತವಾಗುತ್ತದೆ.[11]

40. ಪ್ರಸಿದ್ಧ ಸಂಶೋಧಕರಾದ ಶ್ರೀ. ಕಸಗಾರು ಮಾಧವರಾಯರು ತಮ್ಮ "ಆರ್ಯ ಅಕ್ಷೋಭ್ಯತೀರ್ಥ ಸಂಸ್ಥಾನ" ಎಂಬ ಪುಸ್ತಕದಲ್ಲಿ ಪುಟ 41ರಲ್ಲಿ "ಮಳಖೇಡದಲ್ಲಿರುವ ವೃಂದಾವನಗಳು" ಎಂದು ಪಟ್ಟಿ ಮಾಡುವಾಗ ಶ್ರೀ ಅಕ್ಷೋಭ್ಯತೀರ್ಥರು ಶ್ರೀ **ಜಯತೀರ್ಥರು...** ಎಂದು

---

9. i. ದಿ. ಪಂ. ಚಿಕ್ಕೇರೂರು ಗೋವಿಂದಾಚಾರ್ಯರ ಹಸ್ತಪ್ರತಿಯಲ್ಲಿ ಇದೆ.
   ii. ಡಾ॥ ಪ್ರಭಂಜನಾಚಾರ್ಯ ವ್ಯಾಸನಕೆರೆಯವರ "ಶ್ರೀ ರಾಘವೇಂದ್ರ ದರ್ಶನ" ಪುಸ್ತಕ ನೋಡುವುದು.

10. ಶ್ರೀ ಎಂ. ಆರ್. ಅನಂತಪದ್ಮನಾಭರಾವ್‌ರವರ 'ಶ್ರೀ ಜಯಮುನಿಗಳು' ಎಂಬ ಪುಸ್ತಕದಿಂದ ಉದ್ಧೃತ.

11. ಕೆಲವರು ಮಳಖೇಡದಲ್ಲಿರುವುದು ಶ್ರೀ ಜಯತೀರ್ಥರ ಮೃತ್ತಿಕಾ ವೃಂದಾವನವೆಂದು ವಾದಿಸುತ್ತಾರೆ. ಎಲ್ಲಿಯೂ ಒಂದು ಸರ್ಕಾರ ಮೃತ್ತಿಕಾ ವೃಂದಾವನಗಳಿಗೆ ಹಣ, ಜಮೀನು ಗಳನ್ನು ಮಂಜೂರು ಮಾಡಿದ ದಾಖಲೆಗಳಿಲ್ಲ. ಅಷ್ಟೇ ಅಲ್ಲದೆ ಈ ನೈಜಾಂ ಸರ್ಕಾರದ ಯಾವ ದಾಖಲೆಯಲ್ಲಿಯೂ ಮೃತ್ತಿಕಾ ವೃಂದಾವನ ಎಂದಿಲ್ಲ ಎಂಬುದು ಗಮನಾರ್ಹ. ಮೃತ್ತಿಕಾ ಶಬ್ದವನ್ನು ತಮ್ಮ ಪಕ್ಷಸಾಧನೆಗಾಗಿ ಕಲ್ಪಿಸಿಕೊಂಡದ್ದು ಎಂಬುದು ಸ್ಪಷ್ಟ

ಬರೆದಿದ್ದಾರೆ.

41. ಶ್ರೀಹರಿ ವಿಠಲ ಪ್ರಕಾಶನದವರಿಂದ ಸಂಶೋಧಿತವಾಗಿ ಮುದ್ರಿಸಲ್ಪಟ್ಟ ಶ್ರೀಮದ್ಧರಿಕಥಾಮೃತಸಾರ (ಮೂಲ ಹಾಗೂ ಶ್ರೀಸಂಕರ್ಷಣ ವಡೆಯರ ವ್ಯಾಖ್ಯಾನ ಸಹಿತ - 1976-77) ಗ್ರಂಥದಲ್ಲಿ ಶ್ರೀಜಯತೀರ್ಥರ ಮೂಲ ಬೃಂದಾವನ ಚಿತ್ರ ಹಾಗೂ ಭಾವಚಿತ್ರಗಳನ್ನು ಛಾಪಿಸಿ **'ಮಳಖೇಡ'** ಎಂಬುದಾಗಿ ಬರೆದಿದ್ದಾರೆ. (ಈ ಗ್ರಂಥದ ಮೂರು ಸಂಪುಟಗಳನ್ನು ಕ್ರಮವಾಗಿ ಬಿಡುಗಡೆ ಮಾಡಿರುವವರು ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀಸತ್ಯಪ್ರಮೋದತೀರ್ಥರು ಶ್ರೀ ಸೋಸಲೆ ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾಪಯೋನಿಧಿ ತೀರ್ಥರು ಹಾಗೂ ಶ್ರೀಪಾದರಾಜ ಮಠದ ಶ್ರೀ ಸತ್ಯನಿಧಿತೀರ್ಥರು ಎಂಬುದು ಗಮನಾರ್ಹ)

42. Entered Brindavan near his Master Sri Akshobya Thirtha at **Malkhed**.

- Sri D.V. Subbachar Tamraparni in his Glories of the pontiffs of Sri. Uttaradimutt - 1964

42. 1995 ರಲ್ಲಿ ಶ್ರೀ ಹೆಚ್.ಎಸ್. ಶ್ರೀನಿವಾಸಮೂರ್ತಿಗಳಿಂದ ಪ್ರಕಾಶಿಸಲ್ಪಟ್ಟ ಶ್ರೀ ಹರಿದಾಸ ಸಾಹಿತ್ಯಪ್ರಚಾರ ಗ್ರಂಥಮಾಲೆಯ"ಶ್ರೀ ಜಯತೀರ್ಥ ವೈಜಯಂತೀ" ಎಂಬ ಪುಸ್ತಕದ ಪುಟ 22 ರಲ್ಲಿ

"ಈಚೆಗೆ ಕೆಲವರು ಶ್ರೀಜಯತೀರ್ಥರ ವೃಂದಾವನವು ನವವೃಂದಾವನದಲ್ಲಿದೆ ಎಂದೂ ... ಶ್ರೀ ವಾದಿರಾಜರ ತೀರ್ಥಪ್ರಬಂಧ ಶ್ಲೋಕವನ್ನು ಉದಾಹರಿಸಿರುತ್ತಾರೆ. ಇದು ಸ್ವಕಲ್ಪಿತವೇ ಹೊರತು ಆಧಾರರೂಪ ಪ್ರಮಾಣವಲ್ಲ... ಶ್ರೀ ಜಯತೀರ್ಥರು ವೃಂದಾವನಸ್ಥ-ರಾದ ಕಾಲದಿಂದಲೂ ಇಲ್ಲಿಯ ಪರ್ಯಂತ ಮಳಖೇಡದಲ್ಲಿಯೇ ಅವರ ಆರಾಧನೆ ನಡೆಯುತ್ತಿದೆ ... ಶ್ರೀವಿಜಯದಾಸವರ್ಯರು ಮಳಖೇಡ ಕ್ಷೇತ್ರಕ್ಕೆ ಬಂದಿದ್ದಾರೆ. ಅಲ್ಲಿ ಅವರಿಗೆ ಶ್ರೀಜಯತೀರ್ಥಗುರುವರೇಣ್ಯರು ವೃಂದಾವನದಿಂದ ತೇಜೋಮಯವಾದ ದಿವ್ಯದರ್ಶನ ದಯಪಾಲಿಸಿದ್ದಾರೆ - ಎಂದು ಬರೆದಿದ್ದಾರೆ.

44. ಶ್ರೀ ಶ್ಯಾಮಸುಂದರ ಅಂಕಿತ ಶ್ರೀ ಬಲ್ಲಟಗಿ ಗುಂಡಾಚಾರ್ಯರ “ದಯದಿ ಸಲಹೋ ಜಯರಾಯ” ಎಂಬ ಕೀರ್ತನೆಯಲ್ಲಿ

“ಕಾಗಿನೀ ನಿಲಯ ಕವಿಜನಗೇಯ
ಯೋಗಿವರಿಯ ಕೃಪಾಸಾಗರ ಸತತಾ” – ಎಂದಿದೆ.

45. ಶ್ರೀಕೃಷ್ಣ ವಿಠಲಾಂಕಿತರಾದ ಶ್ರೀ ಹೆಚ್. ಭೀಮರಾಯರು ತಮ್ಮ “ನಂಬಿ ಭಜಿಸಿರೋ ... ನಮ್ಮ ಜಯರಾಯರ” ಎಂಬ ಕೃತಿಯ ಆರನೇ ನುಡಿಯಲ್ಲಿ –

“ಮಳಖೇಡದೀ – ನೆಲಸಿ ಇಪ್ಪರೂ
ನಳಿನನಾಭನಾ – ಒಲಿಸುತನುದಿನಾ” – ಎಂದು ಬರೆದಿದ್ದಾರೆ.

46. “ಶ್ರೀ ಸತ್ಯಚಿದಂಬರ ಪಂಚಾಗಮ್” 1989–90 ಶುಕ್ಲನಾಮ ಸಂ. ಶಾ.ಶ. 1911 – ದಲ್ಲಿ “ಶ್ರೀ ಟೀಕಾಚಾರ್ಯಾಣಾಂ ಪು.ದಿ. – ಮಳಖೇಡ ಎಂದಿದೆ.

47. “ತೀರ್ಥಪ್ರಬಂಧ”ದ ಕನ್ನಡ ಅನುವಾದದ 3ನೇ ಆವೃತ್ತಿ (1984)ಯಲ್ಲಿ ಶ್ರೀ ಸಾಣೂರು ಭೀಮಭಟ್ಟರು ಪುಟ 315ರಲ್ಲಿ – “ಶ್ರೀ ಜಯತೀರ್ಥರ ವೃಂದಾವನವು ಮಳಖೇಡದಲ್ಲಿಯೇ ಇದೆ ಎಂದು ತಿಳಿಯಬೇಕು” ಎಂದು ಸ್ಪಷ್ಟೀಕರಣ ಕೊಟ್ಟಿದ್ದಾರೆ.

48. “ಜಯತೀರ್ಥಚರಿತಾಮೃತಂ” ಎಂಬ ತಮ್ಮ ಗ್ರಂಥದಲ್ಲಿ(1982) ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯರು ಮಳಖೇಡದಲ್ಲಿಯೇ ಶ್ರೀಜಯತೀರ್ಥರು ವೃಂದಾವನಸ್ಥರಾದರೆಂದು ಉಲ್ಲೇಖಿಸಿದ್ದಾರೆ.

49. ಶ್ರೀ ಹರಿ ವಿಠಲ ಪ್ರಕಾಶನದ ‘ಷಾಷ್ಟಿಕ ವಂಶ ಪ್ರದೀಪ’ ಎಂಬ ಪುಸ್ತಕ (1981)ದ ಪುಟ 155 ಹಾಗೂ 158 ರಲ್ಲಿ ‘ಶ್ರೀಜಯತೀರ್ಥರ ವೃಂದಾವನ ಸ್ಥಳ ಮಲಖೇಡ’ ಎಂಬುದಾಗಿ ಅದರ ಸಂಗ್ರಹಕಾರರಾದ ಶ್ರೀ ರಾಣ್ಯರಾಜಾರಾವ್ ಬರೆದಿದ್ದಾರೆ.

50. ಶ್ರೀ ಪ್ರಸನ್ನ ಶ್ರೀನಿವಾಸದಾಸರು ತಮ್ಮ 'ಶ್ರೀಜಯತೀರ್ಥ ವಿಜಯ' ವೆಂಬ ಕೀರ್ತನೆಯಲ್ಲಿ.... "ತಮ್ಮ ಗುರುಕ್ಷೇತ್ರ ಮಳಖೇಡ ಸೇರಿದರು.

ಮಳಖೇಡ ಕ್ಷೇತ್ರದಲ್ಲಿ ಕಾಗಿನೀ ನದಿ ತೀರ

.... ಅಕ್ಷೋಭ್ಯರ ವೃಂದಾವನ....

ಜಯರಾಯ ಅಲ್ಲಿಯೇ ನಿಂತರು..............

ವೃಂದಾವನದಲ್ಲಿ "--- ಎಂದು ಬರೆದಿದ್ದಾರೆ.

51. 'ತಂದೆ ವೆಂಕಟೇಶ ವಿಠಲರು' 'ಶ್ರೀಮಜ್ಜಯಾರ್ಯ ನಮಃ'... ಎಂಬ ತಮ್ಮ ಕೃತಿಯಲ್ಲಿ -

"ಧರೆಯೊಳಿದ್ದ ತೀರ್ಥಕ್ಷೇತ್ರಗಳನ್ನೆಲ್ಲ ಚರಿಸಿ ಮತ ಸಾಮ್ರಾಜ್ಯ ಹರಹಿ - .... ಯರಗೋಳದಲಿ ತಪವಾಚರಿಸಿ ಅನಂತರದಿ ಗುರುಗಳ ಸಮೀಪವನು ಸಾರಿ **ಮಳಖೇಡದಲಿ** ವರ ವಿಭವ ಆಷಾಢ ಕೃಷ್ಣ ಪಂಚಮಿ ಕಳೇಬರವನಿಟ್ಟ..... ಎಂದು ಸ್ಪಷ್ಟ ಬರೆದಿದ್ದಾರೆ.

52. ಶ್ರೀ ಉರಗಾದ್ರಿ ವ್ಯಾಸ ವಿಠಲರು (ಪೂರ್ವ ಅಂಕಿತ - ಶ್ರೀ ವೆಂಕಟೇಶ) "ಜಯತೀರ್ಥ ಮುನಿವರ್ಯ ದಯೆತೋರಿ ಪೊರೆಯಯ್ಯ" - ಎಂಬ ತಮ್ಮ ಕೀರ್ತನೆಯಲ್ಲಿ "ಇಳೆಯೊಳಗೆ ನಿನ್ನಂತಹ ಕರುಣಾಳಿಗಳ ಕಾಣೆ...

ಮಳಖೇಡ ನಿವಾಸ ಯತಿಕುಲಧೀಶ-

ಎಂಬುದಾಗಿ ಬರೆದಿದ್ದಾರೆ.

53. 'ಶ್ರೀ ಗುರುಗೋವಿಂದ ವಿಠಲ' ದಾಸರು ತಮ್ಮ -

i. "ರಥವೇರಿ ಬರುತಿಹ ಗುರುವರನ್ಯಾರೆ ಪೇಳಮ್ಮಯ್ಯ" ಎಂಬ ಕೃತಿಯಲ್ಲಿ ಚಾಮೀರಾಕೃತ ಚಾಮರ ಛತ್ರಗಳಿಂದ - ಭೂಮಿಸುರರಿಗತಿ ಪ್ರೇಮದಿ ಸುಧೆಯನುಣಿಸಿದ ----- ಭೂಮಿಜಾವರ ಶ್ರೀರಾಮಪದಾರ್ಚಕ ಶ್ರೀ **ಮಳಖೇಡ** ಸುಧಾಮ ಕಣಮ್ಮ" ॥ 4 ॥

ii. 'ವಾದಿವದನ ಕುಮುದ ಸೂರ್ಯ' - ಎಂಬ ಕೃತಿಯಲ್ಲಿ ತೀರ್ಥಕ್ಷೇತ್ರಗಳ ಸಂಚರಿಸಿ ...... ಜಯತೀರ್ಥ **ಕಾಗಿನೀ ತಟದಿ** ನೆಲೆಸಿ ಎಂದು ಉಲ್ಲೇಖಿಸಿದ್ದಾರೆ.

54. ಶ್ರೀ ಆನಂದ ತೀರ್ಥ. ರಾ. ಪಂಚಮುಖಿಯವರಿಂದ ಸಂಗ್ರಹಿಸಲ್ಪಟ್ಟು "ಶ್ರೀ ಗುರುಸಾರ್ವಭೌಮ ರಾಘವೇಂದ್ರ ಪ್ರತಿಷ್ಠಾನ", ಧಾರವಾಡ ಇವರಿಂದ 1981–82ರಲ್ಲಿ ಪ್ರಕಾಶಿಸಲ್ಪಟ್ಟ "ಶ್ರೀ ಹರಿವಾಯು ಗುರುಗಳ ಸ್ತೋತ್ರ ಪರವಾದ ಗದ್ಯ ಸಂಗ್ರಹ" ಎಂಬ ಪುಸ್ತಕದ ಪುಟ 35 ರಲ್ಲಿ ಶ್ರೀ ಜಯವೆಂಕಟ ವಿರಚಿತ (ಪ್ರಾಯಃ ತ್ರ್ಯಂಬಕಶಾಸ್ತ್ರಿಗಳ ಸಮಕಾಲೀನರು – 1780 ರಿಂದ 1850) "ಶ್ರೀ ಜಯತೀರ್ಥ ದಂಡಕಮ್" ಎಂಬ ಗದ್ಯದ ಆರಂಭದಲ್ಲಿಯೇ

"ಜಯತೀರ್ಥವರ್ಯಂ ಮಹಾಯೋಗಿಧುರ್ಯಂ ವೃಂದಾರ ಕಾರಾಮ ಸಂತಾನಕಲ್ಪದ್ರುಮಾಸಕ್ತ ಮಂದಾರಪುಷ್ಪಾಳಿ ಸೌರಭ್ಯ ನಿಷ್ಯಂದ ಮಂದಾಕಿನೀಭೂತ ಕಾಕುರ್ವಿಣೀ ತೀರ ವರ್ಷಾಖ್ಯ ಖೇಟಾಧಿವಾಸಮ್........"

ಎಂದಿದೆ.

ಇಷ್ಟೇ ಅಲ್ಲದೆ ಇನ್ನೂ ಅನೇಕ ಪ್ರಾಚೀನ ಹಾಗೂ ಅರ್ವಾಚೀನ ವಿದ್ವಾಂಸರು ದಾಸ ಹಾಗೂ ವ್ಯಾಸಕೂಟದ ಧುರೀಣರು ಮಳಖೇಡದಲ್ಲಿ ಕಾಗಿನೀ ತೀರದಲ್ಲಿ ಶ್ರೀ ಜಯತೀರ್ಥರ ಮೂಲ ವೃಂದಾವನವಿದೆಯೆಂದು, ದಾಖಲಿಸಿರುವುದನ್ನು ಕಾಣಬಹುದು.

ಶ್ರೀಮಜ್ಜಯತೀರ್ಥರ ಮೂಲವೃಂದಾವನ ನವವೃಂದಾವನದಲ್ಲಿಲ್ಲ ಎಂಬ ಬಗ್ಗೆ ಕೆಲವು ಆಧಾರಗಳು.

1. "ಶ್ರೀಮದ್ಧರಿಕಥಾಮೃತಸಾರ" ಕರ್ತೃಗಳಾದ ಜಗತ್ಪಸಿದ್ಧರಾದ ಶ್ರೀಜಗನ್ನಾಥದಾಸರು (ಕ್ರಿ.ಶ. 1728-1809) ತಮ್ಮ 'ನವವೃಂದಾವನಗಳ ಪದ್ಯ'ದಲ್ಲಿ ನವವೃಂದಾವನಗಳಲ್ಲಿ ವಿರಾಜಿಸುತ್ತಿರುವ ಯತಿಗಳು ಯಾರ್‍ಯಾರು ? ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಕೊಟ್ಟು ಉಪಕರಿಸಿದ್ದಾರೆ. ಆ ಪದ್ಯದಲ್ಲಿ ಶ್ರೀಮಜ್ಜಯತೀರ್ಥರ ಹೆಸರೇ ಇಲ್ಲ. ಆದರೆ ಶ್ರೀರಘುವರ್ಯರ ಹೆಸರನ್ನು ಉಲ್ಲೇಖಿಸಿದ್ದಾರೆಂಬುದನ್ನು ಗಮನಿಸಿದರೆ ನವವೃಂದಾವನದಲ್ಲಿ ಶ್ರೀ ಜಯತೀರ್ಥರ ವೃಂದಾವನವಿಲ್ಲ ವೆಂಬುದು ಸ್ಪಷ್ಟ.

"ನವವೃಂದಾವನ ಪದ್ಯ" ಶ್ರೀ ಜಗನ್ನಾಥದಾಸರು[12]

"ವೃಂದಾವನಗಳಿಗಾ ನಮಿಪೆ ನಿತ್ಯ ॥ ಪ ॥
ನಂದತೀರ್ಥರ ಮತೋದ್ಧಾರಕರೆನಿಪ ನವ ॥ ಅ.ಪ ॥

ವರ ಮಧ್ವಮುನಿ ವಿಮಲ ಕರಪದ್ಮ ಸಂಜಾತ
ಗುರು ಪದ್ಮನಾಭ ರಾಮರ ಕವೀಂದ್ರ ತತ್
ಕರಸರೋರುಹ ಜಾತ ವಾಗೀಶ ಮುನಿಪ ರಘು -
ವರ್ಯ ಗೋವಿಂದಾಖ್ಯರೊಡೆಯರ ಪವಿತ್ರತಮ ॥ 1 ॥

ಶ್ರೀಸುರೇಂದ್ರಾರ್ಯರ ಪ್ರಪುತ್ರರೆನಿಪ ಸುಧೀಂದ್ರ
ವ್ಯಾಸರಾಯರ ಶ್ರೀನಿವಾಸ ಮುನಿಯ ।

---

12. ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ವಿಭಾಗದಿಂದ ಪ್ರಕಟಿತ - "ಶ್ರೀ ಜಗನ್ನಾಥದಾಸರ ಕೀರ್ತನೆಗಳು (ಪಂಡಿತರ ಆವೃತ್ತಿ) ಪುಟ 198."

ಭೂಸುರರು ಪರಮ ಸಂತೋಷದಲಿ ಸ್ಮರಿಪೆ ನಿರ್
ದೋಷರನೆ ಮಾಡಿ ಅಭಿಲಾಷೆ ಪೂರೈಸುತಿಹ ॥ 2 ॥

ದೇವತೆಗಳಿವರು ಸಂದೇಹ ಪಡೆಸಲ್ಲ ಮಿ – ।
ಥ್ಯಾವಾದಿಗಳ ಪರಾಭವರ ಮಾಡಿ ।
ಈ ವಸುಂಧರೆಯೊಳಗೆ ಕೀರ್ತಿಯುತರಾಗಿ ಲ –
ಕ್ಷ್ಮೀ ವರ ಜಗನ್ನಾಥ ವಿಠಲ ನೈದಿಹರ ॥ 3 ॥

2. ನವವೃಂದಾವನದಲ್ಲೇ ತಮ್ಮ ಇಡೀ ಜೀವನದ ಬಹುಭಾಗ ಕಳೆದ ಶ್ರೀ ಪಿ. ವಿಷ್ಣುತೀರ್ಥರಿಗೆ ಶ್ರೀ. ಟಿ.ಕೆ. ವೇಣುಗೋಪಾಲದಾಸರೇ ಖುದ್ದಾಗಿ ಮೇಲೆ ಉದಾಹರಿಸಿದ ಶ್ರೀಜಗನ್ನಾಥದಾಸರ ನವವೃಂದಾವನ ಪದ್ಯವನ್ನು ಕೊಟ್ಟಿದ್ದಾರೆಂಬ ವಿಷಯ ಶ್ರೀ ಪಿ. ವಿಷ್ಣುತೀರ್ಥರೇ "ಯಂತ್ರೋದ್ಧಾರಕ ಮತ್ತು ನವವೃಂದಾವನ" ಎಂಬ ತಮ್ಮ ಪುಸಕ್ತದಲ್ಲಿ ಉಲ್ಲೇಖಿಸಿದ್ದಾರೆ. ಆ ಪುಸಕ್ತದಲ್ಲೂ ಶೀರಘುವರ್ಯರೆಂದೇ ಬರೆದಿದ್ದಾರೆ. ಶ್ರೀ ಜಯತೀರ್ಥರ ಉಲ್ಲೇಖವಿಲ್ಲ.[13]

3. ಶ್ರೀರಘೂತ್ತಮತೀರ್ಥರ ಗುರುಗಳಾದ ಶ್ರೀರಘುವರ್ಯರ ವೃಂದಾವನ ನವವೃಂದಾವನದಲ್ಲಿದೆ ಎಂಬುದು ಶ್ರೀಮದುತ್ತರಾದಿ ಮಠದಲ್ಲಿ ವಿರಾಜಮಾನರಾಗಿದ್ದ ಶ್ರೀ ಸತ್ಯಾಭಿನವತೀರ್ಥರಿಂದ (ಕ್ರಿ.ಶ. 1673–1706) ರಚಿತವಾದ "ಗುರುಚರಿತ್ರೆ" ವೆಂಬ ಗ್ರಂಥದಲ್ಲಿ ಉಲ್ಲೇಖವಿದೆ.[14]

---

13. ಇದೇ ಶ್ರೀ ಟಿ.ಕೆ. ವೇಣುಗೋಪಾಲದಾಸರೇ "ಶ್ರೀಜಯತೀರ್ಥರ ಮೂಲ ವೃಂದಾವನ" ಎಂಬ ತಮ್ಮ ಪುಸ್ತಕದಲ್ಲಿ ಶ್ರೀ ರಘುವರ್ಯತೀರ್ಥರ ಹೆಸರುಳ್ಳ ಪದ್ಯವನ್ನು ತೆಗೆದು ಶ್ರೀ ಜಯತೀರ್ಥರ ಹೆಸರುಳ್ಳ ಪದ್ಯ ಉದಾಹರಿಸಿರುವುದು ಗಮನಾರ್ಹ. ಮೈಸೂರು ವಿಶ್ವವಿದ್ಯಾಲಯದವರು ಶ್ರೀ ಜಯತೀರ್ಥರ ಹೆಸರುಳ್ಳ ಈ ಪದ್ಯವನ್ನು ನಿರಾಕರಿಸಿದ್ದಾರೆ.
14. ದಿ। ಪಂ। ಚಿಕ್ಕೇರೂರು ಗೋವಿಂದಾಚಾರ್ಯರ ಹಸ್ತ ಪ್ರತಿಗಳಿಂದ.

4. ಶ್ರೀಮದುತ್ತರಾದಿಮಠದ ಶ್ರೀಸತ್ಯಜ್ಞಾನತೀರ್ಥರು (ಕ್ರಿ.ಶ. 1906–13) ನವವೃಂದಾವನಕ್ಕೆ ಭೇಟಿ ಕೊಟ್ಟಾಗ ನದೀ ಪ್ರವಾಹದಿಂದ ಬಿದ್ದು ಹೋಗಿರುವ ವೃಂದಾವನಗಳ ಅವಸ್ಥೆ ನೋಡಿ ಬ್ರಾಹ್ಮಣರಿಂದಲೇ ಗಾರೆ ರುಬ್ಬಿಸಿ ಗಚ್ಚು ಮಾಡಿಸಿ ವೃಂದಾವನಗಳ ಜೀರ್ಣೋದ್ಧಾರ ಮಾಡಿಸಿದ ವಿಷಯವನ್ನು ದಾಖಲಿಸಿರುವ ಪ್ರತ್ಯಕ್ಷ ಸಾಕ್ಷಿಗಳಾದ ಶ್ರೀಚಿತ್ತವಾಡಿಗಿ ಹನುಮಂತರಾಯರ 'ನವವೃಂದಾವನ' ಎಂಬ ಪುಸ್ತಕದಲ್ಲೂ ಶ್ರೀ ಜಯತೀರ್ಥರ ಹೆಸರಿಲ್ಲದಿರುವುದು ಹಾಗೂ ಶ್ರೀರಘುವರ್ಯರ ಹೆಸರಿರುವುದನ್ನು ನೋಡಬಹುದು.

5. ಶ್ರೀಮಟ್ಟೀಕಾರಾಯರು ವೃಂದಾವನ ಪ್ರವೇಶ ಮಾಡಿದ ದಿನದಿಂದ ಹಿಡಿದು ಇಂದಿನವರೆಗೆ (600 ವರ್ಷ ಸತತ) ಎಲ್ಲ ಮಾಧ್ವ ಪೀಠಾಧಿ ಪತಿಗಳು ಶ್ರೀ ಟೀಕಾರಾಯರ ದರ್ಶನಕ್ಕಾಗಿ ನವವೃಂದಾವನಕ್ಕೆ ಹೋಗದಿರುವುದು ಮಳಖೇಡಕ್ಕೆ ಹೋಗಿರುವುದು ಪ್ರಬಲ ಸಾಕ್ಷಿ.

6. ಎಲ್ಲ ಮಠದ ಪೂರ್ವೀಕರಲ್ಲಿ ಯಾರೇ ಆಗಲಿ ನವವೃಂದಾವನದಲ್ಲಿ ಶ್ರೀಮಜ್ಜಯತೀರ್ಥರ ಆರಾಧನೆ ಮಾಡಿದ ದಾಖಲೆಗಳಿಲ್ಲ. ಶ್ರೀ ಪದ್ಮನಾಭತೀರ್ಥರ, ಶ್ರೀಕವೀಂದ್ರರ ಶ್ರೀವಾಗೀಶರ ಆರಾಧನೆಯ ಹಕ್ಕಿಗಾಗಿ ಕೆಲವು ದಶಕಗಳಿಂದ ಕೋರ್ಟು ಕಟ್ಟೆ ಹತ್ತಿದವರೂ ಸಹ ನವ ವೃಂದಾವನದಲ್ಲಿ ಶ್ರೀಜಯತೀರ್ಥರ ಬಗ್ಗೆ ಚಕಾರ ಎತ್ತದಿರುವುದು ಆರಾಧನೆ ಮಾಡದಿರುವುದು, ಪ್ರತ್ಯಕ್ಷ ಆಧಾರವೇ ಸರಿ.

7. ನವವೃಂದಾವನದಲ್ಲಿರುವ ಶ್ರೀರಘುವರ್ಯರ (ಕ್ರಿ.ಶ. 1502–57) ವೃಂದಾವನ ಶ್ರೀಜಯತೀರ್ಥರದ್ದಲ್ಲವೆನ್ನಲು ಆ ವೃಂದಾವನಕ್ಕೆ ಸರ್ಪ ಚಿಹ್ನೆಗಳಿಲ್ಲದಿರುವುದೂ ಗಮನಾರ್ಹವಾದ ಅಂಶ. ಮಳಖೇಡದಲ್ಲಿಯ ಮೂಲವೃಂದಾವನಕ್ಕೆ , ಶ್ರೀಜಯತೀರ್ಥರು ತಪಸ್ಸು ಮಾಡಿದ

ಯರಗೋಳ ಗುಹೆಯ ಬಂಡೆಗೆ ಮಾದನೂರು ಶ್ರೀ ವಿಷ್ಣುತೀರ್ಥರ ವೃಂದಾವನ ಮೇಲ್ಭಾಗದಲ್ಲಿ ಕೊರ್ಲಹಳ್ಳಿಯ ಶ್ರೀ ಸತ್ಯವೀರತೀರ್ಥರ ವೃಂದಾವನದ ಬಲಭಾಗದಲ್ಲಿರುವ ಬಂಡೆಯಲ್ಲಿ ಸನ್ನಿಹಿತರಾಗಿರುವಲ್ಲಿ ಸರ್ಪಾಕೃತಿಯ ಚಿಹ್ನೆಗಳಿರುವುದು ಅದ್ಯಾಪಿ ಕಾಣಬಹುದು. (ಈ ವಿಷಯದಲ್ಲಿ "ಪಾವಿನ ಪರಿಯಲಿ ಇಲ್ಲಿ ಇರುತಿಪ್ಪ" ಎಂಬ ಶ್ರೀ ವಿಜಯದಾಸರ ಸುಳಾದಿ ಪೋಷಕವಾಗಿದೆ.)

8. ನವವೃಂದಾವನದಲ್ಲಿ ವಿರಾಜಮಾನರಾದ ಯಾವ ಯತಿಗಳ ಚರಿತ್ರೆಯಲ್ಲೂ "ಇವರು ನವವೃಂದಾವನದಲ್ಲಿರುವ ಶ್ರೀಮಜ್ಜಯತೀರ್ಥರ ಸನ್ನಿಧಾನದಲ್ಲಿ ವೃಂದಾವನಸ್ಥರಾದರು" ಎಂಬ ಉಲ್ಲೇಖ ಬರುವುದಿಲ್ಲ.

9. ಶ್ರೀಮಜ್ಜಯತೀರ್ಥರನ್ನು ಶ್ರೀವಾದಿರಾಜ ಪ್ರಭೃತಿಗಳು ತಮ್ಮ 'ತೀರ್ಥಪ್ರಬಂಧದಲ್ಲಿ' ವರ್ಣಿಸಿದ್ದಾರೆ. ಆದರೆ ಎಲ್ಲೂ ಮೂಲ ವೃಂದಾವನದ ಬಗ್ಗೆ ಚಕಾರ ಎತ್ತಿಲ್ಲ. ನವವೃಂದಾವನದಲ್ಲೇ ವರ್ಣಿಸಿದ್ದಾರೆ ಎಂದು ಹೇಳಲು ಯಾವ ಶಬ್ದಗಳೂ ಶ್ರೀವಾದಿರಾಜರ ಮೂಲ ಶ್ಲೋಕದಲ್ಲಿಲ್ಲ. ಅಷ್ಟೇ ಅಲ್ಲದೆ ಶ್ರೀ ಜಯತೀರ್ಥರನ್ನು ವರ್ಣಿಸುವ ಈ ಶ್ಲೋಕಕ್ಕೆ ಶ್ರೀ ನಾರಾಯಣಾಚಾರ್ಯರ ವ್ಯಾಖ್ಯಾನದ ಅನೇಕ ಹಸ್ತ ಪ್ರತಿಗಳಲ್ಲೂ 'ಗಜಗಹ್ವರೇ' ಎಂಬ ಪದವಿಲ್ಲ. ಸುಮಾರು ಎಂಟು ಪ್ರಾಚೀನ ಹಸ್ತಪ್ರತಿಗಳನ್ನು ಅವಲೋಕಿಸಿದಾಗ ಯಾವ ಪ್ರತಿಯಲ್ಲೂ "ಗಜಗಹ್ವರೇ ಜಯತೀರ್ಥಂ ವರ್ಣಯತಿ" ಎಂಬುದಾಗಿ ಇಲ್ಲ.[15] ಕೇವಲ "ಜಯತೀರ್ಥಂ ವರ್ಣಯತಿ" ಎಂದು ಕೆಲವು ಹಸ್ತಪ್ರತಿಗಳಲ್ಲಿ

15. ಈ ವಿಷಯದಲ್ಲಿ ಡಾ. ಪ್ರಭಂಜನಾಚಾರ್ಯ ವ್ಯಾಸನಕೆರೆಯವರ ತೀರ್ಥಪ್ರಬಂಧ ಪುಸ್ತಕ (ಸಂಸ್ಕೃತ ವ್ಯಾಖ್ಯಾನ ಸಮೇತ-2005-2006) ನೋಡುವುದು.

"ಜಯತೀರ್ಥಾಚಾರ್ಯಂ ವರ್ಣಯತಿ" ಎಂದು ಇನ್ನು ಕೆಲವು ಹಸ್ತ ಪ್ರತಿಗಳಲ್ಲಿ ಉಂಟು. "ಗಜಗಹ್ವರೇ" ಎಂಬ ಪದವೇ ಇಲ್ಲ. (ಈ ವಿಷಯದ ಬಗ್ಗೆ ಮುಂದಿನ ಪುಟಗಳಲ್ಲಿ 'ವಿಮರ್ಶೆ'ಯ ಶೀರ್ಷಿಕೆಯಲ್ಲಿ ಚರ್ಚಿಸಲಾಗಿದೆ.)

10. ನವವೃಂದಾವನ ಗಡ್ಡೆಯಲ್ಲಿರುವ ವೃಂದಾವನಗಳಲ್ಲಿ ಇಂತಹವರ ವೃಂದಾವನ ಇದೇ ಎಂದು ಖಚಿತವಾಗಿ ಹೇಳಲು ಯಾವ ಆಧಾರವಿಲ್ಲ. ಅನೂಚಾನವಾಗಿ ಪೀಠಾಧಿಪತಿಗಳಿಂದ ಅರ್ಚಕರಿಂದ ಹೇಳಿಕೊಂಡು ತಿಳಿದುಕೊಂಡು ಆರಾಧನೆಗಳನ್ನು ಮಾಡುತ್ತ ಬಂದಿರುವುದೇ ಪ್ರಮಾಣ ಎನ್ನುವುದನ್ನು ಗಮನಿಸಿದಾಗಲೂ ಶ್ರೀ ರಘುವರ್ಯರ ವೃಂದಾವನವೆಂದೇ ಸಿದ್ಧಿಸುತ್ತದೆ.

11. "ಶ್ರೀ. ಗುರುವಂಶ ಕಥಾಕಲ್ಪತರು" ಎಂಬ ಪ್ರಸಿದ್ಧ ಗ್ರಂಥದಲ್ಲಿ "ಶ್ರೀ ರಘುವರ್ಯತೀರ್ಥರ ವೃಂದಾವನ ನವವೃಂದಾವನದಲ್ಲಿದೆ ಎಂಬ ಉಲ್ಲೇಖ ಸ್ಪಷ್ಟವಾಗಿದೆ.

12. ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ "ಶ್ರೀ ಜಗನ್ನಾಥದಾಸರ ಕೀರ್ತನೆಗಳು" (ಪಂಡಿತ ಆವೃತ್ತಿ) ಪುಟ 198ರಲ್ಲಿ – "ನವ ವೃಂದಾವನಗಳಲ್ಲಿ ಶ್ರೀ ಜಯತೀರ್ಥರ ವೃಂದಾವನವೂ ಒಂದು ಎಂದು ಕೆಲವರು ಹೇಳಿದರೂ ನಮಗೆ ಸಿಕ್ಕಿರುವ ಎಲ್ಲ ಪ್ರತಿಗಳಲ್ಲಿ ಜಯತೀರ್ಥರ ಹೆಸರೇ ಇಲ್ಲ" ಎಂಬುದಾಗಿ ಉಲ್ಲೇಖಿಸಿರುವುದು ಗಮನಾರ್ಹ.

13. ಶ್ರೀ ಮದ್ವಾದಿರಾಜರು ತೀರ್ಥಪ್ರಬಂಧದಲ್ಲಿ ಮಧ್ವಸಿದ್ಧಾಂತವೆಂಬ ಭೂಮಿಯನ್ನು ಹೊತ್ತ ದಿಗ್ಗಜಗಳು ಇಲ್ಲಿ (ಗಜಗಹ್ವರ – ಆನೆಗೊಂದಿ)

ಶೋಭಿಸುತ್ತಿವೆ. ಎಂದಿದ್ದಾರೆ. ದಿಗ್ಗಜಗಳೆಂದರೆ ಎಂಟೇ ಎಂದು ನಿರ್ಣಯಿಸುವುದು ಸರಿಯಲ್ಲ. ವ್ಯಾಖ್ಯಾನಕಾರರೂ ಎಂಟು ಎಂಬುದಾಗಿ ತಿಳಿಸಲಿಲ್ಲ. ಅಲ್ಲದೆ ಆ ದಿಗ್ಗಜಗಳಾದ ಯತಿಗಳು ಯಾರ್‍ಯಾರು? ಒಬ್ಬೊಬ್ಬ ಸಂಶೋಧಕರು ಒಂದೊಂದು ರೀತಿಯಲ್ಲಿ ಊಹಿಸಿ ತಿಳಿಸಲು ಪ್ರಯತ್ನಿಸಿದ್ದಾರೆ. ಹೀಗಾಗಿ ದಿಗ್ಗಜಗಳೆಂದರೆ ಎಂಟೇ ಎಂಬುದನ್ನಾಗಲಿ ಆ ಎಂಟರಲ್ಲಿ ಯಾರ್‍ಯಾರು ವೃಂದಾವನಸ್ಥರಾಗಿದ್ದರು ಎಂಬುದನ್ನಾಗಲಿ ಯಾವ ವೃಂದಾವನ ಯಾರದ್ದು ಎಂಬುದನ್ನಾಗಲಿ ಸಪ್ರಮಾಣವಾಗಿ ನಿರ್ಣಯಿಸಲು ಸಾಧ್ಯವಿಲ್ಲವಾದ ಕಾರಣ ಶ್ರೀ ಜಯತೀರ್ಥರ ವೃಂದಾವನ ನವವೃಂದಾವನದಲ್ಲಿದೆ ಎಂದು ತಿಳಿಯಲಾಗದು.

14. ಪ್ರಸಿದ್ಧ ಸಂಶೋಧಕರಾದ ಶ್ರೀಕಸಗಾರು ಮಾಧವರಾಯರು “ತಮ್ಮ ಆರ್ಯ ಅಕ್ಷೋಭ್ಯತೀರ್ಥ ಸಂಸ್ಥಾನ” ಎಂಬ ಪುಸ್ತಕದಲ್ಲಿ “ತುಂಗಭದ್ರಾ ನದಿಯ ತಟಾಕದಲ್ಲಿ ಪ್ರಖ್ಯಾತ ಸಂನ್ಯಾಸಿಗಳು ಹರಿದಾಸರು ತಮ್ಮ ಕಾರ್ಯಕ್ಷೇತ್ರ ಸ್ಥಾಪಿಸಿದ್ದಾರೆಂದು ತಿಳಿಸುತ್ತ ನವವೃಂದಾವನದಲ್ಲಿ ವೃಂದಾವನಸ್ಥರಾದ ಯತಿಗಳ ಪಟ್ಟಿಯಲ್ಲಿ ಶ್ರೀ ರಘುವರ್ಯರನ್ನು ಉಲ್ಲೇಖಿಸಿದ್ದಾರೆ. ಶ್ರೀ ಜಯತೀರ್ಥರನ್ನಲ್ಲ.

15. ಅರವತ್ತರ ದಶಕದ ಡೆಪ್ಯುಟಿ ಕಮೀಷನರ್ ದಿ। ವೆಂಕೋಬರಾಯರು ತಮ್ಮ ಗ್ರಂಥವಾದ ವ್ಯಾಸಯೋಗಿ ಚರಿತೆಯ ಉಪೋದ್ಘಾತದ ಪುಟ cxxvi ದಲ್ಲಿ "Raghunatha Thirtha died ..... successor Raghuvarya Thirtha evidently moved to the Vijayanagar Empire and he died....." ಎಂದಿದ್ದಾರೆ. ಇದರಿಂದ ಶ್ರೀ ರಘುವರ್ಯರಿಗೂ ವಿಜಯನಗರ

ಸಾಮ್ರಾಜ್ಯಕ್ಕೂ ಸಂಬಂಧವಿದ್ದುದು ಸ್ಪಷ್ಟ. ಆದರೆ ಶ್ರೀ ಜಯತೀರ್ಥರು ವಿಜಯನಗರಕ್ಕೆ ಅಥವಾ ಅದರ ಸುತ್ತಮುತ್ತಲಿನ ಪ್ರಾಂತವಾದ ಗಜಗಹ್ವರಕ್ಕೆ ಅದೂ ಸಹ ಅವರ ಕೊನೆಯ ಕಾಲಕ್ಕೆ ಬಂದ ಉಲ್ಲೇಖಗಳು ಎಲ್ಲೂ ಇಲ್ಲವೆಂಬುದು ಗಮನಾರ್ಹ. ಇದರಿಂದ ವಿಜಯನಗರಕ್ಕೆ ಸೇರಿದ ನವವೃಂದಾವನದಲ್ಲಿ ಶ್ರೀ ರಘುವರ್ಯರು ವೃಂದಾವನಸ್ಥರಾದರೆಂದು ತಿಳಿಯುತ್ತದೆ. ಶ್ರೀ ಜಯತೀರ್ಥರಲ್ಲ.

16. ಪ್ರಾಚೀನದಿಂದಲೂ ಸುಪ್ರಸಿದ್ಧವಿರುವ "ಪದ್ಮನಾಭಂ ಕವೀಂದ್ರಂ ಚ [16] ವಾಗೀಶಂ ವ್ಯಾಸರಾಜಕಮ್ ರಘುವರ್ಯಂ ಶ್ರೀನಿವಾಸಂ ರಾಮತೀರ್ಥ ತಥೈವ ಚ । ಶ್ರೀ ಸುಧೀಂದ್ರಂ ಚ ಗೋವಿಂದಂ ನವವೃಂದಾವನಂ ಭಜೇ ॥" ಎಂಬ ನವವೃಂದಾವನಗಳ ಶ್ಲೋಕದಲ್ಲಿ ಶ್ರೀಜಯತೀರ್ಥರ ಹೆಸರಿಲ್ಲ. ಈ ಶ್ಲೋಕದ ಕರ್ತೃಗಳಾರೆಂದು ತಿಳಿದು ಬಂದಿಲ್ಲವಾದರೂ ತುಂಬಾ ಹಿಂದಿನಿಂದಲೂ ಎಲ್ಲರಿಂದ ಮಾನ್ಯವಾಗುತ್ತ ಬಂದಿರುವುದು ಗಮನಾರ್ಹ.

16. ಶ್ರೀ ಸಾಣೂರು ಭೀಮಭಟ್ಟರ ತೀರ್ಥಪ್ರಬಂಧದ ಅನುವಾದದ 3ನೇ ಆವೃತ್ತಿ (1984)ಯ 315 ಪುಟ ನೋಡುವುದು.

"ಕೆಲವರ ಕೆಲವು ಆಕ್ಷೇಪ ಹಾಗೂ ಊಹೆಗಳು"

ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿಲ್ಲ ನವವೃಂದಾವನದಲ್ಲಿರುವ ಶ್ರೀ ರಘುವರ್ಯತೀರ್ಥರ ವೃಂದಾವನವೇ ಶ್ರೀಮಜ್ಜಯತೀರ್ಥರ ಮೂಲ ವೃಂದಾವನವೆಂದು ಊಹಿಸುವವರು ಉದಾಹರಿಸುವ ಆಧಾರಗಳು ಸಮರ್ಥಿಸುವ ರೀತಿಗಳು ಈ ಕೆಳಕಂಡತಿವೆ –

1. ಶ್ರೀ ಭಾಷ್ಯದೀಪಿಕಾಚಾರ್ಯರಾದ ಶ್ರೀ ಜಗನ್ನಾಥ ಯತಿಗಳು "ಕಿಟಿತಟನಿ" ಎಂಬ ಗ್ರಂಥದಲ್ಲಿ ಲೇಖಿಸಿದ್ದಾರೆಂದು ಉಲ್ಲೇಖಿಸುವ ಶ್ಲೋಕ –

"ಪದ್ಮನಾಭಂ ಜಯಮುನಿಂ ಕವೀಂದ್ರಂ ವಾಗೀಶಯೋಗಿನಂ ।
ಗೋವಿಂದ ಭಿಕ್ಷುಕಂ ಚೈವ ವ್ಯಾಸರಾಜಂ ತಥೈವ ಚ ॥
ಶ್ರೀನಿವಾಸಂ ರಾಮತೀರ್ಥಂ ಸುಧೀಂದ್ರಂ ಭಾಸ್ಕರ ದ್ಯುತಿಂ ।
ನವವೃಂದಾವನೇ ಧ್ಯಾಯೇತ್ ನವಭಕ್ತಿ ಪ್ರಚೋದಕಾನ್ ॥"

ಈ ಶ್ಲೋಕದಲ್ಲಿ 'ಜಯಮುನಿಂ' ಎಂದಿರುವ ಕಾರಣ ಜಯತೀರ್ಥರ ವೃಂದಾವನ ನವವೃಂದಾವನದಲ್ಲಿದೆ.

– ಶ್ರೀ ಟಿ.ಕೆ. ವೇಣುಗೋಪಾಲದಾಸರ, "ಶ್ರೀಮಜ್ಜಯತೀರ್ಥರ ಮೂಲ ವೃಂದಾವನ"

2. ಶ್ರೀ ಮದ್ವಾದಿರಾಜರು ತಮ್ಮ ತೀರ್ಥ ಪ್ರಬಂಧದಲ್ಲಿ ಶ್ರೀಮಜ್ಜಯ ತೀರ್ಥರನ್ನು ವರ್ಣಿಸುವ ಶ್ಲೋಕ –

"ಮಾಧ್ವಗ್ರಂಥಾನ್ ಸ್ವಬಂಧೂನಿವ ಸರಸಹೃದಾಽಲಿಂಗ್ಯ ವಿಜ್ಞಾತಭಾವಃ
ಸಂಯೋಜ್ಯಾಲಂಕೃತಾಭಿಃ ಸ್ವ ಸಹಜ ಮತಿ ಸಂಭೂತವಾಗ್ಭಿರ್ವಧೂಭಿಃ ।
ಕೃತ್ವಾಽನ್ಯೋಕ್ತೀಶ್ಚ ದಾಸೀರ್ಬುಧ ಹೃದಯಗುಹಂ ಪ್ರೌಢವೃತ್ತೀಶ್ಚ ವೃತ್ತೀ ॥
ರ್ದತ್ವಾಽನ್ಯೋನ್ಯಾಭಿಯೋಗಂ ಜಯಮುನಿರಸಕೃದ್ವೀಕ್ಷ್ಯ ರೇಮೇ ಕೃತಾರ್ಥಃ ॥

ಎಂದಿದೆ.

ಹಾಗೂ ಈ ಶ್ಲೋಕಕ್ಕೆ ವ್ಯಾಖ್ಯಾನಿಸಿರುವ ಶ್ರೀ ನಾರಾಯಣಾಚಾರ್ಯರ ವಾಕ್ಯ – ''ಗಜಗಹ್ವರೇ ಜಯತೀರ್ಥಂ ವರ್ಣಯತಿ'' ಎಂದಿರುವ ಕಾರಣ ಗಜಗಹ್ವರ ಅಂದರೆ ನವವೃಂದಾವನದಲ್ಲಿ ಶ್ರೀ ಜಯತೀರ್ಥರ ವೃಂದಾವನವಿದೆ.

– ಶ್ರೀ ಟಿ.ಕೆ. ವೇಣುಗೋಪಾಲದಾಸರ ಶ್ರೀಮಜ್ಜಯತೀರ್ಥರ ಮೂಲವೃಂದಾವನ
– ಶ್ರೀ ಎಂ.ಆರ್. ಅನಂತಪದ್ಮನಾಭರಾವ್, ಶ್ರೀ ಜಯಮುನಿಗಳು.

3. ನವವೃಂದಾವನದಲ್ಲಿ ಶ್ರೀ ರಘುವರ್ಯರ ವೃಂದಾವನವೆಂದು ಪ್ರಾಚೀನದಿಂದಲೂ ಸುಪ್ರಸಿದ್ಧವಿರುವ ವೃಂದಾವನದ ಮೇಲಿರುವ ಎರಡು ಕೆತ್ತನೆಯ ಚಿತ್ರಗಳು. ಅದರಲ್ಲಿ ಒಂದು ಪೂರ್ವಾಶ್ರಮದ ಧೋಂಡೂರಾಯರದ್ದು, ಮತ್ತೊಂದು ಜಯತೀರ್ಥರದ್ದು, ಆಶ್ರಮ ಸ್ವೀಕರಿಸಿದ ಮೇಲಿನ ಚಿತ್ರ. ಹೀಗಾಗಿ ಶ್ರೀರಘುವರ್ಯರ ವೃಂದಾವನವೇ ಶ್ರೀ ಜಯತೀರ್ಥರದ್ದು.

- Dr. B.N.K. Sharma - The Philosophy of Madhwacharya, 2nd Edition.

4. ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿಯೇ ಎಂದು ಸ್ಪಷ್ಟವಾಗಿ ತಿಳಿಸುವ ಪ್ರಸಿದ್ಧವಾದ ಕೃತಿ ''ಟೀಕಾಚಾರ್ಯರ ಪಾದ ಸೋಂಕಿದ ಕೊನೆ ಧೂಳಿ...'' ಶ್ರೀವಿಜಯದಾಸರದ್ದಲ್ಲ ಮತ್ತು ಪಾಠ ಸರಿಯಿಲ್ಲ. ಯಾಕೆಂದರೆ ಈ ಕೃತಿಯಲ್ಲಿ

i) ಶ್ರೀ ಅಕ್ಷೋಭ್ಯತೀರ್ಥರನ್ನು 'ಯೋಗಿ' ಎಂದು ಅವರ ಶಿಷ್ಯರಾದ ಶ್ರೀ ಜಯತೀರ್ಥರನ್ನು ''ಯೋಗಿಗಳರಸ'' ಎಂದು ಹೇಳುವುದು ಅಪಚಾರ.

ii) ಈ ಕೃತಿಯ ಕೊನೆಯ ಸಾಲುಗಳಲ್ಲಿ 'ಗ'ಕಾರ ಪ್ರಾಸವಿಲ್ಲ.

iii) 'ಕಾಗಿನಿ ತಟವಾಸ' ಎಂದರೆ ಮಳಖೇಡ ವೆಂದೇ ಸಿದ್ಧವಾಗುತ್ತದೆ. ತಿರುಗಿ 'ಮಳಖೇಡ ನಿವಾಸ' ಎಂದಿರುವುದು ಪುನರುಕ್ತಿ. ಆದಕಾರಣ

iv) "ಕಾಗಿಣಿ ತೀರದ ಮಳಖೇಡ ನಿವಾಸ ಶ್ರೀ ಗುರು ವಿಜಯವಿಠಲ ಸೇವಕ ಭಕ್ತ" ಎಂಬುದೇ ಶುದ್ಧಪಾಠ. ಹೀಗಾಗಿ ಮಳಖೇಡದಲ್ಲಿರುವವನು ಗುರು ವಿಜಯವಿಠಲನೇ ಹೊರತು ಶ್ರೀ ಟೀಕಾರಾಯರಲ್ಲ. ಈ ಕೃತಿ ಶ್ರೀ ಮೊದಲಕಲ್ಲು ಶೇಷದಾಸರದ್ದು. ಶ್ರೀ ವಿಜಯದಾಸರದ್ದಲ್ಲ.

– ಶ್ರೀ ಟಿ.ಕೆ. ವೇಣುಗೋಪಾಲದಾಸರ ಶ್ರೀಮಜ್ಜಯತೀರ್ಥರ ಮೂಲವೃಂದಾವನ

5. ರಜತ ಶಾಸನದಲ್ಲಿ ವಿಜಯನಗರದ ಅರಸ ಶ್ರೀಕೃಷ್ಣದೇವರಾಯನು ಶ್ರೀ ಜಯತೀರ್ಥರನ್ನು ವರ್ಣಿಸುವ ಪದ್ಯ.

"ಪುಲಿಓಲ್ ಗುಹೆಯಲಿರ್ದು ಗೆಲಿದೆ ವಿದ್ಯಾರಣ್ಯರಂ
ಎಂತುಂಟೋ ವೈಯಾಕರಣ ಪ್ರತಿಭಾ ನಿನ್ನಲ್ಲಿ।
ಭುಜಂಗನಾಲಯದಲ್ಲಿ ಗಜಗೊಂದಲದಿ ನಿಂದೆ
ಜಯರಾಯ ಎಂತುಂಟೋ ನಿನ್ನಲ್ಲಿ ನಂದ ತೀರ್ಥರ ಮೋಹ"

ಎಂದಿದೆ. ಆದಕಾರಣ ನವವೃಂದಾವನದಲ್ಲಿ ಶ್ರೀಜಯತೀರ್ಥರ ವೃಂದಾವನವಿದೆ.

– ಶ್ರೀ ಟಿ.ಕೆ. ವೇಣುಗೋಪಾಲದಾಸರ ಶ್ರೀಮಜ್ಜಯತೀರ್ಥರ ಮೂಲವೃಂದಾವನ
– ಶ್ರೀ ಎಂ.ಆರ್. ಅನಂತಪದ್ಮನಾಭರಾವ್, ಶ್ರೀ ಜಯಮುನಿಗಳು.

6. ಮಳಖೇಡದಲ್ಲಿರುವ ಶ್ರೀ ಜಯತೀರ್ಥರ ವೃಂದಾವನವು ಮೃತ್ತಿಕಾ ವೃಂದಾವನವೇ ಹೊರತು ಮೂಲವೃಂದಾವನವಲ್ಲ. ಯಾಕೆಂದರೆ ಷಾಷ್ಟಿಕ ವಂಶದ ಕವಿ ರಾಘವೇಂದ್ರಪ್ಪ (ಕ್ರಿ.ಶ. 1801ರಲ್ಲಿದ್ದವ) ತನ್ನ

ವಂಶದವರು ಶ್ರೀ ಜಯತೀರ್ಥರ ವೃಂದಾವನದ ಅರ್ಚಕರಾಗಿ ಮಳಖೇಡದಲ್ಲಿದ್ದರು ಎಂದು ಹೇಳಿದ ವಾಕ್ಯಗಳಿವೆ. ("ಮಳಖೇಡೆಯೊಳು ಇರ್ಪರು. ಅಲ್ಲಿ ಟೀಕಾಚಾರ್ಯವರ್ಯ ಗುರು ಅಕ್ಷೋಭ್ಯತೀರ್ಥರ ಘನವೃಂದಾವನ ತಾನಿಹುದು ನಮ್ಮವರಲ್ಲಿ ಅರ್ಚಕರು) ಹೀಗಾಗಿ ಎಲ್ಲ ದಾಸವರೇಣ್ಯರೂ ಮೃತ್ತಿಕಾ ವೃಂದಾವನದ ವರ್ಣನೆಯನ್ನು ಮಾಡಿದ್ದಾರೆ.

– ಶ್ರೀ ಎಂ.ಆರ್. ಅನಂತಪದ್ಮನಾಭರಾವ್, ಶ್ರೀ ಜಯಮುನಿಗಳು.

7. ಶ್ರೀ ವಿಜಯದಾಸರು ತಮ್ಮ ಸುಳಾದಿಯಲ್ಲಿ – "ಋಷಿ ಕುಲೋತ್ತಮರಾದ ಜಯರಾಯರು ನಿತ್ಯ ಬೇಸನೆ ಬೇಸನೆ ಬಂದು ಗುಪ್ತದಲಿ ಪೂಜಿಸುವರು ಪ್ರೀತಿಲಿ ಏನೆಂಬೆನಾಚರ್ಯ" ಎಂದಿರುವ ಕಾರಣ ಶ್ರೀ ಜಯತೀರ್ಥರು ನಿತ್ಯವೂ ಗುಪ್ತದಲಿ ನವ ವೃಂದಾವನದಿಂದ ಮಳಖೇಡಕ್ಕೆ ಬಂದು ಗುರುಗಳಾದ ಶ್ರೀ ಅಕ್ಷೋಭ್ಯ ತೀರ್ಥರನ್ನು ಪೂಜಿಸುತ್ತಿದ್ದರು. ಅದನ್ನು ಶ್ರೀ ವಿಜಯದಾಸರು ಕಣ್ಣಾರೆ ಕಂಡಿದ್ದಾರೆ. ಆದಕಾರಣ ಶ್ರೀ ಜಯತೀರ್ಥರ ವೃಂದಾವನ ಮಳಖೇಡದಲ್ಲಿಲ್ಲ.

– ಶ್ರೀ ಟಿ.ಕೆ. ವೇಣುಗೋಪಾಲದಾಸರ ಶ್ರೀಮಜ್ಜಯತೀರ್ಥರ ಮೂಲವೃಂದಾವನ

– ಶ್ರೀ ಕಾಕೋಳು ರಾಘವೇಂದ್ರ – ಪರಿಮಳ ಪತ್ರಿಕೆ ಲೇಖನದಲ್ಲಿ

8. "ದಯದಿ ಪಾಲಿಸೋ ಜಯತೀರಥರಾಯ...."

ಆಷಾಢ ಬಹುಳ ಪಂಚಮಿಯು ಬರುತ/ಕಳೆಬರವನು ಬಿಡುತಾ। ವ್ಯಾಸ ವಿಠಲನ ಪಾದದಲೆ ನಿರುತ ಮಳಖೇಡದಿ ಸತತಾ। ವಾಸಿಪ ಪಾವಿನ ತೆರೆದೊಳು ಪ್ರಖ್ಯಾತ....." ಎಂಬ ಕೃತಿ ಶ್ರೀ ವಿಜಯದಾಸರ ಶಿಷ್ಯರಾದ ವ್ಯಾಸ ವಿಠಲರದ್ದಲ್ಲ. 20ನೇ ಶತಮಾನದ ಕೇಶವ ವಿಠಲರದ್ದು. ಹೀಗಾಗಿ ಗಮಕವಲ್ಲ.

– ಶ್ರೀ ಎಂ.ಆರ್. ಅನಂತಪದ್ಮನಾಭರಾವ್, ಶ್ರೀ ಜಯಮುನಿಗಳು.

... ಮುಂತಾದವುಗಳು,

ಆಕ್ಷೇಪ ಹಾಗೂ ಊಹೆಗಳ ವಿಮರ್ಶೆ

ಶ್ರೀಮಜ್ಜಯತೀರ್ಥರ ಮೂಲ ವೃಂದಾವನದ ಬಗ್ಗೆ ವಿವಾದ ಶುರುವಾದದ್ದು ಕೇವಲ 2–3 ದಶಕಗಳಿಂದ ಮಾತ್ರ. ಅದೂ ಸಹ ಮಠ ಮಠಗಳಲ್ಲಿ ತಿಕ್ಕಾಟ ಹೆಚ್ಚಾದ್ದಾಗ. ಅತ್ಯಂತ ಶೋಚನೀಯ ವಿಷಯವೆಂದರೆ ಈ ವಿಷಯದಲ್ಲಿ ಕೆಲವು ಸ್ವಾರ್ಥಪರರ ಬಲೆಗೆ ಕೆಲವು ಪ್ರಸಿದ್ಧ ವಿದ್ವಾಂಸರು ಸಿಕ್ಕು ಬಿದ್ದದ್ದು. ಇದಕ್ಕೆ ಮಹಾಭಾರತದಲ್ಲೂ ಸಾಕಷ್ಟು ನಿದರ್ಶನಗಳು ಸಿಗುತ್ತವೆ.

ಪ್ರಸಿದ್ಧ ವಿದ್ವಾಂಸರು ಎಂದ ಮಾತ್ರಕ್ಕೆ ಅವರು ಹೇಳಿದ್ದೆಲ್ಲ ಬರೆದದ್ದೆಲ್ಲ ಊಹಿಸಿದ್ದೆಲ್ಲ ಸತ್ಯವಾಗಲಾರದು. ಹೀಗಾಗಿ ಶ್ರೀಮಜ್ಜಯತೀರ್ಥರ ಮೂಲವೃಂದಾವನ ಮಳಖೇಡದಲ್ಲಿಲ್ಲ ನವವೃಂದಾವನದಲ್ಲಿರುವ ಶ್ರೀರಘುವರ್ಯತೀರ್ಥರ ವೃಂದಾವನವೇ ಶ್ರೀಮಜ್ಜಯತೀರ್ಥರದ್ದೆಂದು ಊಹಿಸುವ ಊಹೆಗೆ ತಕ್ಕಂತೆ ಉದಾಹರಿಸುವ ಪ್ರಮಾಣಾಭಾಸಗಳ ಶುಷ್ಕ ತರ್ಕಗಳ ವಿಮರ್ಶೆ ಈ ಭಾಗದಲ್ಲಿದೆ.

ಹಿಂದಿನ ಆಕ್ಷೇಪಗಳನ್ನು ಹಾಗೂ ಊಹೆಗಳನ್ನು ಒಂದೊಂದಾಗಿ ಕ್ರಮವಾಗಿ ವಿಮರ್ಶಿಸೋಣ –

1. ಶ್ರೀ. ಭಾಷ್ಯದೀಪಿಕಾಚಾರ್ಯರಾದ ಶ್ರೀಜಗನ್ನಾಥ ಯತಿಗಳು ರಚಿಸಿದ್ದೆಂದು ಹೇಳುವ "ಕಿಟಿತಟನಿ" ಎಂಬ ಗ್ರಂಥ ವಿದ್ವತ್ ಪ್ರಪಂಚದಲ್ಲೇ ಅಶ್ರುತಪೂರ್ವ. "ಪದ್ಮನಾಭಂ ಜಯಮುನಿಂ" – ಎಂಬ ಶ್ಲೋಕವನ್ನು ಉದಾಹರಿಸುತ್ತಿರುವವರು ಇದುವರೆಗೂ ಈ "ಕಿಟಿತಟನಿ" ಎಂಬ ಗ್ರಂಥ ಎಲ್ಲಿದೆ ಎಷ್ಟು ಶ್ಲೋಕಗಳಿವೆ ಎಂಬುದನ್ನು ತೋರಿಸಿ ಕೊಟ್ಟಿಲ್ಲ. ಅಲ್ಲದೆ ಶ್ರೀ ಪದ್ಮನಾಭಾದಿ ಪ್ರಾಚೀನ ಟೀಕಾಕಾರರನ್ನೂ ಸೇರಿಸಿ ಒಂಭತ್ತು ಯತಿಗಳನ್ನು ಒಟ್ಟಿಗೆ ಸ್ತುತಿಸುವಾಗ

ಶ್ರೀ ಸುಧೀಂದ್ರರಿಗೆ ಮಾತ್ರ ವಿಶೇಷಣ (ಭಾಸ್ಕರದ್ಯುತಿಂ) ಕೊಡಲು ಹೇಗೆ ಸಾಧ್ಯ? ಈ ಶ್ಲೋಕ ಛಂದೋಬದ್ಧವಾಗಿಲ್ಲ. ಅಲ್ಲದೆ ಇದೇ ಶ್ಲೋಕವನ್ನು ಶ್ರೀ ಜಯಮುನಿಗಳು ಎಂಬ ಪುಸ್ತಕದಲ್ಲಿ" ಕವೀಂದ್ರಂ ವಾಕ್ಪತಿಂ ತಥಾ-" ಎಂದು ತಿದ್ದಲಾಗಿದೆ. ಈ ಶ್ಲೋಕದ ಬಗ್ಗೆ ಆದರ ಮೂಲದ ಬಗ್ಗೆ ಸಾಕಷ್ಟು ವಿದ್ವಾಂಸರನ್ನು ಸಂಪರ್ಕಿಸಿ ವಿಚಾರ ಮಾಡಲಾಗಿದೆ ಹೀಗಾಗಿ ಈ ಶ್ಲೋಕ ಕೃತ್ರಿಮ.

2. ಕೆಲವರು ಶ್ರೀ ಮದ್ವಾದಿರಾಜತೀರ್ಥ ಪೂಜ್ಯ ಚರಣರ ತೀರ್ಥ ಪ್ರಬಂಧವನ್ನು ಆಧಾರವೆಂದು ಉದಾಹರಿಸುತ್ತ ಗಜಗಹ್ವರದಲ್ಲಿ (ನವವೃಂದಾವನದಲ್ಲಿ) ಶ್ರೀಮಜ್ಜಯತೀರ್ಥ ಪೂಜ್ಯ ಪಾದರ ಮೂಲ ವೃಂದಾವನವಿದೆ ಎಂದು ಸಾಧಿಸುವ ಸಾಹಸ ಮಾಡುತ್ತಿದ್ದಾರೆ. (ಈ ವಿಷಯವನ್ನು ವಿಮರ್ಶಿಸುವಾಗ ಸ್ವೋತ್ತಮ ದ್ರೋಹವಾಗದಂತೆ ಶ್ರೀ ವಾದಿರಾಜ ಪೂಜ್ಯ ಚರಣರ ಗ್ರಂಥವಾದ ತೀರ್ಥಪ್ರಬಂಧಕ್ಕೆ ವಿಪರೀತ ಅರ್ಥ ಕಲ್ಪನೆ ಮಾಡಿ ಅಗೌರವವಾಗದಂತೆ ಎಚ್ಚರ ವಹಿಸುವುದು ಅವಶ್ಯಕ). ವಿವಾದಾಸ್ಪದವಾದ ಈ ವಿಷಯವನ್ನು ಕೂಲಂಕುಷವಾಗಿ ವಿಮರ್ಶಿಸೋಣ.

i. 'ತೀರ್ಥಪ್ರಬಂಧ'ದ 'ಮಾಧ್ವಗ್ರಂಥಾನ್ ಸ್ವಬಂಧೂನಿವ.....' ಎಂಬ ಮೂಲ ಶ್ಲೋಕದಲ್ಲಿ[17] ಶ್ರೀ ಜಯತೀರ್ಥರ ವೃಂದಾವನದ ಬಗ್ಗೆ ಯಾವ ಚಕಾರವೂ ಇಲ್ಲ.[18]

---

17. ಮಾಧ್ವಗ್ರಂಥಾನ್ ಸ್ವಬಂಧೂನಿವ ಸರಸ ಹೃದಾಲಿಂಗ್ಯ ವಿಜ್ಞಾತಭಾವಃ ।
ಸಂಯೋಜ್ಯಾಲಂಕೃತಾಭಿಃ ಸ್ವ ಸಹಜಮತಿ ಸಂಭೂತ ವಾಗ್ಭಿರ್ವಧೂಭಿಃ ॥
ಕೃತ್ವಾನ್ಯೋಕ್ತೀಶ್ಚ ದಾಸೀಃ ಬುಧ ಹೃದಯ ಗೃಹಂ ಪ್ರೌಢ ವೃತ್ತೀಶ್ಚ ವೃತ್ತೀಃ ॥
ದತ್ವಾನ್ಯೋನ್ಯಾಭಿ ಯೋಗಂ ಜಯಮುನಿರಸಕೃತ್ ವೀಕ್ಷ್ಯರೇಮೇ ಕೃತಾರ್ಥ ॥ 18 ॥
(ಪೂ.ಪ್ರ)

18. ಶ್ರೀ ಜಯತೀರ್ಥರ ಮೂಲ ವೃಂದಾವನವಾಗಲೀ, ಮೃತ್ತಿಕಾ ವೃಂದಾವನವಾಗಲೀ ಇಲ್ಲಿ ಪ್ರಸಕ್ತವೇ ಅಲ್ಲ. - ಸಾಣೂರು ಭೀಮಭಟ್ಟರ ತೀರ್ಥಪ್ರಬಂಧ 3ನೇ ಆವೃತ್ತಿ

ii. 'ತೀರ್ಥ ಪ್ರಬಂಧ'ದ 'ಮಾಧ್ವ ಗ್ರಂಥಾನ್ ಸ್ವಬಂಧೂನಿವ'.... ಎಂಬ ಶ್ಲೋಕದಲ್ಲಿ ಶ್ರೀ ವಾದಿರಾಜರು ಕೇವಲ ಶ್ರೀಮಜ್ಜಯತೀರ್ಥ ಗುರುಗಳ ವಾಙ್ಮಯ ಸೇವೆಯ ಪ್ರಶಂಸನೆಯನ್ನು ಮಾತ್ರ ಮಾಡಿದ್ದಾರೆ.[19]

iii. ಮೂಲ ಅಥವಾ ಮೃತ್ತಿಕಾ ವೃಂದಾವನಗಳ ಪ್ರಸ್ತಾಪನೆಯೇ ಇಲ್ಲದ ಶ್ಲೋಕಗಳನ್ನು ವೃಂದಾವನದ ಸ್ಥಳ ನಿರ್ಣಯ ಮಾಡುವ ವಿಷಯದಲ್ಲಿ ಉದಾಹರಿಸುವುದು ಸರಿಯೇ ?

iv. ತೀರ್ಥ ಪ್ರಬಂಧದ ಈ ಶ್ಲೋಕಕ್ಕೆ ವ್ಯಾಖ್ಯಾನಕಾರರಾದ ಶ್ರೀ ನಾರಾಯಣಾಚಾರ್ಯರು "ಗಜಗಹ್ವರೇ ಜಯತೀರ್ಥಂ ವರ್ಣಯತಿ" ಎಂದು ಅವತರಣಿಕೆ ಕೊಟ್ಟಿದ್ದಾರೆ. ಆದಕಾರಣ ಶ್ರೀ ಜಯತೀರ್ಥರ ವೃಂದಾವನ ಗಜಗಹ್ವರ (ನವವೃಂದಾವನ)ದಲ್ಲಿದೆ ಎಂದು ಸಾಧಿಸಲು ಪ್ರಯತ್ನಿಸುತ್ತಿ-ರುವವರು ಈ ಕೆಳಗಿನ ಅಂಶಗಳನ್ನು ಗಮನಿಸಬೇಕಾಗಿ ವಿನಂತಿ.

a. ಅನೇಕ ಪ್ರಾಚೀನ ಹಸ್ತಪ್ರತಿಗಳನ್ನು ಪರಿಶೀಲಿಸಿದಾಗ "ಗಜಗಹ್ವರೇ ಜಯತೀರ್ಥಂ ವರ್ಣಯತಿ" ಎಂಬ ವಾಕ್ಯದಲ್ಲಿರುವ "ಗಜಗಹ್ವರೇ" ಎಂಬ ಪದ ಕೆಲವು ಹಸ್ತಪ್ರತಿಗಳಲ್ಲಿ ಉಂಟು.[20]

---

19. 'ಆಪಾದಮೌಳಿ ಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್' ಎಂಬ ಉಕ್ತಿಯಂತೆ ಗುರುಗಳ ವಾಙ್ಮಯ ಆಕೃತಿಯಂತಿರುವ ಗ್ರಂಥಗಳ ಸೇವೆಯ ಪ್ರಶಂಸೆಯೇ ಇಲ್ಲಿದೆ....
– ದಿ. ಆಚಾರ್ಯ ಸಾಣೂರು ಭೀಮಭಟ್ಟರ ತೀರ್ಥಪ್ರಬಂಧ ಅನುವಾದ 6ನೇ ಆವೃತ್ತಿ, 2006, ಪುಟ.x

20. ವ್ಯಾಖ್ಯಾನಕಾರರು "ಗಜಗಹ್ವರೇ ಜಯತೀರ್ಥಂ ವರ್ಣಯತಿ" ಎಂದು ಅವತಾರಿಕೆ ಕೊಡುತ್ತಾರೆ. ಮೈಸೂರು ಪ್ರಾಚ್ಯ ಗ್ರಂಥಾಗಾರದಲ್ಲಿರುವ ಹಳೆಯ ದೇವನಾಗರೀ ಲಿಪಿಯ ಹಸ್ತಪ್ರತಿಯಲ್ಲಿಯೂ..... "ಗಜಗಹ್ವರೇ ಜಯಮುನಿಃ" "ಜಯತೀರ್ಥಾಖ್ಯೋ ಮುನಿಃ" ಎಂಬ ಅವತಾರಿಕೆಯು ಸೋದಾಮಠದಲ್ಲಿರುವ ತಾಳವಾಲೆ ಪ್ರಾಚೀನ ತುಳು ಲಿಪಿಯ ಹಸ್ತಪ್ರತಿಯಲ್ಲಿದೆ.
– ದಿ॥ ಶ್ರೀ ಸಾಣೂರು ಭೀಮಭಟ್ಟರು, ತೀರ್ಥಪ್ರಬಂಧದ ಅನುವಾದ 6ನೇ ಮುದ್ರಣ 2006, ಮುನ್ನುಡಿಯಲ್ಲಿ.

ಹಲವು ಹಸ್ತ ಪ್ರತಿಗಳಲ್ಲಿ ಇಲ್ಲ[21] ಎಂಬುದು ಗಮನಾರ್ಹ. ಅಲ್ಲದೆ "ಗಜಗಹ್ವರೇ ಜಯತೀರ್ಥಂ ವರ್ಣಯತಿ" "ಗಜಗಹ್ವರೇ ಜಯಮುನಿಃ", "ಜಯತೀರ್ಥಾಖ್ಯೋ ಮುನಿಃ", "ಜಯತೀರ್ಥಂ ವರ್ಣಯತಿ", "ಜಯತೀರ್ಥಾಚಾರ್ಯಂ ವರ್ಣಯತಿ"....... ಹೀಗೆ ಬೇರೆ ಬೇರೆ ಪಾಠಗಳು ಬೇರೆ ಬೇರೆ ಹಸ್ತಪ್ರತಿಗಳಲ್ಲಿರುವುದರಿಂದ ಶುದ್ಧ ಮೂಲಪಾಠದಲ್ಲಿ "ಗಜಗಹ್ವರೇ" ಎಂಬ ಪದ ಇದೆಯೋ ಇಲ್ಲವೋ ಎಂಬುದನ್ನು ನಿರ್ಣಯಿಸುವುದು ಕಷ್ಟಸಾಧ್ಯ. ಹೀಗಿರುವಾಗ ಒಂದು ವಿವಾದಾಸ್ಪದವಾದ ವಾಕ್ಯ ವೃಂದಾವನ ಸ್ಥಳ ನಿರ್ಣಯದ ವಿಷಯದಲ್ಲಿ ಆಧಾರವಾಗಲು ಹೇಗೆ ಸಾಧ್ಯ? ಅತ್ಯಂತ ಸಾವಕಾಶ.

b. "ಗಜಗಹ್ವರೇ ಜಯತೀರ್ಥಂ ವರ್ಣಯತಿ" ಎಂಬ ಪಾಠವೇ ಸರಿ ಎಂದು ಊಹಿಸಿಕೊಂಡರೂ ಸಹ ಅದು ಶ್ರೀಮಜ್ಜಯತೀರ್ಥರ ಮೂಲ ವೃಂದಾವನ ನವವೃಂದಾವನದಲ್ಲಿದೆ ಎಂದು ತಿಳಿಯಲು

---

21. i).....No manuscripts that I have came across contains these lines.......the word gajagahvare' is an interpretation. Most of the manuscripts read as जयतीर्थं वर्णयति and some as जयतीर्थाचार्यं वर्णयति.....As many as eight manuscripts have been collated for the purpose of this edition of those M.s.s., five belongs to me and one each to Sri Uttaradimutt, Bangalore, Sri Purnaprajna Vidyapeetha, Bangalore and Sri Vidyadhisa Sanskrit Manuscript Library (Prof. K.T. Pandurangi) Bangalore. - ಸಂಸ್ಕೃತ ಅನುವಾದ (ವ್ಯಾಖ್ಯಾನ ಸಮೇತ) – ತೀರ್ಥಪ್ರಬಂಧ, – ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ, ಶ್ರೀ ಭಾಗವತಾಶ್ರಮ ಪ್ರತಿಷ್ಠಾನದಿಂದ ಪ್ರಕಾಶಿತ 2005–2006.

ಸಾಧಕವಾಗಲಾರದು. ಏಕೆಂದರೆ ಆ ವಾಕ್ಯದಿಂದ ಶ್ರೀಜಯತೀರ್ಥರನ್ನು ಗಜಗಹ್ವರದಲ್ಲಿ ವರ್ಣಿಸುತ್ತಾರೆ. (ಶ್ರೀ ವಾದಿರಾಜರು) ಎಂದಷ್ಟೇ ಅರ್ಥ ತಿಳಿದು ಬರುತ್ತದೆ. ಅಲ್ಲೇ ವೃಂದಾವನವಿದೆ ಎಂದು ತಿಳಿಯುವ ಅಂಶ ಊಹಿಸಿಕೊಂಡದ್ದು ಮಾತ್ರ. “ಮಾನ್ಯಖೇಟೇ ಪದ್ಮನಾಭತೀರ್ಥಂ ವರ್ಣಯತಿ” ಎಂದು ಹೇಳಿದರೆ ಮಳಖೇಡದಲ್ಲಿ ಶ್ರೀ ಪದ್ಮನಾಭ ತೀರ್ಥರ ವೃಂದಾವನವಿದೆ ಎಂದು ತಿಳಿಯಬಹುದೇ ?!

c. ಪ್ರಾಚೀನದಿಂದಲೂ ತೀರ್ಥಪ್ರಬಂಧ ಗ್ರಂಥವನ್ನು ಪಾಠಪ್ರವಚನಗಳ ಮೂಲಕ ಗೌರವಿಸುತ್ತ ಬಂದಿರುವ ಎಲ್ಲ ಅಪರೋಕ್ಷಜ್ಞಾನಿಗಳು, ವಿದ್ವಾಂಸರು, ದಾಸಾಗ್ರಣಿಗಳು ಪೀಠಾಧಿಪತಿಗಳು “ಗಜಗಹ್ವರೆ” ಎಂಬ ಪದವಿರುವ ಪಾಠವನ್ನು ಗಮನಿಸಲಿಲ್ಲವೇಕೆ? ಮಳಖೇಡದಲ್ಲೇ ಶ್ರೀ ಜಯತೀರ್ಥರನ್ನು ವರ್ಣಿಸಿದ್ದೇಕೆ? ಶ್ರೀ ಛಲಾರೀ ಸಂಕರ್ಷಣಾಚಾರ್ಯರು “ಶ್ರೀ ಜಯತೀರ್ಥ ವಿಜಯ’ ಎಂಬ ತಮ್ಮ ಗ್ರಂಥದಲ್ಲಿ ತೀರ್ಥಪ್ರಬಂಧದ “ಮಾಧ್ವಗ್ರಂಥಾನ್ ಸ್ವಬಂಧೂನಿವ.....” ಎಂಬ ಶ್ಲೋಕಕ್ಕೆ ವಿವರಣೆ ಕೊಟ್ಟಿದ್ದಾರೆ. (ಶ್ರೀ ಜಯತೀರ್ಥ ವಿಜಯ 5ನೇ ಸರ್ಗ 22ರಿಂದ 27 ಶ್ಲೋಕಗಳು) ಇವರಿಗೂ “ಗಜಗಹ್ವರೇ ಜಯತೀರ್ಥಂ......” ಎಂಬ ಪಾಠ ಸಮ್ಮತವಿಲ್ಲದಿರುವುದು ಗಮನಾರ್ಹ.

d. ಪ್ರಾತಃ ಸ್ಮರಣೀಯರಾದ ಶ್ರೀ ವಾದಿರಾಜ ಗುರುಸಾರ್ವ ಭೌಮರು ತೀರ್ಥಯಾತ್ರೆ ಮಾಡಿದ ಕಾಲ ಸರಿಯಾಗಿ ನಿರ್ಣಯವಾಗುವವರೆಗೆ ತೀರ್ಥಪ್ರಬಂಧದಲ್ಲಿರುವ ಅಥವಾ ಅದರ ವ್ಯಾಖ್ಯಾನಗಳ ವಾಕ್ಯಗಳನ್ನಿಟ್ಟುಕೊಂಡು ಊಹೆಗಳನ್ನು ಮಾಡಲಾಗದು.

ಶ್ರೀ ವಾದಿರಾಜರು ತೀರ್ಥಯಾತ್ರೆ ಮಾಡಿದ್ದು –

ಅ. ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯರ, ಪ್ರಕಾರ - ಕ್ರಿ.ಶ. 1550 - 1565 (1560 ರಲ್ಲಿ ಗಜಗಹ್ವರಕ್ಕೆ ಭೇಟಿ)

ಆ. ಶ್ರೀ ಟಿ.ಕೆ. ವೇಣುಗೋಪಾಲದಾಸರ ಪ್ರಕಾರ - ಕ್ರಿ.ಶ. 1583 - 1588

ಇ. ಶ್ರೀ ಸಾಣೂರು ಭೀಮಭಟ್ಟರ ಪ್ರಕಾರ - "ದಿಗ್ಗಜಗಳೆಂದು ವರ್ಣಿಸುವವರಲ್ಲಿ ಶ್ರೀ ವಾದಿರಾಜರ ವೃಂದಾವನ ಪ್ರವೇಶಾನಂತರ ವೃಂದಾವನ ಪ್ರವೇಶ ಮಾಡಿದವರೂ ಇದ್ದಾರೆ.[22] ಅಂದರೆ ಶ್ರೀ ವಾದಿರಾಜರು ವೃಂದಾವನ ಪ್ರವೇಶ ಮಾಡುವುದಕ್ಕಿಂತ ತುಂಬಾ ಮುಂಚೆ ಅಥವಾ ಕೊನೆಯ ಕಾಲದಲ್ಲಿ ತೀರ್ಥಯಾತ್ರೆ ಮಾಡಿರುವ ಸಂಭವವಿದೆ.

ಈ. ಶ್ರೀ ಕುಷ್ಟಗಿ ಕೃಷ್ಣಮೂರ್ತಿಗಳ ಪ್ರಕಾರ - ಶ್ರೀ ವ್ಯಾಸರಾಜರು ಸಶರೀರವಿರುವಾಗಲೇ (1476 - 1539) ತೀರ್ಥಯಾತ್ರೆ ಮಾಡಿದ್ದಾರೆ.

ಉ. ಶ್ರೀ ಕೊರಟಿ ಶ್ರೀನಿವಾಸರಾಯರ ಪ್ರಕಾರ - ಕ್ರಿ.ಶ.1520 -1535.

ಈ ಮಹನೀಯರೆಲ್ಲರೂ ತಮ್ಮ ತಮ್ಮ ಪಕ್ಷ ಸಾಧನೆಗಾಗಿ ಕೇವಲ ಊಹೆಗಳನ್ನು ಮಾತ್ರ ಮಾಡಿದ್ದಾರೆ ಎಂಬುದು ಸ್ಪಷ್ಟ, ಯಾವ ಆಧಾರಗಳನ್ನೂ ಕೊಟ್ಟಿಲ್ಲವಾದ್ದರಿಂದ. ಶ್ರೀ ವಾದಿರಾಜರ ತೀರ್ಥ ಯಾತ್ರಾಕಾಲ ಹಾಗೂ ತೀರ್ಥಪ್ರಬಂಧ ಗ್ರಂಥ ರಚನೆಯ ಕಾಲಗಳನ್ನು ನಿರ್ಣಯ ಮಾಡುವುದು ಸುಲಭವಿಲ್ಲ. ಸ್ಪಷ್ಟ ಉಲ್ಲೇಖಗಳು ಎಲ್ಲೂ ಇಲ್ಲ.

---

22. ತೀರ್ಥಪ್ರಬಂಧ ಶ್ರೀ ಸಾಣೂರು ಭೀಮಭಟ್ಟರು ಅನುವಾದ ಪುಟ 315, ಸಂಶೋಧಿತ ಮೂರನೇ ಆವೃತ್ತಿ - 1984.

ಮೇಲಿನ ಕಾಲಗಳ ಊಹೆಯ ಹಿನ್ನೆಲೆಯಲ್ಲಿ ವಿಚಾರಕ್ಕೆ ಇಳಿಯುವುದಾದರೆ ಮೊಟ್ಟಮೊದಲು ತೀರ್ಥಪ್ರಬಂಧದ ಮೊದಲ ಪ್ರಬಂಧವಾದ ಪಶ್ಚಿಮ ಪ್ರಬಂಧದಲ್ಲೇ ಸೋದಾಕ್ಷೇತ್ರವನ್ನು ತ್ರಿವಿಕ್ರಮದೇವರನ್ನು ಮಧ್ಯವಾಟ ಮಠದಲ್ಲಿದ್ದ ವ್ಯಾಸಮುಷ್ಟಿಯ ವರ್ಣನೆ ಮುಂತಾದವುಗಳನ್ನು ತೀರ್ಥಯಾತ್ರೆಗೆ ಮುಂಚೆ ವರ್ಣಿಸಿರಲು ಹೇಗೆ ಸಾಧ್ಯ? ಎಂಬ ಪ್ರಶ್ನೆ ಏಳುತ್ತದೆ. ಏಕೆಂದರೆ, ತ್ರಿವಿಕ್ರಮ ದೇವರ ಪ್ರತಿಷ್ಠಾಪನೆ ಆದದ್ದು (ಸೋದೆಯಲ್ಲಿರುವ ಶಾಸನ ಪ್ರಕಾರ) ಶಾ.ಶ. 1504 ಚಿತ್ರಭಾನು ಸಂ. ವೈಶಾಖ ಶುದ್ಧ ಹುಣ್ಣಿಮೆ. ಅಂದರೆ ಕ್ರಿ.ಶ. 1582ರಲ್ಲಿ. (ಶ್ರೀ ವಾದಿರಾಜರ 102ನೇ ವಯಸ್ಸಿನಲ್ಲಿ) ಈ ವಿಚಾರವನ್ನು ಸರಿಹೊಂದಿಸಲು ಕೆಲವರು ತೀರ್ಥಯಾತ್ರೆಯ ಕಾಲವನ್ನು ಕ್ರಿ.ಶ. 1583ರಿಂದ 1588 ಎಂದು ಊಹಿಸಿದರು. ಈ ಊಹೆಯನ್ನು ಹಿಡಿದು ಹೊರಟರೆ (ಅ) ಶ್ರೀ ವಾದಿರಾಜರಿಗೆ ಬದರಿಯಲ್ಲಿ (ಕಾಶಿ?) ವೇದವ್ಯಾಸರ ದರ್ಶನ ಅವರು ಸಕಾಲಕ್ಕೆ ತ್ರಿವಿಕ್ರಮನ ವಿಗ್ರಹ ಸೋದೆಗೆ ತಲುಪುವುದೆಂದು ಕೊಟ್ಟ ಆಶ್ವಾಸನೆ ಮುಂತಾದವುಗಳನ್ನು ಕೂಡಿಸುವುದು ಕಷ್ಟ (ಆ) ಮಧ್ಯವಾಟ ಮಠದ ವ್ಯಾಸಮುಷ್ಟಿಯ ವರ್ಣನೆ, ಅಲ್ಲಿಗೆ ಶ್ರೀ ವ್ಯಾಸರಾಜರು ಬಂದ ವಿಷಯ (ಶ್ರೀ ವಾದಿರಾಜರು ಕೊನೆಯ ದಿನಗಳಲ್ಲಿ ತೀರ್ಥಯಾತ್ರೆ ಮಾಡಿದ್ದಾದರೆ ಆ ಸಮಯದಲ್ಲಿ ಶ್ರೀ ವ್ಯಾಸರಾಜರು ವೃಂದಾವನಸ್ಥರಾಗಿದ್ದರು) ಮುಂತಾದ ಅನೇಕ ವಿಷಯಗಳನ್ನು ಹೊಂದಿಸಲಾಗದೆ ಗೊಂದಲದಲ್ಲಿ ಬೀಳಬೇಕಾಗುತ್ತದೆ. ಅಷ್ಟೇ ಅಲ್ಲದೆ ತೀರ್ಥಪ್ರಬಂಧದಲ್ಲಿನ ಶ್ಲೋಕಗಳನ್ನು ಶ್ರೀ ವಾದಿರಾಜರು ತೀರ್ಥಕ್ಷೇತ್ರ ಪರ್ಯಟನೆಯ ಸಮಯದಲ್ಲೇ ರಚಿಸಿದರೇ ಅಥವಾ ಸಂಚಾರ ನಂತರ ಒಂದೆಡೆ

ಕೂತು ರಚಿಸಿದರೋ ಅಥವಾ ಆ ಆ ಕ್ಷೇತ್ರಗಳಲ್ಲಿ ರಚಿಸಿದ ಶ್ಲೋಕಗಳನ್ನೇ ನಂತರ ಕ್ರಮವಾಗಿ ಸಂಗ್ರಹಿಸಿ ಜೋಡಿಸಿದ್ದಾರೋ ಎಂಬ ಪ್ರಶ್ನೆಗಳಿಗೂ ಖಚಿತವಾಗಿ ಉತ್ತರಿಸುವುದು ಅಸಾಧ್ಯ. ಶ್ರೀ ವಾದಿರಾಜರಂತಹ ಅಪರೋಕ್ಷ ಜ್ಞಾನಿಗಳಿಗೆ ಯಾವುದೂ ಅಸಾಧ್ಯವಲ್ಲ ಎಂಬುದು ನಿಜವಾದರೂ ಇರುವ ಮಾಹಿತಿಗಳ ಹಿನ್ನೆಲೆಯಲ್ಲಿ ನಮ್ಮಂತಹವರಿಗೆ ನಿರ್ಣಯಕ್ಕೆ ಬರುವುದು ಕಷ್ಟ ಎಂಬುದನ್ನು ಮರೆಯಬಾರದು. ಇದಕ್ಕೆ ಅನೇಕ ವಿದ್ವಾಂಸರು ಊಹಾಜಾಲಗಳಲ್ಲಿ ಮುಳುಗಿರುವುದೇ ಸಾಕ್ಷಿ. ಅಲ್ಲದೆ ಶ್ರೀ ವಾದಿರಾಜರು ತಮ್ಮ ಜೀವಿತದ ಅವಧಿಯಲ್ಲಿ ತೀರ್ಥಯಾತ್ರೆಯನ್ನು ಎಷ್ಟು ಬಾರಿ ಮಾಡಿದ್ದಾರೆ ಎಂಬುದೂ ಸಹ ಸ್ಪಷ್ಟವಿಲ್ಲ. ಹಲವರು ಒಂದೇ ಬಾರಿ ಎಂದರೆ ಕೆಲವರು ಎರಡು ಬಾರಿ ಎಂದು ಮತ್ತಿತರರು ಅನೇಕ ಬಾರಿ ಎಂದು ಬರೆದಿದ್ದಾರೆ.[23] ಶ್ರೀ ವಾದಿರಾಜರು ತೀರ್ಥಕ್ಷೇತ್ರಗಳನ್ನು ತಾವೇ ಖುದ್ದಾಗಿ ಸಂದರ್ಶಿಸಿ ವರ್ಣಿಸಿ ದಾಖಲಿಸಿರುವುದು ನಿಜವಾದರೂ ತಮಗೆ ಅನುಕೂಲಕ್ಕೆ ತಕ್ಕಂತೆ ಬೇರೆ ಬೇರೆ ಕಾಲಗಳಲ್ಲಿ ತಾವು ಸಂದರ್ಶಿಸಿ ವರ್ಣಿಸಿದ ಕೆಲವು ಕ್ಷೇತ್ರಗಳ ಮೂರ್ತಿಗಳ ವರ್ಣನೆಯನ್ನು (ಶ್ಲೋಕಗಳನ್ನು) ಬೇರೆ ಬೇರೆ ಪ್ರಬಂಧಗಳಲ್ಲಿ ನಂತರ (ಉತ್ತರ, ದಕ್ಷಿಣ...... ಪ್ರಬಂಧಗಳಲ್ಲಿ) ಸಂಗ್ರಹಿಸಿ ಸೇರಿಸಿದ್ದಾರೆ ಎಂದು

---

23. i. ಆಸೇತು ಹಿಮಾಚಲ ಪರ್ಯಂತ ಕಾಲ್ನಡಿಗೆಯಿಂದಲೇ ಎರಡುಬಾರಿ ಸಂಚರಿಸಿದರು.
– ಶ್ರೀ ಸಾಣೂರು ಭೀಮಭಟ್ಟರು

ii. ಶ್ರೀ ವಾದಿರಾಜರು ಅನೇಕ ಬಾರಿ ಭೂ ಪ್ರದಕ್ಷಿಣೆಯನ್ನು ಗೈದವರು. ಒಂದು ಬಾರಿ ಕ್ಷೇತ್ರ ಸಂದರ್ಶನಗೈದಾಗ ಈ ಗ್ರಂಥವನ್ನು ರಚಿಸಿರುತ್ತಾರೆ.
– ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು, ಶ್ರೀ ಸಾಣೂರು ಭೀಮಭಟ್ಟರ ತೀರ್ಥಪ್ರಬಂಧದ ಅನುವಾದ 6ನೇ ಆವೃತ್ತಿಯ ಮುನ್ನುಡಿಯಲ್ಲಿ.

ಹೇಳದೆ ಗತಿಯಿಲ್ಲ.[24] ಕೆಲವು ಕ್ಷೇತ್ರಗಳನ್ನು ಬಿಟ್ಟಿದ್ದಾರೆ. ಯಾತ್ರೆಯ ಕ್ರಮ ಸ್ಪಷ್ಟವಾಗಿಲ್ಲ. (ನೋಡಿ ಪರಿಶಿಷ್ಟ-1)ಕೆಲವು ಕ್ಷೇತ್ರಗಳ ವರ್ಣನೆಯ ಶ್ಲೋಕಗಳನ್ನು ತೀರ್ಥಪ್ರಬಂಧದಲ್ಲಿ ಸೇರಿಸದೆ ತಮ್ಮ ಇತರ ಶ್ರೀ ರುಕ್ಮಿಣೀಶ ವಿಜಯಾದಿ ಗ್ರಂಥಗಳಲ್ಲಿ ಸೇರಿಸಿದ್ದಾರೆ.[25] ತೀರ್ಥಪ್ರಬಂಧದ ಕೆಲವು ಶ್ಲೋಕಗಳನ್ನು ತಮ್ಮ ಇತರ ಗ್ರಂಥಗಳಲ್ಲಿ ಪುನರುಚ್ಚರಿಸಿದ್ದಾರೆ. (ಉ.ಪ್ರ 12ನೇ ಶ್ಲೋಕವೇ ರು.ವಿ.ದಲ್ಲಿದೆ 7/35).ಅವರು ಸರ್ವತಂತ್ರ ಸ್ವತಂತ್ರರು. ನಿಯಮ್ಯರಲ್ಲ. (ಮಳಖೇಡದಲ್ಲೇ ವರ್ಣಿಸಿರುವ ಶ್ರೀ ಜಯತೀರ್ಥರ ವಾಙ್ಮಯ ಸೇವೆಯನ್ನು ಶ್ಲೋಕ ರೂಪೇಣ ಗಜಗಹ್ವರಕ್ಕೆ ಬಂದಾಗ ಸಂಗ್ರಹಿಸಿ ಸೇರಿಸಿರಬಹುದು. ದಿಗ್ಗಜಗಳೆಂದು ಸಮಷ್ಠಿಯಾಗಿ ಶ್ರೀ ಪದ್ಮನಾಭಾದಿ ಪ್ರಾಚೀನರನ್ನು ಸೇರಿಸಿ ವರ್ಣಿಸಿದ್ದನ್ನು ಹಾಗೂ ಶ್ರೀ ಜಯತೀರ್ಥರನ್ನು ಪ್ರತ್ಯೇಕ ವರ್ಣಿಸಿರುವುದನ್ನು , ಅಲ್ಲದೆ ವ್ಯಾಖ್ಯಾನದ ವಾಕ್ಯಗಳನ್ನು ಗಮನಿಸಿದಾಗ ಈ ವಿಷಯ ಸ್ಪಷ್ಟವಾಗುವ ಸಂಭವ ಹೆಚ್ಚಿದೆ.)

e. ಶ್ರೀ ವಾದಿರಾಜರು ಗಜಗಹ್ವರಕ್ಕೆ ಭೇಟಿ ಕೊಟ್ಟಾಗ ಶ್ರೀಮದಾಚಾರ್ಯರ ಗ್ರಂಥಗಳನ್ನು ನಿಯಮೇನ ಶ್ರೀ ಜಯತೀರ್ಥರ ಟೀಕಾ ಸಮೇತ ಅಧ್ಯಯನ ನಡೆಸುತ್ತಿದ್ದ ದಿಗ್ಗಜಗಳಾದ ಪೀಠಾಧಿಪತಿಗಳನ್ನು ವಿದ್ವಾಂಸರನ್ನು ಅನೇಕ ವಿದ್ಯಾರ್ಥಿಗಳನ್ನು ಕಣ್ಣಾರೆ ಕಂಡು ಶ್ರೀಜಯತೀರ್ಥರ ಗ್ರಂಥಗಳ

---

24. ಶ್ರೀ ವಾದಿರಾಜ ಗುರುವರ್ಯರು ತಾವು ಸ್ವತಃ ಕಾಲ್ನಡಿಗೆಯಿಂದ ಭಾರತದೇಶದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವಾಗ ರಚಿಸಿರುವ ಪದ್ಯಗಳನ್ನು ಸಂಗ್ರಹಿಸಿರುತ್ತಾರೆ.
– ಶ್ರೀ ಸಾಣೂರು ಭೀಮಭಟ್ಟರ ತೀರ್ಥಪ್ರಬಂಧ ಅನುವಾದದ 3ನೇ ಆವೃತ್ತಿ 1984 ಪುಟ. ಜೆಡ.

25. ಶ್ರೀ ವಿಶ್ವೋತ್ತಮ ತೀರ್ಥರು ಬರೆದು ಕೊಟ್ಟು ಅನುಗ್ರಹಿಸಿರುವ ಶ್ರೀ ಸಾಣೂರು ಭೀಮಭಟ್ಟರ ತೀರ್ಥಪ್ರಬಂಧ ಅನುವಾದದ 6ನೇ ಆವೃತ್ತಿಯ ಮುನ್ನುಡಿ ನೋಡಿರಿ.

ವರ್ಣನೆ ಮಾಡಿರಬಹುದು. ನನ್ನ ಊಹೆ ಮಾತ್ರ ಎಂಬುದನ್ನು ನಾ ಮರೆತಿಲ್ಲ. ಆದರೆ ಊಹೆಗೆ ಪರಮ ಸಾತ್ವಿಕರಾದ ಶ್ರೀ ವಾದಿರಾಜರ ಪರಮ ಭಕ್ತರಾದ ಶ್ರೀ ಸಾಣೂರು ಭೀಮಭಟ್ಟರ ಮಾತುಗಳು ಹೇಗೆ ಪೋಷಕವಾಗಿದೆ ಎಂಬುದನ್ನು ನೋಡಿರಿ –

ಅ. "ಪದ್ಮನಾಭಂ ಕವೀಂದ್ರಂ ಚ....." ಎಂಬ ಪ್ರಸಿದ್ಧವಾದ ಈ ಪ್ರಾಚೀನ ಶ್ಲೋಕದಲ್ಲಿ ಶ್ರೀ ಜಯಮುನಿಗಳ ಹೆಸರಿಲ್ಲ. ದಾಸರಾಯರ ಪದಗಳಲ್ಲಿಯೂ ಶ್ರೀ ಜಯತೀರ್ಥರನ್ನು ನವವೃಂದಾವನ ಸ್ತೋತ್ರದಲ್ಲಿ ಸೇರಿಸಿಲ್ಲ. "ಪದ್ಮನಾಭಂ ಜಯಮುನಿಂ....." ಎಂಬ ಶ್ರೀ ಜಗನ್ನಾಥ ತೀರ್ಥರದ್ದೆಂದು (?) ಹೇಳುವ.... ಒಂದು ಶ್ಲೋಕವನ್ನು ಬಿಟ್ಟು ಮತ್ತೆಲ್ಲಿಯೂ ಶ್ರೀ ಜಯತೀರ್ಥರನ್ನು ನವವೃಂದಾವನದಲ್ಲಿ ಉಲ್ಲೇಖಿಸಿಲ್ಲ. "ಮಾಧ್ವರಾದ್ಧಾಂತಧರಣೀಧರಾಃ" ಮಾಧ್ವಸಿದ್ಧಾಂತ ಭೂಮಿಧರರಾದ (ಅಷ್ಟ) ದಿಗ್ಗಜಗಳೆಂದು ವರ್ಣಿತರಾದವರು ಕೆಲವರು ವಾದಿರಾಜರ ವೃಂದಾವನ ಪ್ರವೇಶದ ಅನಂತರ ಕಾಲದಲ್ಲಿ ವೃಂದಾವನಸ್ಥರಾಗಿರುವ ಸಂಭವವಿರುವುದರಿಂದಲೂ ಶ್ರೀ ವಾದಿರಾಜರು ಅವರನ್ನು ಅಲ್ಲಿ ಸ್ಮರಿಸಿರುವರೆಂದು ಹೇಳುವುದು ಪ್ರಕೃತ ಸಂದರ್ಭಕ್ಕೆ ಯೋಗ್ಯವಾಗಿದೆ. ಶ್ರೀ ಜಯತೀರ್ಥರ ವೃಂದಾವನವು ಮಳಖೇಡದಲ್ಲಿಯೇ ಇದೆ ಎಂದು ತಿಳಿಯಬೇಕು.

– ತೀರ್ಥಪ್ರಬಂಧದ ಅನುವಾದ 3ನೇ ಆವೃತ್ತಿ 2006

ಆ. "ಆಪಾದ ಮೌಲಿ ಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್" ಎಂಬ ಉಕ್ತಿಯಂತೆ ಗುರುಗಳ ವಾಙ್ಮಯ ಆಕೃತಿಯಂತಿರುವ

ಗ್ರಂಥಗಳ ಸೇವೆಯ ಪ್ರಶಂಸೆಯೇ ಇಲ್ಲಿದೆ ಎಂದು ಹೇಳುವುದು ಅತ್ಯಂತ ಉಚಿತವಾಗಿದೆ. ಜಯತೀರ್ಥರ ಮೂಲ ವೃಂದಾವನವಾಗಲೀ, ಮೃತ್ತಿಕಾ ವೃಂದಾವನವಾಗಲೀ ಇಲ್ಲಿ ಪ್ರಸಕ್ತವೇ ಅಲ್ಲ. ವಾಸ್ತವವಾಗಿ ವಿಚಾರ ಮಾಡಿದರೆ ಗುರುಗಳ ವೃಂದಾವನಕ್ಕಿಂತಲೂ ಅವರ ಗ್ರಂಥರೂಪವಾದ ಸೇವೆಗೆ ಪ್ರಾಶಸ್ತ್ಯವಿದೆ. ಮುಖ್ಯವಾದ ಈ ವಿಷಯವನ್ನು ಗಮನಿಸದೆ ಶ್ರೀ ಜಯತೀರ್ಥರ ವೃಂದಾವನ ಸ್ಥಳದ ಬಗ್ಗೆ ಗೊಂದಲವೆಬ್ಬಿಸುವುದು ಅನಾವಶ್ಯಕವೆಂದು ತೋರುತ್ತದೆ. ಹಿಂದೆ ಈ ವಿಷಯದಲ್ಲಿ ವಿಚಾರಮಂಥನ ನಡೆದಿದ್ದರೂ ಅದನ್ನೆಲ್ಲಾ ಮರೆತು ಈಗಿನ ನಿರ್ಣಯವನ್ನು ಒಪ್ಪಿಕೊಳ್ಳುವುದು ಎಲ್ಲ ಸಮಾಧಾನ ಚಿತ್ತರಾದ ಜಿಜ್ಞಾಸುಗಳಿಗೆ ತುಂಬಾ ಸಂತೋಷಕರ ಎಂಬ ಹೊಸ ತಿದ್ದುಪಡಿಯನ್ನು ವಾಚಕರ ಮುಂದಿಡುತ್ತಿದ್ದೇನೆ.

– ತೀರ್ಥಪ್ರಬಂಧದ ಅನುವಾದ 6ನೇ ಆವೃತ್ತಿ 2006

ಶ್ರೀ ಜಮಖಂಡಿ ವಾದಿರಾಜಾಚಾರ್ಯರು ತಮ್ಮ ಜೀವನವನ್ನೇ ಶ್ರೀ ವಾದಿರಾಜರಿಗೋಸ್ಕರ ಮುಡುಪಿಟ್ಟವರೆಂದು ಪ್ರಸಿದ್ಧಿ ಇದೆ. ಇವರೂ ಸಹ ತಮ್ಮ ''ಶ್ರೀ ವಿಷ್ಣುತೀರ್ಥ ವಿಜಯ''ವೆಂಬ ಕೃತಿಯಲ್ಲಿ ''ಕಾಗಿನೀತೀರಸಂವಾಸಿ'' ಎಂದು ದಾಖಲಿಸಿದ್ದಾರೆ. ಇವರೂ ಸಹ ಶ್ರೀವಾದಿರಾಜರ ತೀರ್ಥಪ್ರಬಂಧ ಹಾಗೂ ಅದರ ವ್ಯಾಖ್ಯಾನಗಳ ಬಗ್ಗೆ ತಿಳಿದಿರಲಿಲ್ಲವೆಂದು ನಂಬುವುದಾದರೂ ಹೇಗೆ ?

ಈ ಎಲ್ಲ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ''ಗಜಗಹ್ವರೇ ಜಯತೀರ್ಥಂ ವರ್ಣಯತಿ'' ಎಂಬುದೇ ಶುದ್ಧ ಮೂಲ ಪಾಠವೆಂದಿಟ್ಟುಕೊಂಡರೂ ಶ್ರೀ ವಾದಿರಾಜರು ಗಜಗಹ್ವರದಲ್ಲಿ ಶ್ರೀ ಜಯತೀರ್ಥರ ವಾಙ್ಮಯ ಸೇವೆಯನ್ನು ಸ್ಮರಿಸಿದ್ದಾರೆಂದು ಸಿದ್ಧಿಸುತ್ತದೆಯೇ ಹೊರತು ವೃಂದಾವನವಿದೆಯೆಂದು

ಸಿದ್ಧಿಸುವುದಿಲ್ಲ. ಆದಕಾರಣ ತೀರ್ಥಪ್ರಬಂಧದ ವ್ಯಾಖ್ಯಾನದ ಈ ವಾಕ್ಯ ವೃಂದಾವನ ವಿಷಯದಲ್ಲಿ ಅತ್ಯಂತ ಸಾವಕಾಶವೇ ಹೊರತು ನಿರವಕಾಶವಲ್ಲ. ನಾನು ಸಂಗ್ರಹಿಸಿ ಉದಾಹರಿಸಿರುವ ಅನೇಕ ಆಧಾರಗಳಲ್ಲಿ ವೃಂದಾವನದ ಸ್ಥಳದ ಬಗ್ಗೆ ಸ್ಪಷ್ಟ ಉಲ್ಲೇಖಗಳಿದ್ದು ನಿರವಕಾಶ ಪ್ರಮಾಣಗಳಾಗಿವೆ. ಅನೇಕ ನಿರವಕಾಶ ಪ್ರಮಾಣಗಳ ಮುಂದೆ ಒಂದೇ ಒಂದು ಅತ್ಯಂತ ಸಾವಕಾಶ ಹಾಗೂ ವಿವಾದಾಸ್ಪದವಾದ ವ್ಯಾಖ್ಯಾನದ ವಾಕ್ಯ ಹಿಡಿದು ಹಠ ಸಾಧಿಸುವುದು ಸಮಂಜಸವಲ್ಲ. ಶ್ರೀ ವಾದಿರಾಜರಂತಹ ಮಹಾನುಭಾವರನ್ನು ಅವರ ಗ್ರಂಥದ ಶ್ಲೋಕಗಳ ವ್ಯಾಖ್ಯಾನವನ್ನು ಸ್ವಾರ್ಥಕ್ಕೋಸ್ಕರ ಬಳಸಿಕೊಳ್ಳುವುದು ಅತ್ಯಂತ ಶೋಚನೀಯ ಹಾಗೂ ಅಹಿತಕರ.

3. ನವವೃಂದಾವನದಲ್ಲಿರುವ ಶ್ರೀ ರಘುವರ್ಯತೀರ್ಥರ ವೃಂದಾವನದ ಮೇಲಿರುವ ಎರಡು ಕೆತ್ತನೆಯ ಚಿತ್ರಗಳ ಆಧಾರದ ಮೇಲೆ ಊಹೆ !! ಆ ಕೆತ್ತನೆಗಳಲ್ಲಿ ಒಂದು ಶ್ರೀ ಜಯತೀರ್ಥರದ್ದು ಆಶ್ರಮ ಆದ ಮೇಲೆ, ಇನ್ನೊಂದು ಪೂರ್ವಾಶ್ರಮದಲ್ಲಿ ಧೋಂಡೂರಾಯರದ್ದು. ಪ್ರಸಿದ್ಧ ವಿದ್ವಾಂಸರೂ ಸಂಶೋಧನಾಕಾರರೂ ಹೀಗೆ ಊಹೆ ಮಾಡಲಿಕ್ಕೆ ನಿಂತರೆ ಗತಿ ಏನು ? ! ಈ ಊಹೆ ನಿರಾಧಾರವಾದದ್ದು ಏಕೆಂದರೆ –

i) ವೈರಾಗ್ಯದ ಸಾಕಾರ ಮೂರ್ತಿಗಳಾದ ಶ್ರೀಮಜ್ಜಯತೀರ್ಥರು ತಮ್ಮ ಪೂರ್ವಾಶ್ರಮದ ಚಿತ್ರವನ್ನು ತಮ್ಮ ವೃಂದಾವನದ ಮೇಲೆ ಕೆತ್ತಿಸಲು ಅನುಮತಿ ಕೊಡುತ್ತಾರೆಂದು ಯಾರಾದರೂ ಊಹಿಸಲೂ ಸಾಧ್ಯವೇ ? ಪೂರ್ವಾಶ್ರಮದ ವಾಸನೆಯಲ್ಲೇ ಕಾಲಕಳೆವ ಈಚೀಚಿನ ಕೆಲವು ಯತಿಗಳಂತೆ ಶ್ರೀಮಟ್ಟೀಕಾಕೃತ್ಪಾದರೇ ? !

ii) ಈ ಕೆತ್ತನೆಗಳು ದಶಾವತಾರದ ಕೆತ್ತನೆಗಳು.[26] ತುಂಗಭದ್ರಾ ನದೀ ಪ್ರವಾಹದಲ್ಲಿ ವೃಂದಾವನದ ಅನೇಕ ಕಲ್ಲುಗಳು ಬಿದ್ದು ಹೋಗಿದ್ದಾಗ

ಶ್ರೀಮದುತ್ತರಾದಿ ಮಠದ ಶ್ರೀ ಸತ್ಯಜ್ಞಾನತೀರ್ಥರು ಜೀರ್ಣೋದ್ಧಾರ ಮಾಡಿಸುವಾಗ ಉಳಿದಿರುವ ಕಲ್ಲುಗಳನ್ನೇ ಜೋಡಿಸಿ ಬ್ರಾಹ್ಮಣರಿಂದ ಗಾರೆ ರುಬ್ಬಿಸಿ ಗಚ್ಚು ಮಾಡಿಸಿದ್ದಾರೆ. ಇದನ್ನು ನನ್ನ ಮನೆತನದ ಹಿರಿಯರಾದ ಪಂ ಚಿಕ್ಕೇರೂರು ಗೋವಿಂದಾಚಾರ್ಯರು ತಮ್ಮ ಚಿಕ್ಕವಯಸ್ಸಿನಲ್ಲಿ[26] ಪ್ರತ್ಯಕ್ಷ ನೋಡಿದ್ದರು. (ನನಗೂ ಒಮ್ಮೆ ಈ ವಿಷಯ ತಿಳಿಸಿದ್ದಾರೆ.) ಅಲ್ಲದೆ ಈ ವಿಷಯ ಹೊಸಪೇಟೆಯ ಶ್ರೀ ಚಿತ್ತವಾಡಿಗಿ ಹನುಮಂತರಾಯರು ತಮ್ಮ 'ನವವೃಂದಾವನ' ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅವರೂ ಸಹ ಪ್ರತ್ಯಕ್ಷ ಸಾಕ್ಷಿಗಳೇ. ಈಗಲೂ ನವವೃಂದಾವನದಲ್ಲಿ ಸರಿಯಾಗಿ ಜೋಡಿಸದೆ ಗಾರೆ ಗಚ್ಚು ಮಾಡಿರುವುದನ್ನು ನೋಡಬಹುದು. ಹೀಗಾಗಿ ಈ ಕೆತ್ತನೆಗಳು ಶ್ರೀವಾಮನ ಹಾಗೂ ಶ್ರೀ ಪರಶುರಾಮ ದೇವರುಗಳದ್ದಿರಬೇಕು. ಶ್ರೀ ಜಯತೀರ್ಥರದ್ದಲ್ಲ. ಅವರ ಪೂರ್ವಾಶ್ರಮದ ಚಿತ್ರವೂ ಅಲ್ಲ.

iii) ಶ್ರೀ ವ್ಯಾಸರಾಜರು ವಿಜಯನಗರ ಸಾಮ್ರಾಜ್ಯಾಧಿಪತಿಗಳಾಗಿ ಮೆರೆದಿರುವವರು. ಪ್ರಚಂಡ ಸಂನ್ಯಾಸಿಗಳು ಪೀಠಾಧಿಪತಿಗಳೂ ಆಗಿದ್ದರು ಎಂಬುದು ಸರ್ವವಿದಿತ. ಯಾವ ವೃಂದಾವನ ಯಾರದು ಎಂಬುದಕ್ಕೆ ಯಾವ ಆಧಾರಗಳೂ ಇಲ್ಲವಾದಕಾರಣ (ಪರಂಪರೆ ಬಿಟ್ಟರೆ) ಇದೇ ವೃಂದಾವನವೇ ಶ್ರೀ ವ್ಯಾಸರಾಜರದ್ದು ಎಂದು ಯಾಕೆ ಊಹಿಸಬಾರದು?

---

26. ಪಂ. ಚಿಕ್ಕೇರೂರು ಗೋವಿಂದಾಚಾರ್ಯರ 'ಮಳಖೇಡದ ಮಹಾಮಹಿಮರು' ಎಂಬ ಪುಸ್ತಕದ ಪುಟ 16.

iv) ಈ ರೀತಿ ಊಹಿಸುವುದಾದರೆ ಈಗಲೂ ಶ್ರೀ ವಾಗೀಶತೀರ್ಥರ, ಶ್ರೀ ಸುಧೀಂದ್ರರ, ಶ್ರೀ ರಾಮತೀರ್ಥರ ವೃಂದಾವನದ ಮೇಲೂ ಎರಡು ಕೆತ್ತನೆಗಳಿವೆ. ಹಾಗಾದರೆ ಈ ವೃಂದಾವನಗಳಲ್ಲಿ ಒಂದನ್ನು ಶ್ರೀ ಜಯತೀರ್ಥರದ್ದು ಎಂದು ಯಾಕೆ ಊಹಿಸಬಾರದಿತ್ತು ? ಶ್ರೀ ರಘುವರ್ಯರದ್ದೆಂದೇ ಪ್ರಾಚೀನದಿಂದಲೂ ಸುಪ್ರಸಿದ್ಧವಿರುವ ವೃಂದಾವನವನ್ನೇ ಶ್ರೀ ಜಯತೀರ್ಥರದ್ದೆಂದು ಊಹಿಸಲು ಕಾರಣವೇನು ? ಆಧಾರವೇನು ? ಸಮಾಜದಲ್ಲಿ ದೊಡ್ಡ ಸ್ಥಾನಗಳಿಸಿದ ವ್ಯಕ್ತಿಗಳೇ ಹೀಗೆ ಊಹಾಪೋಹಗಳನ್ನು ಮಾಡಿ ಲೇಖಿಸುವುದಾದರೆ ಸಾಮಾನ್ಯ ಲೇಖಕರ ಬಗ್ಗೆ ಹೇಳುವುದೇನಿದೆ ? ಈಚೀಚೆಗೆ ಹೊರಬೀಳುತ್ತಿರುವ ಯಾವ ಆಧಾರಗಳಿಲ್ಲದ ಪ್ರಾಚೀನ ಗ್ರಂಥಸ್ಥ ವಾಕ್ಯಗಳನ್ನು ನಿರಾಕರಿಸುವ ಪರಂಪರಾಪ್ರಾಪ್ತವಾದ ವಿಷಯಗಳನ್ನು ಅಲ್ಲಗಳೆವ "ನಾಕಂಡ ಟೀಕಾರಾಯರು" "ನನ್ನ ದೃಷ್ಟಿಯಲ್ಲಿ ವ್ಯಾಸರಾಯರು" "ನಾಕಂಡ ಶ್ರೀಪಾದರಾಜರು" - ಎಂಬ ಕೃತಿಗಳೇ ಇದಕ್ಕೆ ಸಾಕ್ಷಿ. (ನೋಡಿರಿ ಪರಿಶಿಷ್ಟ-3)

4. ಶ್ರೀವಿಜಯದಾಸರ ಸುಪ್ರಸಿದ್ಧವಾದ "ಟೀಕಾಚಾರ್ಯರ ಪಾದ ಸೋಂಕಿದ ..." ಎಂಬ ಕೃತಿ ಶ್ರೀವಿಜಯದಾಸರದ್ದಲ್ಲ ಪಾಠ ಸರಿಯಿಲ್ಲ ಎಂಬ ಆರೋಪಣೆಗೆ ಬಳಸುವ ತರ್ಕ ಅತ್ಯಂತ ಶುಷ್ಕ -

i) ಶ್ರೀ ವಿಜಯದಾಸರು ಈ ಕೃತಿಯಲ್ಲಿ ಶ್ರೀಮದಕ್ಷೋಭ್ಯತೀರ್ಥರನ್ನು 'ಯೋಗಿ' ಎಂದು ಶ್ರೀ ಜಯತೀರ್ಥರನ್ನು 'ಯೋಗಿಗಳರಸ'ನೆಂದು ಹೇಳಿರುವುದರಿಂದ ಶ್ರೀಮದಕ್ಷೋಭ್ಯತೀರ್ಥರಿಗೆ ಯಾವ ಅಪಚಾರವನ್ನೂ ಮಾಡಿದಂತಾಗಿಯೇ ಇಲ್ಲ. ಈ ಆರೋಪಣೆಯಲ್ಲಿ ಹುರುಳಿಲ್ಲ. ಅನೇಕ ಕೃತಿಗಳಲ್ಲಿ ಪುರಾಣಗಳಲ್ಲೂ ಈ ರೀತಿಯ

ಪ್ರಯೋಗಗಳುಂಟು. ಯಾವ ವ್ಯಕ್ತಿಗಳನ್ನು ವರ್ಣಿಸುವ ದೃಷ್ಟಿಕೋನವಿರುತ್ತದೋ ಅಲ್ಲಿ ಈ ರೀತಿ ವಿಶೇಷಣಗಳನ್ನು ಕೊಟ್ಟು ವರ್ಣಿಸುವುದು ''ಕವಿಸಮಯ'' ''ಕವಿತಾ ಸೌಲಭ್ಯ'' ಶ್ರೀಮದಪ್ಪಣ್ಣಾಚಾರ್ಯ ಕೃತ ಜಗತ್ಪ್ರಸಿದ್ಧ ಸಿದ್ಧಿದಾಯಕ ಶ್ರೀ ರಾಘವೇಂದ್ರ ಸ್ತೋತ್ರದಲ್ಲಿ ''ವಿಜಯೀಂದ್ರ ಕರಾಬ್ಜೋತ್ಥ ಸುಧೀಂದ್ರ ವರ ಪುತ್ರಕಃ । ಶ್ರೀ ರಾಘವೇಂದ್ರ ಯತಿರಾಟ್'' – ಎಂದಿದೆ. ಈ ಸ್ತೋತ್ರಕ್ಕೆ ಶ್ರೀರಾಯರೇ ''ಸಾಕ್ಷೀ ಹಯಾ ಸ್ಯೋತ್ರಹಿ'' ಎಂದು ಒಪ್ಪಿಗೆ ಮುದ್ರೆ ಒತ್ತಿದ್ದಾರೆ. ಇದರಲ್ಲಿ ಗುರುಗಳಾದ ಶ್ರೀಸುಧೀಂದ್ರರಿಗೂ ಪರಮ ಗುರುಗಳಾದ ಶ್ರೀವಿಜಯೀಂದ್ರರಿಗೂ ಯಾವ ರೀತಿಯ ವಿಶೇಷಣಗಳನ್ನು ಕೊಡದೆ ಶ್ರೀರಾಯರಿಗೆ ಮಾತ್ರ ''ಯತಿರಾಟ್'' ಎಂಬ ಬಿರುದಾಂಕಿತ ಗೌರವೋಕ್ತಿಗಳನ್ನು ವಿಶೇಷಣವಾಗಿ ಕೊಟ್ಟಿದ್ದಾರೆ. ಶುಷ್ಕ ತರ್ಕದಿಂದ ಇದು ಶ್ರೀಮದಪ್ಪಣ್ಣಾಚಾರ್ಯರು ಮಾಡಿದ ಅಪಚಾರ ಅವರು ರಚಿಸಿದ್ದೇ ಅಲ್ಲ ಎಂದು ಆರೋಪಣೆ ಮಾಡಲಾಗುತ್ತದೆಯೇ ? ಎಂತಹ ಹಾಸ್ಯಾಸ್ಪದ ?

ii) ಕೃತಿಗಳನ್ನು ಮುದ್ರಿತ ಪುಸ್ತಕಗಳಿಂದ ತಪ್ಪಾಗಿ ಬರೆದು ಕೊಂಡರೆ 'ಗ'ಕಾರ ಪ್ರಾಸ ವಿರಲು ಹೇಗೆ ಸಾಧ್ಯ ? ಈ ಕೃತಿಯ ಕೊನೆಯ ಎರಡು ಸಾಲುಗಳು ಹೀಗಿವೆ –

''ಯೋಗಿಗಳರಸನೆ ಮಳಖೇಡ ನಿವಾಸ ।
ಕಾಗಿನಿ ತಟವಾಸ ವಿಜಯವಿಠಲದಾಸ'' ॥

ಇದು ಪ್ರಾಸಬದ್ಧವಾಗಿಯೇ ಇದೆ. ಪೂರ್ವಗ್ರಹ ಪೀಡಿತರಾಗಿದ್ದರೆ ಯಾವ ಪ್ರಾಸವೂ ಪ್ರಾಸಾದ ವೀಯಲಾರದು.

iii) ಶ್ರೀಮದಾಚಾರ್ಯರೂ ಶ್ರೀಮಟ್ಟೀಕಾಕೃತ್ಪಾದರೂ ಶ್ರೀಮದ್ವಿಷ್ಣುತತ್ವ ವಿನಿರ್ಣಯದಲ್ಲಿ (''ಪೌನರುಕ್ತ್ಯಂತು ಪ್ರಮಾಣ ಸಂಪ್ಲವೇ ವ್ಯಭಿಚಾರಾತ್ ಅಪ್ರಾಮಾಣ್ಯ ಸಾಧಕಂ ನ ಭವತಿ । ... ಕಿಮಿದಂ ಪುನರುಕ್ತಿಮೇವ'' - ಟೀಕಾ) ಪುನರುಕ್ತಿ, ದೊಡ್ಡದೋಷವೇ ಅಲ್ಲ ಕಿಂಚ ತಾತ್ಪರ್ಯದಲ್ಲಿ ದಾರ್ಢ್ಯವನ್ನು ತಂದು ಕೊಡುತ್ತದೆ ಎಂದಿದ್ದಾರೆ. ಆದರೂ ಇಲ್ಲಿ ಪುನರುಕ್ತಿಯೇ ಇಲ್ಲ. ಕೇವಲ ''ಕಾಗಿನೀ ತಟವಾಸ'' ಎಂದರೆ ಆ ನದಿಯ ತೀರದಲ್ಲಿರುವ ಯಾವ ಗ್ರಾಮವೂ ಆಗಬಹುದು. ಇದನ್ನು ಅಲ್ಲಗಳೆದು ಖಚಿತ ಪಡಿಸುವುದಕ್ಕೋಸ್ಕರವಾಗಿಯೇ ಪುನಃ ''ಮಳಖೇಡ ನಿವಾಸ'' ಎಂದಿದ್ದಾರೆ ದಾಸರಾಯರು. ಇದು ದ್ವಿರುಕ್ತಿಯೂ ಅಲ್ಲ ಪುನರುಕ್ತಿಯೂ ಅಲ್ಲ.

ಶ್ರೀ ವಿಜಯದಾಸರ ಕಾಲದಲ್ಲಿ ''ಮಳಖೇಡ''ವೆಂಬ ಹೆಸರೇ ಇರಲಿಲ್ಲ ಎಂದು ಆಕ್ಷೇಪಿಸಿ ಈ ಕೃತಿಯನ್ನು ಅಲ್ಲಗಳೆಯಲು ಕೆಲವರು ಪ್ರಯತ್ನಿಸಿದ್ದಾರೆ. ಇದು ಹಾಸ್ಯಾಸ್ಪದ. 'ಮಳಖೇಡ'ವೆಂಬುದು ಸಂಸ್ಕೃತದ 'ವೃಷ್ಟಿಗ್ರಾಮ' ಎಂಬ ಪದದ ತರ್ಜುಮೆ ಮಾತ್ರ. ಪ್ರಸಿದ್ಧ 'ವೇಣುಪುರೀ' (ವೇಣುಪಲ್ಲಿ) ಎಂಬ ಸಂಸ್ಕೃತ ಶಬ್ದವನ್ನೇ 'ಬಿದರಹಳ್ಳಿ' ಎಂದು ಉಲ್ಲೇಖಿಸುವುದು ವ್ಯವಹರಿಸುವುದು ಕಂಡಿದೆ.

iv) ''ಶ್ರೀ ಗುರು ವಿಜಯವಿಠಲ ಸೇವಕ ಭಕ್ತ'' .. ಎಂಬುದೇ ಶುದ್ಧಪಾಠವೆಂದು ಹೇಳುವುದೂ ಸಹ ಸ್ವಕಪೋಲಕಲ್ಪಿತ. ಯಾಕೆಂದರೆ ಎಲ್ಲಾ ನುಡಿಗಳು ಶ್ರೀ ಜಯತೀರ್ಥರ ಸ್ತೋತ್ರರೂಪವಾಗಿದ್ದು ಕೊನೆಯ ಪಂಕ್ತಿಯಲ್ಲಿ ಮಾತ್ರ ಗುರು ವಿಜಯವಿಠಲನನ್ನು ಸ್ತುತಿಸಿದರೆಂದು ಅರ್ಥೈಸಿದರೆ ಅನ್ವಯವಾದರೂ ಎಲ್ಲಿ? ಹೇಗೆ?

ಒಂದು ವೇಳೆ ಈ ಕೃತಿ ಶ್ರೀ ವಿಜಯದಾಸರದ್ದಲ್ಲ, ಶ್ರೀ ಮೊದಲಕಲ್ಲು ಶೇಷದಾಸರದ್ದೆಂದೇ ಹಟ ಸಾಧಿಸಿದರೂ ಸಹ ಬಾಧಕವಿಲ್ಲ. ಶ್ರೀ ಮೊದಲಕಲ್ಲು ಶೇಷದಾಸರು ಅಪರೋಕ್ಷ ಜ್ಞಾನಿಗಳು, ಅವತಾರ ಪುರುಷರು ಎಂದು ಹರಿದಾಸ ಪರಂಪರೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಹೀಗಾಗಿ ಮೊದಲಕಲ್ಲು ಶೇಷದಾಸರಿಗೂ ಮಳಖೇಡದಲ್ಲಿಯೇ ಶ್ರೀ ಟೀಕಾಚಾರ್ಯರ ಮೂಲ ವೃಂದಾವನವಿರುವ ವಿಷಯ ಸಮ್ಮತವೆಂದು ಸಿದ್ಧಿಸುತ್ತದೆ. ಪ್ರಾಚೀನ ಕೃತಿಗಳ ಅಂಕಿತ ವ್ಯತ್ಯಾಸ ಮಾಡೋಣದರಿಂದ ವಿಷಯವನ್ನು ಅಪಲಾಪ ಮಾಡಲು ಸಾಧ್ಯವಿಲ್ಲ. ಅಲ್ಲದೆ ''ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ ಮಂತ್ರಾಲಯ'' ಇವರು ಪ್ರಕಾಶ ಪಡಿಸಿರುವ ''ಶ್ರೀರಾಘವೇಂದ್ರ ಸತ್ಸಂಪ್ರದಾಯಜನಪ್ರಿಯ ಭಜನ ಸಂಪುಟ''ದಲ್ಲಿ (2001) ಈ ಕೃತಿ ಶ್ರೀ ವಿಜಯದಾಸರದ್ದೆಂದು ಛಾಪಿಸಿರುವುದು ಗಮನಾರ್ಹ.

5. ವಿಜಯನಗರದ (ರಜತ ಶಾಸನದಲ್ಲಿಯ) ಶ್ರೀಕೃಷ್ಣದೇವರಾಯನ ಪದ್ಯ. (ಶ್ರೀ ಜಯತೀರ್ಥರನ್ನು ಸ್ತುತಿಸುವ)

i) ಹಳೆಗನ್ನಡದ ಶೈಲಿಯಲ್ಲಿ ರಚಿಸಿರುವ ಈ ಪದ್ಯದಲ್ಲಿ ಯತಿ ಗಣ ಪ್ರಾಸಗಳೇ ಇಲ್ಲದಿರುವುದನ್ನು ಗಮನಿಸಿದರೆ ಶ್ರೀಕೃಷ್ಣದೇವರಾಯನು ರಚಿಸಿದ್ದಲ್ಲವೆಂದು ಯಾರು ಬೇಕಾದರೂ ಸುಲಭವಾಗಿ ಹೇಳಬಲ್ಲರು.[27] ಶ್ರೀಕೃಷ್ಣದೇವರಾಯ ಸಾಮಾನ್ಯನಲ್ಲ. ಉಭಯ ಭಾಷಾ ಪ್ರವೀಣನು. ಮಹಾ ಪಂಡಿತನು. ಇಂತಹ ಅಸಂಬದ್ಧ ಪದ್ಯವನ್ನು ರಚಿಸಲು ಸಾಧ್ಯವೇ ಇಲ್ಲ. ಒಂದು ವೇಳೆ

---

27. ಪಂ. ಚಿಕ್ಕೇರೂರು ಗೋವಿಂದಾಚಾರ್ಯರ 'ಮಳಖೇಡದ ಮಹಾಮಹಿಮರು' ಎಂಬ ಪುಸ್ತಕದಿಂದ.

ಶ್ರೀಕೃಷ್ಣದೇವರಾಯನು ರಚಿಸಿದ್ದೇ ಆದರೆ ನಮ್ಮ ರಾಜ್ಯ ಸರ್ಕಾರ ಸುಮ್ಮನಿರಲು ಸಾಧ್ಯವೇ ? ಅಲ್ಲದೆ, ಈ ರಜತ ಶಾಸನದ ಬಗ್ಗೆ ಯಾರೆಲ್ಲ ಲೇಖಿಸಿದ್ದಾರೋ ಪ್ರಾಯಃ ಅವರೆಲ್ಲರನ್ನೂ ನಾನು ವಿಚಾರಿಸಿದ್ದೇನೆ. ಯಾರಿಂದಲೂ ನಿಖರವಾಗಿ ಈ ಶಾಸನದ ಬಗ್ಗೆ ಅದರ ಮೂಲದ ಬಗ್ಗೆ ಯಾವ ಮಾಹಿತಿಯೂ ದೊರೆಯದಿರುವುದು ಗಮನಾರ್ಹ. ಹೀಗಾಗಿ ಈ ರಜತಶಾಸನ ಕೃತ್ರಿಮವೇ ಸರಿ.

ii) ಈ ಪದ್ಯದಲ್ಲಿ ವೃಂದಾವನದ ಬಗ್ಗೆ ಯಾವ ಮಾಹಿತಿಯೂ ಇಲ್ಲ. 'ಭುಜಂಗನಾಲಯದಲ್ಲಿ'' ಎಂಬ ಶಬ್ದದಿಂದ ಹಾವಿನ ಹುತ್ತದಲ್ಲಿ ಎಂಬ ಅರ್ಥಮಾತ್ರ ಸಿಗುತ್ತದೆ. ಹೀಗಾಗಿ ಗಜಗೊಂದಲ (ಗಜಗಹ್ವರ)ದಲ್ಲಿರುವ ಹಾವಿನ ಹುತ್ತದಲ್ಲಿ ಸರ್ಪದ ರೂಪದಲ್ಲಿ ಶ್ರೀ ಜಯತೀರ್ಥರು ಸನ್ನಿಹಿತರಾಗಿದ್ದರೆಂದು ಊಹಿಸಬೇಕಾಗುತ್ತದೆ.

iii) ಈ ಶಾಸನದ ಬಗ್ಗೆ ಅನೇಕ ಶಾಸನ ತಜ್ಞರನ್ನು ವಿಚಾರಿಸಿದ್ದೇನೆ. ಅವರಲ್ಲಿ ವಿಶೇಷ ತಜ್ಞರಾದ ಶ್ರೀ ಕೃಷ್ಣದೇವರಾಯನ ಕಾಲದ ಎಲ್ಲ ಶಾಸನಗಳನ್ನು ನೋಡಿರುವ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊಫೆಸರ್ ಆಫ್ ಏನ್ಸಿಯಂಟ್ ಇಂಡಿಯನ್ ಹಿಸ್ಟರಿ (Prof of Ancient Indian History) ಶ್ರೀ ಶ್ರೀನಿವಾಸರಿತ್ತಿಯವರ ಅಭಿಪ್ರಾಯ ಹೀಗಿದೆ –

a) ಶ್ರೀ ಕೃಷ್ಣದೇವರಾಯನು ಯಾವುದೇ ಶಾಸನವನ್ನು ತಾನು ಸ್ವತಃ ಬರೆದದ್ದಿಲ್ಲ.

b) ಈ ಪದ್ಯ ಅರ್ವಾಚೀನ ಅಪ್ರಬುದ್ಧ ಕವಿಯಿಂದ ರಚಿತವಾದದ್ದು.

c) ಯಾವ ಶಾಸನಗಳೂ ಈ ಶೈಲಿಯಲ್ಲಿ ಇರುವುದೇ ಇಲ್ಲ. ಇದು ಶಾಸನವೇ ಅಲ್ಲ. (ಹೀಗಾಗಿ ಈ ರಜತಶಾಸನ ಕೃತ್ರಿಮ. ಇಂಥ ಪ್ರವೃತ್ತಿ ತುಂಬಾ ಅಪಾಯಕಾರಿ).

6. ಮಳಖೇಡದಲ್ಲಿರುವ ಶ್ರೀ ಜಯತೀರ್ಥರ ವೃಂದಾವನವನ್ನು ವರ್ಣಿಸುವ ಎಲ್ಲ ಪ್ರಾಚೀನ ಕೃತಿಗಳಲ್ಲಿ ''ಮೃತ್ತಿಕಾವೃಂದಾವನದ ವರ್ಣನೆ ಇದೆ ''ಮೂಲ ವೃಂದಾವನದ ವರ್ಣನೆ ಅಲ್ಲ'' ಎಂದು ವಾದಿಸುವುದಾದರೆ

i) ಇದಕ್ಕೆ ಆಧಾರವೇನು ?

ii) ಯಾವಾಗ ಮಳಖೇಡದಲ್ಲಿ ಮೃತ್ತಿಕಾ ವೃಂದಾವನ ಪ್ರತಿಷ್ಠಾಪಿತವಾಯಿತು ? ಯಾರಿಂದ ?

iii) ಎಲ್ಲಿಯೂ ಒಂದು ಸರಕಾರ ಮೃತ್ತಿಕಾ ವೃಂದಾವನದ ನಿತ್ಯ ಪೂಜಾ ಆರಾಧನೆಗಳಿಗೆ ಹಣ ಹಾಗೂ ಭೂಮಿಗಳನ್ನು ಮಂಜೂರು ಮಾಡುವುದು ಕಂಡಿಲ್ಲ. ಅಲ್ಲದೆ ಹೈದರಾಬಾದ್ ನೈಜಾಮ್ ಸರ್ಕಾರ ಶ್ರೀ ಜಯತೀರ್ಥರ ವೃಂದಾವನ ಪೂಜಾರಾಧನೆಗಳಿಗೆ ಭೂಮಿಗಳನ್ನು ಮಂಜೂರು ಮಾಡುವಾಗಲೂ ಮೃತ್ತಿಕಾವೃಂದಾವನಕ್ಕೆ ಎಂದು ಉಲ್ಲೇಖಿಸಿಲ್ಲ. (ನೈಜಾಮ್ ಸರ್ಕಾರದ ದಾಖಲೆ.[28] - ''ಮುಂಕಬ್ ನಂ. 19947, ದಿ.18-09-1980, 198ನೆಯ ನಂ. ದಿ.10-12-1887, 20ನೇ ನಂ. ಕಾಲಂನಲ್ಲಿ "For Service of Temple of Sri Jayatheertha Swamy Malkhed" ಎಂದು ಸ್ಪಷ್ಟ ಇದೆ. ಇಲ್ಲಿ ಮೃತ್ತಿಕಾ ಶಬ್ದ ಇಲ್ಲದಿರುವುದು ಗಮನಾರ್ಹ.)

iv) ಷಾಷ್ಟಿಕ ವಂಶದ ರಾಘವೇಂದ್ರಪ್ಪ ಕವಿಯು ''.....ಮಳಖೇಡೆ ಯೊಳು ಇರ್ಪರು. ಅಲ್ಲಿ ಟೀಕಾಚಾರ್ಯವರ್ಯ ಗುರು ಅಕ್ಷೋಭ್ಯ ತೀರ್ಥರ ಘನ ವೃಂದಾವನವು ತಾನಿಹುದು. ನಮ್ಮವರಲ್ಲಿ

---

28. ಶ್ರೀ ಎಂ. ಆರ್. ಅನಂತಪದ್ಮನಾಭರಾವ್‌ರವರ 'ಶ್ರೀ ಜಯಮುನಿಗಳು' ಎಂಬ ಪುಸ್ತಕದಿಂದ ಉದ್ಧೃತ.

ಅರ್ಚಕರಾಗಿ......'' ಎಂದಿದ್ದಾನೆಯೇ ಹೊರತು ಮೃತ್ತಿಕಾ ಶಬ್ದವನ್ನಾಡಿಲ್ಲ ಎಂಬುದು ಗಮನಾರ್ಹ.

v) ಅನೇಕ ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧರಾದ ಹರಿದಾಸರು ಪ್ರಾಚೀನ ವಿದ್ವಾಂಸರು ಮಳಖೇಡದಲ್ಲಿರುವ ಶ್ರೀ ಜಯತೀರ್ಥರನ್ನು ವರ್ಣಿಸಿ ಸ್ತುತಿಸಿದ್ದಿದೆ. ಈ ಎಲ್ಲ ಮಹನೀಯರು ಮೂಲ ವೃಂದಾವನವನ್ನು ಬಿಟ್ಟು ಮೃತ್ತಿಕಾ ವೃಂದಾವನವನ್ನು ಸ್ತುತಿಸಿದ್ದೇಕೆ ? ಕಾರಣ ಏನು ? ಅಲ್ಲದೆ ಯಾವ ಹರಿದಾಸರ ಕೃತಿಯಲ್ಲೂ ನವವೃಂದಾವನದಲ್ಲಿ ಶ್ರೀ ಜಯತೀರ್ಥರ ವರ್ಣನೆ ಅಥವಾ ಅವರ ವೃಂದಾವನದ ವರ್ಣನೆ ಇಲ್ಲ ಎಂಬುದು ಗಮನಿಸಬೇಕಾದ ವಿಷಯ.

ಹೀಗಾಗಿ ವಿಚಾರ ಮಾಡಿದಾಗ ಯಾವ ರೀತಿಯಲ್ಲೂ ಮಳಖೇಡದಲ್ಲಿರುವುದು ಶ್ರೀ ಜಯತೀರ್ಥರ ಮೃತ್ತಿಕಾ ವೃಂದಾವನವೆಂಬ ಮಾತು ಯಾವ ಆಧಾರದಿಂದಲೂ ಸಿದ್ಧವಾಗುವುದಿಲ್ಲ. (ಮೃತ್ತಿಕಾ ಶಬ್ದವನ್ನು ಊಹಿಸಿ ಸ್ವಪಕ್ಷಸಾಧನೆಗೆ ಸೇರಿಸಿಕೊಂಡದ್ದು ಮಾತ್ರ.)

7. ಈ ಆಕ್ಷೇಪ (ಊಹೆ) ಪ್ರಕಾರ ಶ್ರೀ ವಿಜಯ ದಾಸರು ಈ ಸುಳಾದಿಯನ್ನು ರಚಿಸಿದ್ದಂತೂ ಮಳಖೇಡದಲ್ಲಿ ಎಂಬುದು ಸ್ಪಷ್ಟ ನಿರ್ವಿವಾದ. ಪ್ರಾಯಶಃ ಈ ಊಹೆ ಮಾಡುವವರು ಸಂಪೂರ್ಣಸುಳಾದಿಯನ್ನು ಸರಿಯಾಗಿ ನೋಡಿದಂತಿಲ್ಲ. ಈ ಸುಳಾದಿಯ ಪ್ರಾರಂಭದಲ್ಲಿ ''ದಯ ದೃಷ್ಟಿಯಿಂದ ನೋಡು ಕಾಪಾಡು'' ಎಂದು ಬೇಡುತ್ತಾ ಕೊನೆಗೆ ''ಮೇಘನಾಥಪುರ ಕುಕುರವೇಣೀವಾಸ '' ಎಂದಿದೆ. ಇದರಿಂದ ಮಳಖೇಡದಲ್ಲಿ

ವೃಂದಾವನಸ್ಥರಾದ ಶ್ರೀ ಜಯತೀರ್ಥರನ್ನು ಸ್ತುತಿಸಿದ್ದಾರೆ ಎಂಬುದು ಸ್ಪಷ್ಟ ಅಲ್ಲದೆ ಶ್ರೀ ವಿಜಯದಾಸರಿಗೆ ಕಾಣಿಸುವಂತೆ ಶ್ರೀ ಜಯತೀರ್ಥರು ತಮ್ಮ ವೃಂದಾವನದಿಂದ ಹೊರಕ್ಕೆ ಬಂದು ಗುರುಗಳಾದ ಶ್ರೀ ಅಕ್ಷೋಭ್ಯ ತೀರ್ಥರನ್ನು ಪೂಜಿಸುತ್ತಿದ್ದರು ಎಂದು ಅರ್ಥವಾಗುತ್ತದೆಯೇ ಹೊರತು ಬೇರೆ ಊರಿಂದ ಬಂದರು ಎಂಬ ಅರ್ಥ ಸರ್ವಥಾ ಕೂಡುವುದಿಲ್ಲ. ಅದರಲ್ಲೂ ನವ ವೃಂದಾವನದಿಂದಲೇ ಬಂದರು ಎಂಬುದಂತೂ ಕೇವಲ ಊಹೆ. ಶ್ರೀ ವಿಜಯದಾಸರ ಪ್ರಸಿದ್ಧ ಕೃತಿಗಳಲ್ಲಿ "ಮಳಖೇಡ ನಿವಾಸ" ಎಂದಿದೆ. ಶ್ರೀ ವಿಜಯದಾಸರನ್ನು ಸ್ವವ್ಯಾಹತಿಗಳೆಂದು ಹೇಳಿದಂತಾಗುತ್ತದೆ. ಇಡೀ ಸುಳಾದಿಯಲ್ಲೇ ಈ ರೀತಿ ವಿಪರೀತ ಅರ್ಥ ಬರುವ ಯಾವ ವಾಕ್ಯವೂ ಇಲ್ಲ.

8. ಈ ಕೃತಿ ಶ್ರೀ ವಿಜಯದಾಸರ ಶಿಷ್ಯರಾದ ವ್ಯಾಸವಿಠಲಾಂಕಿತ (ಶ್ರೀ ಕಲ್ಲೂರು ಸುಬ್ಬಣ್ಣಾಚಾರ್ಯರು) ರದ್ದಲ್ಲ. ಕೇಶವ ವಿಠಲರದ್ದೆಂದು ಈ ಕೇಶವ ವಿಠಲರು 20ನೇ ಶತಮಾನದವರೆಂಬ ಹೊಸ ವಿಚಾರ ಮುಂದಿಡುತ್ತ ತಮ್ಮ ಪಕ್ಷ ಸಾಧಿಸುವ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ.

ಒಂದು ವೇಳೆ ಈ ಕೃತಿ ಕೇಶವ ವಿಠಲರದ್ದೆಂಬ ಪಕ್ಷವೇ ಸರಿ ಎಂದು ಇಟ್ಟುಕೊಂಡರೂ ಕೃತಿಯಲ್ಲಿ ದಾಖಲಾಗಿರುವ ವೃಂದಾವನ ಸ್ಥಳದ (ಮಳಖೇಡವೆಂಬ) ವಿಚಾರವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. 20ನೇ ಶತಮಾನದಲ್ಲಿ ಕೇಶವ ವಿಠಲವೆಂಬ ಅಂಕಿತವುಳ್ಳ ದಾಸರು ಯಾರೂ ಇಲ್ಲ. ತುಂಬಾ ಹಿಂದಿನಿಂದಲೂ ತಾರತಮ್ಯೋಪೇತವಾಗಿ ಭಜನೆ ಮಾಡುವ ಸಂಪ್ರದಾಯ ಮಾಧ್ವರಲ್ಲಿದೆ. ಈ ಭಜನಾ ಪದ್ಧತಿಯಲ್ಲೂ ಈ ಕೃತಿಯನ್ನು ಹಾಡುತ್ತಾ ಬಂದಿರುವುದನ್ನು ಗಮನಿಸಿದಾಗ ಈ ಕೃತಿ

20ನೇ ಶತಮಾನದಲ್ಲಿ ರಚಿತವೆಂದು ಹೇಳಲಾಗದು. ಅಲ್ಲದೆ ಶ್ರೀ ವಿಜಯದಾಸರ ಪ್ರಮುಖ ಶಿಷ್ಯರಲ್ಲಿ ಕೇಶವ ವಿಠಲಾಂಕಿತರು (ಶ್ರೀ ಗದ್ವಾಲಿ ಸುಬ್ಬಣ್ಣದಾಸರು.[29]) ಇರುವುದು ಗಮನಾರ್ಹ. ಹೀಗಾಗಿ ಈ ಕೇಶವ ವಿಠಲಾಂಕಿತ ದಾಸರು ವ್ಯಾಸ ವಿಠಲಾಂಕಿತ ದಾಸರ ಸಮಕಾಲೀನರು. ಕೇವಲ ಅಂಕಿತಗಳನ್ನು ಬದಲು ಮಾಡುವುದರಿಂದ ಕೃತಿಗಳಲ್ಲಿರುವ ವಿಷಯ ಬದಲಾಗುವುದಿಲ್ಲ.

ಅಲ್ಲದೆ "ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ ಮಂತ್ರಾಲಯ"ದವರು ಡಾ|| ಅರಳುಮಲ್ಲಿಗೆ ಪಾರ್ಥಸಾರಥಿಗಳ ಸಂಪಾದಕತ್ವದ ಅಡಿಯಲ್ಲಿ ಪ್ರಕಾಶಪಡಿಸಿರುವ "ಶ್ರೀರಾಘವೇಂದ್ರ ಸತ್ಸಂಪ್ರದಾಯ ಜನಪ್ರಿಯ ಭಜನ ಸಂಪುಟದಲ್ಲಿ (2001) ಈ ಕೃತಿಯು ಶ್ರೀ ವ್ಯಾಸವಿಠಲಾಂಕಿತ ಶ್ರೀ ಕಲ್ಲೂರು ಸುಬ್ಬಣ್ಣಾಚಾರ್ಯರ ದ್ದೆಂದು ಛಾಪಿಸಿರುವುದು ಗಮನಾರ್ಹ.

ಮೇಲಿನ ಆಕ್ಷೇಪಗಳನ್ನು ಅವುಗಳ ವಿಮರ್ಶೆಯನ್ನು ಗಮನಿಸಿದರೆ. 'ಕಾಮಣಿಯಾದವಗೆ ಜಗತ್ತೆಲ್ಲ ಹಳದಿ' ಎಂಬುದು ಸ್ಪಷ್ಟ, ಆದರೆ ಅದು ವ್ಯಕ್ತಿಯ ದೋಷವಲ್ಲ ಕಾಮಣಿ ಎಂಬ ರೋಗದಿಂದಾದ ಇಂದ್ರಿಯ ದೋಷ.

ಸತ್ಯಕ್ಕೇ ಬೆಲೆ ಕೊಡುವವರು, ಸಾಮರಸ್ಯ ಬಯಸುವವರು, ಯಥಾರ್ಥ ವಿಷಯಗಳನ್ನೇ ಪ್ರಕಟಿಸುವ ಮತಿ ಹಾಗೂ ಸಜ್ಜನಿಕೆಯನ್ನು ಇತರರಿಗೆ

---

29. i. ಹತ್ತೊಂಬತ್ತನೇ ಶತಮಾನದ ಹರಿದಾಸ ಸಾಹಿತ್ಯ ಪುಟ.215.
– ಡಾ. ಅನಂತಪದ್ಮನಾಭರಾವ್

ii. "ಹರಿದಾಸ ಪರಂಪರೆ" (1924) – ಶ್ರೀ ಗೋರೆಬಾಳ ಹನುಮಂತರಾಯರು
(ಪ್ರಾಚೀನ ಹಸ್ತಪ್ರತಿಗಳಿಂದ ಸಂಗ್ರಹಿಸಿ ಮೊಟ್ಟಮೊದಲಿಗೆ ಪ್ರಕಟಿಸಿರುವ ಮಹನೀಯರು)

iii. "ಶ್ರೀ ಜಗನ್ನಾಥದಾಸರು" (1956) ಪುಸ್ತಕದ ಅನುಬಂಧ 3 –
– ಡಾ|| ಕೆ.ಎಂ. ಕೃಷ್ಣರಾವ್

ಕೊಡಲೆಂದು ದೇವರಲ್ಲಿ ಪ್ರಾರ್ಥಿಸುವ ಮಹನೀಯರು ಇದುವರೆಗೆ ನಾನು ಉದಾಹರಿಸಿರುವ ಆಧಾರಗಳಲ್ಲಿ ಎಲ್ಲ ಮಠಗಳ ಪ್ರಾಚೀನ ಹಾಗೂ ಅರ್ವಾಚೀನ ವಿದ್ವಾಂಸರ ಹೇಳಿಕೆಗಳನ್ನು ಗಮನಿಸಬೇಕು. ಪರಮಠೀಯ ವಿದ್ವಾಂಸರ ಹೇಳಿಕೆ ಆಧಾರಗಳನ್ನು ಒಪ್ಪದೇ ಹೋದರೂ ತಮ್ಮ ತಮ್ಮ ಮಠದ ಪೂರ್ವೀಕರ ಹೇಳಿಕೆಗೆ, ಹರಿದಾಸರ ಮಾತಿಗೆ ಬೆಲೆ ಕೊಟ್ಟು ಶ್ರೀಮಜ್ಜಯತೀರ್ಥರ ಮೂಲ ವೃಂದಾವನದ ಬಗ್ಗೆ ನಿಷ್ಕಾರಣವಾಗಿ ವಿವಾದವೆಬ್ಬಿಸದೆ ಮಾಧ್ವ ಸಮಾಜದ ಸಾಮರಸ್ಯಕ್ಕೆ ಕೈಗೂಡಿಸಬೇಕೆಂದು ಕಳಕಳಿಯ ವಿನಂತಿ.

ಈಗಾಗಲೇ ಬಗೆಹರಿಯುವ ಸುಳಿವೇ ಸಿಗದ ಅನೇಕ ಸಮಸ್ಯೆಗಳು ಮಾಧ್ವ ಜನಾಂಗದಲ್ಲಿ ಉಂಟು. ಅವುಗಳ ಜೊತೆ ಇದನ್ನು ಸೇರಿಸಿ ಮುಂದೆ ದೊಡ್ಡ ಸಮಸ್ಯೆಯಾಗಿಸುವುದನ್ನು ಸಜ್ಜನರು ತಡೆಯುವರೆಂದು ಭಾವಿಸುತ್ತೇನೆ. ದೇವರಲ್ಲಿ ಪ್ರಾರ್ಥಿಸುತೇನೆ.

“ಕಿಂ ಮೂಢಾಃ ಪೂರ್ವ ಸೂರಯಃ” – ಶ್ರೀ ಶ್ರೀ ವಾದಿರಾಜರು
(ಜ್ಞಾನಿಗಳಾದ ಪೂರ್ವೀಕರೆಲ್ಲ ಮೂರ್ಖರೇ ?)

"THOSE ARE NOT FOOLS TO FOLLOW THE MEANINGLESS THINGS"

- Albert Einstein.

ಹಿನ್ನುಡಿ

ಈ ವಿಷಯದ ಬಗ್ಗೆ ಈಗಾಗಲೇ ಅನೇಕರು ತಮ್ಮ ತಮ್ಮ ವಿಚಾರಗಳನ್ನು ಮಂಡಿಸಲು ಪ್ರಯತ್ನಿಸಿದ್ದಾರೆ. ಅವರಲ್ಲಿ ಸಾಕಷ್ಟು ವ್ಯಕ್ತಿಗಳು ಬರೆಯುವ ಶೈಲಿ ಬಳಸಿರುವ ನೀಚ ಶಬ್ದಗಳು ಅಸಂಬದ್ಧ ಊಹೆಗಳು ವೈಯಕ್ತಿಕ ನಿಂದೆಗಳ ಮೂಲಕ ಸತ್ಯಕ್ಕೆ ಬೆಲೆ ಕೊಡದೆ ತಮ್ಮ ಮನಸ್ಸಿನಲ್ಲಿರುವ ದ್ವೇಷ, ಅಸೂಯೆ, ಮಾತ್ಸರ್ಯಾದಿಗಳನ್ನು ಹೊರಹಾಕಿಕೊಂಡಿರುವರಲ್ಲದೆ, ಸ್ವೋತ್ತಮ ದ್ರೋಹಕ್ಕೂ ಕೈ ಹಾಕಿದಂತಿದೆ.

ಇದುವರೆಗೆ ನೀವು ಓದಿದ ವಿಷಯಗಳನ್ನು ಒತ್ತಾಯದಿಂದ ನಿಮ್ಮ ಮೇಲೆ ಹೇರುವ, ನನ್ನದೇ ಸರಿ ಎನ್ನುವ ಧೋರಣೆ ನನ್ನಲ್ಲಿಲ್ಲ. ಯಾವ ಮಠದ ಹಾಗೂ ವ್ಯಕ್ತಿಯ ಮೇಲಿನ ದುರಭಿಮಾನದಿಂದ ಬರೆದದ್ದಲ್ಲ. ಇರುವ ಆಧಾರಗಳನ್ನು ಸಜ್ಜನರ ಮುಂದೆ ಇಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಪ್ರಾಚೀನ ವಿದ್ವಾಂಸರು ಆಧುನಿಕರು ನನ್ನ ಮನೆತನದ ಹಿರಿಯರು ದಾಖಲಿಸಿದ ವಿಚಾರಗಳನ್ನೇ ಕ್ರೋಡೀಕರಿಸಿ ಈ ಕೃತಿ ತಯಾರಿಸಿದ್ದೇನೆ. ನನ್ನದೇನೂ ಸ್ವಂತದ್ದಿಲ್ಲ. ನನ್ನ ಈ ಕೃತಿಯಿಂದ ನನಗೆ "ದ್ವೇಷಿ" ಎಂಬ ಪಟ್ಟವನ್ನು ಕಟ್ಟುವ ಸಂಚನ್ನೂ ಕೆಲವರು ಮಾಡಬಹುದು. ಅದು ವಿಮರ್ಶಕಾರನಿಗೆ ಸಿಗುವ ಬಿರುದೆಂಬುದನ್ನೂ ನಾನರಿತಿದ್ದೇನೆ. ವಿಮರ್ಶೆಗೆ ವಯಸ್ಸಿನ ಪಾಂಡಿತ್ಯದ ಅಂತರ ಅಡ್ಡಿಯಾಗುವುದಿಲ್ಲ. ಹೀಗಾಗಿ ಕೆಲವು ಪ್ರಸಿದ್ಧ ವಿದ್ವಾಂಸರ ಆಕ್ಷೇಪಗಳನ್ನೂ ವಿಮರ್ಶಿಸಿದ್ದೇನೆ. ಆ ಎಲ್ಲ ವಿದ್ವಾಂಸರಲ್ಲಿರುವ ವಿದ್ಯೆಗೆ ಸದಾಚಾರಕ್ಕೆ ನನ್ನ ಶಿ.ಸಾ. ನಮನಗಳು ಸದಾ ಸಲ್ಲುತ್ತಿರುತ್ತವೆ. ಸಜ್ಜನರು ಗುಣಗ್ರಾಹಿಗಳು ಅಸಜ್ಜನರು ದೋಷಗ್ರಾಹಿಗಳು. ಈ ಹಿನ್ನೆಲೆಯಲ್ಲಿ ನಾನು ಯಾವಾಗಲೂ ಭದ್ರ. ನನ್ನ ಜವಾಬ್ದಾರಿ ಹಗುರ.

ಇಂತಹ ವಿಷಯಗಳ ಕಡೆಗೆ ಹೆಚ್ಚು ಗಮನ ಕೊಡಬಾರದೆಂಬ ನನ್ನ ಹಿತೈಷಿಗಳಾದ ಅನೇಕರ ಕಿವಿಮಾತುಗಳು ಇನ್ನೂ ನನ್ನ ಕಿವಿಯಲ್ಲಿವೆ. ಆದರೆ

ಒಂದು ವಿಷಯದಲ್ಲಿ ಪ್ರಾಚೀನ ವಿದ್ವಾಂಸರ ಸಮ್ಮತಿಯಿರುವಾಗ ಅನೇಕ ಪ್ರಮಾಣಗಳಿರುವಾಗ ಸಮಾಜದ ಎಲ್ಲ ಮಠೀಯರಿಗೂ ಮತ್ಯೈಕ್ಯವಿರುವಾಗ ಅನಾವಶ್ಯಕವಾಗಿ ವಿವಾದವೆಬ್ಬಿಸುವ ಆದರಿಂದ ಸಮಾಜದಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಟಿಸುವ ಪ್ರಯತ್ನ ನಡೆದಾಗ ಸುಮ್ಮನಿರುವುದೂ ಸಹ ಮುಂದಾಗುವ ದುಷ್ಪರಿಣಾಮಗಳಿಗೆ ಭಾಗಿದಾರನಾಗುವೆನೇನೋ ಎಂಬ ವಿಚಾರ ತಲೆಯಲ್ಲಿ ಬಂದದ್ದೇ ಈ ಕೃತಿಗೆ ಮೂಲಕಾರಣ. ಅನೇಕ ಮಹನೀಯರು ಆಶೀರ್ವದಿಸಿರುವುದೇ ದೈವಸಮ್ಮತಿ ಎಂಬ ಭಾವನೆ ಒಂದೆಡೆಯಾದರೆ ಶ್ರೀ. ಶ್ರೀಮಜ್ಜಯತೀರ್ಥರ ಸೇವೆ ಈ ರೀತಿ ಮಾಡಿದ್ದೇನೆಂಬ ಸಂತೋಷ ಮತ್ತೊಂದೆಡೆ.

ಈ ನನ್ನ ಹಿನ್ನುಡಿ ಮತ್ತೊಂದು ರೀತಿಯ ಗುರುಸೇವೆಗೆ ಸಮಾಜ ಸೇವೆಗೆ ಮುನ್ನುಡಿ ಆಗಲೆಂದು ಇದುವೇ ಗುರ್ವಂತರ್ಗತನಾದ ಕುಲದೇವತೆ ಶ್ರೀ ತುಳಜಾಭವಾನೀ ಸಮೇತ ಶ್ರೀ ಲಕ್ಷ್ಮೀವೆಂಕಟೇಶನ ಪೂಜೆ ಎಂದು ಸಮರ್ಪಿತ.

ತಮ್ಮ ಅನಿಸಿಕೆಗಳನ್ನು ಕಳುಹಿಸಬೇಕಾದ ವಿಳಾಸ

ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯ
ವಿಶ್ವಮಧ್ವ ಮಹಾಪರಿಷತ್, ಜಯತೀರ್ಥ ವಿದ್ಯಾಪೀಠ,
ಉತ್ತರಾದಿಮಠ, ಬಸವನಗುಡಿ, ಬೆಂಗಳೂರು-560 004

ಗ್ರಂಥ ಋಣ

1. ತೀರ್ಥಪ್ರಬಂಧ – ಶ್ರೀ ಶ್ರೀ ವಾದಿರಾಜತೀರ್ಥಪೂಜ್ಯ ಚರಣರು
2. ತೀರ್ಥಪ್ರಬಂಧದ ಕನ್ನಡ ಅನುವಾದಗಳು–
   – ಶ್ರೀ ಸಾಣೂರು ಭೀಮ ಭಟ್ಟರು
   – ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ
3. ಅಣುಜಯತೀರ್ಥವಿಜಯ – ಶ್ರೀ ವ್ಯಾಸತೀರ್ಥೀಯ
4. ಬೃಹತ್ ಜಯತೀರ್ಥ ವಿಜಯ – ಶ್ರೀ ಛಲಾರಿ ಸಂಕರ್ಷಣಾಚಾರ್ಯ
5. ಶ್ರೀ ಜಯತೀರ್ಥ ಚರಿತಾಮೃತಮ್
   – ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯ
6. ಶ್ರೀ ಜಯತೀರ್ಥ ವಿಜಯ – ಶ್ರೀ ರಘುದಾಂತ ತೀರ್ಥರು
7. ಶ್ರೀ ಜಯತೀರ್ಥದರ್ಶನ – ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ
8. ಶ್ರೀ ಜಯತೀರ್ಥ ವಿಜಯ – ಶ್ರೀ ಮಳಗಿ ಜಯತೀರ್ಥಾಚಾರ್ಯ
9. ಗುರುಚರಿತೆ – ಶ್ರೀ ಹೆಚ್.ಕೆ. ವೇದವ್ಯಾಸಾಚಾರ್ಯ
10. ಪದ್ಯಮಾಲಾ ಅನುವಾದ – ಶ್ರೀ ಪ್ರಭಂಜನಾಚಾರ್ಯ ವ್ಯಾಸನಕೆರೆ
11. ಶ್ರೀ ವಾದಿರಾಜರು – ಶ್ರೀ ಕೊರಟಿ ಶ್ರೀನಿವಾಸರಾವ್
12. ಶ್ರೀ ಜಯತೀರ್ಥರ ಮೂಲವೃಂದಾವನ – ಶ್ರೀ ಟಿ.ಕೆ. ವೇಣುಗೋಪಾಲ ದಾಸರು
13. ಶ್ರೀ ಜಯಮುನಿಗಳು – ಶ್ರೀ ಎಂ.ಆರ್. ಅನಂತಪದ್ಮನಾಭ ರಾವ್
14. ಶ್ರೀ ಜಗನ್ನಾಥ ದಾಸರು – ಡಾ|| ಕೆ.ಎಂ. ಕೃಷ್ಣರಾವ್
15. ಮಳಖೇಡದಲ್ಲಿ ಶ್ರೀ ಜಯತೀರ್ಥರು – ಶ್ರೀ ಕುಷ್ಟಗಿ ಕೃಷ್ಣಮೂರ್ತಿ
16. ಷಾಷ್ಠಿಕ ವಂಶ ಪ್ರದೀಪ – ಶ್ರೀ ರಾಣ್ಯಾ ರಾಜಾರಾವ್
17. ಮಳಖೇಡದ ಮಹಾಮಹಿಮರು
   – ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯ
18. ಶ್ರೀ ಗುರು ಅಜಯ ವಾದಿರಾಜ ವಿಜಯ – ಶ್ರೀ.....
19. ಯಂತ್ರೋದ್ಧಾರಕರು ಮತ್ತು ನವವೃಂದಾವನ – ಶ್ರೀ ಪಿ. ವಿಷ್ಣುತೀರ್ಥ
20. ಶ್ರೀ ಜಗನ್ನಾಥದಾಸರ ಕೃತಿಗಳು (ಪಂಡಿತರ ಆವೃತ್ತಿ) – ಮೈಸೂರು ವಿಶ್ವವಿದ್ಯಾಲಯ ಪ್ರಕಟಣೆ.
21. 'ಪರಿಮಳ' ಮಾಸ ಪತ್ರಿಕೆಗಳು

22. 'ಶ್ರೀ ಸುಧಾ' ಮಾಸ ಪತ್ರಿಕೆಗಳು


23. ಶ್ರೀ ರಾಯರ ಮಠ, ಶ್ರೀ ಸೋಸಲೆ ವ್ಯಾಸರಾಜಮಠ, ಶ್ರೀ ಕಣ್ವ ಮಠ, ಶ್ರೀ ಭುವನೇಶ್ವರಿ, ಸುರಪುರ ಹಾಗೂ ಚಿದಂಬರ ಪಂಚಾಂಗಗಳು ಮುಂತಾದವು.

24. The Philosophy of Madhvacharya
- Dr. B.N.K. Sharma

24. The History of Dvaita School of Vedanta
and it's Literature - Dr. B.N.K. Sharma

23. **तीर्थप्रबन्ध** - ಸಂಸ್ಕೃತವ್ಯಾಖ್ಯಾನಸಮೇತ
- ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ.

ಪರಿಶಿಷ್ಟ - 1




ತೀರ್ಥಪ್ರಬಂಧದಲ್ಲಿ ಶ್ರೀ ಶ್ರೀ ವಾದಿರಾಜ ಪ್ರಭೃತಿಗಳು ಒಂದು ಪ್ರಬಂಧದಿಂದ ಮತ್ತೊಂದು ಪ್ರಬಂಧವನ್ನು ಆರಂಭಿಸುವ ಹಾಗೂ ಕೆಲವೆಡೆ ಯಾತ್ರಾ ಕ್ರಮವನ್ನು ಅನುಸರಿಸಿರುವುದನ್ನು ಗಮನಿಸಿದಾಗ ಅವರು ಸಂದರ್ಶಿಸಿದ ಕ್ಷೇತ್ರಗಳ ವರ್ಣನೆಯನ್ನು ನಂತರ ಒಂದೆಡೆ ಕುಳಿತು ಸಂಗ್ರಹಿಸಿ ಯಾತ್ರೆಗೆ ಅನುಕೂಲವಾಗುವಂತೆ ಬೇರೆ ಬೇರೆ ಪ್ರಬಂಧಗಳಲ್ಲಿ ಅಳವಡಿಸಿರುವುದು ಸ್ಪಷ್ಟ.

ಪರಿಶಿಷ್ಟ - 2


ಶ್ರೀ ವ್ಯಾಸರಾಜಗುರುಸಾರ್ವಭೌಮರ ಸಾಕ್ಷಾತ್ ವಿದ್ಯಾಶಿಷ್ಯರಾದ ಶ್ರೀ ವಾದಿರಾಜರ ಆಪ್ತ ಸ್ನೇಹಿತರಾದ ಶ್ರೀ ಕೂಡ್ಲಿ ಆರ್ಯ ಅಕ್ಷೋಭ್ಯ ತೀರ್ಥ ಸಂಸ್ಥಾನಾಧಿಪತಿಗಳಾದ ಶ್ರೀ ನಾರಾಯಣತೀರ್ಥರ ಶ್ರೀ ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿದೆ ಎಂಬ ಒಕ್ಕಣಿಕೆ ಇರುವ ಕೈ ಬರಹದ ದಾಖಲೆ.

(ಕೃಪೆ - ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರ ಹಸ್ತಪ್ರತಿ ಸಂಗ್ರಹಾಲಯ)



ಮಳಖೇಡದಲ್ಲಿ ಶ್ರೀ ಟೀಕಾಚಾರ್ಯರ ಗುಹಾದಲ್ಲಿ ಪ್ರವೇಶಿಸಿ ಶ್ರೀ ಅಕ್ಷೋಭ್ಯತೀರ್ಥರ ಶ್ರೀ ಜಯತೀರ್ಥರ ಮೂಲ ವೃಂದಾವನಗಳ ಅಭಿಷೇಕ ಪೂಜಾ ನೈವೇದ್ಯಾದಿ.......

ಪರಿಶಿಷ್ಟ - 2



ಶ್ರೀ ವಾಸರಾಜಗುರೂಣಾಂಮಂತೇವಾಸಿ

ನಾರಾಯಣ ಯತಿಃ ಶಕೆ 1467

ಶ್ರೀ ವ್ಯಾಸರಾಜಗುರುಸಾರ್ವಭೌಮರ ಸಾಕ್ಷಾತ್ ವಿದ್ಯಾಶಿಷ್ಯರಾದ ಶ್ರೀ ವಾದಿರಾಜರ ಆಪ್ತ ಸ್ನೇಹಿತರಾದ ಶ್ರೀ ಕೂಡ್ಲಿ ಆರ್ಯ ಅಕ್ಷೋಭ್ಯ ತೀರ್ಥ ಸಂಸ್ಥಾನಾಧಿಪತಿಗಳಾದ ಶ್ರೀ ನಾರಾಯಣತೀರ್ಥರ ಶ್ರೀ ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿದೆ ಎಂಬ ಒಕ್ಕಣಿಕೆ ಇರುವ ಕೈ ಬರಹದ ದಾಖಲೆ.

(ಕೃಪೆ - ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರ ಹಸ್ತಪ್ರತಿ ಸಂಗ್ರಹಾಲಯ)

★ ಸತ್ಯವನ್ನು ಅತ್ಯಂತ ನಿಷ್ಠೆಯಿಂದ ಸಂಶೋಧಕನಲ್ಲಿರಬೇಕಾದ ಎಲ್ಲ ಗುಣಗಳನ್ನೂ ಅಳವಡಿಸಿಕೊಂಡು ಸಂಶೋಧಿಸಿದ್ದಾರೆ. ಅನೇಕ ಪ್ರಮಾಣಗಳನ್ನು ಹುಡುಕಿ ಈ ಕೃತಿಯನ್ನು ರಚಿಸಿದ್ದಾರೆ. ಸತ್ಯವನ್ನು ಜಗತ್ತಿನ ಮುಂದಿಟ್ಟು ತಪ್ಪು ತಿಳಿದು ಅನರ್ಥ ಹೊಂದುವದನ್ನು ತಪ್ಪಿಸಿದ್ದಾರೆ.

– ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

★ ತಿರುಪತಿ ಶ್ರೀನಿವಾಸ ಉಡುಪಿ ಕೃಷ್ಣನ ರಾಮಜನ್ಮಭೂಮಿಗಳ ಬಗ್ಗೆಯೂ ಇಂತಹ ವಿವಾದಗಳನ್ನು ಹಲವರು ಎಬ್ಬಿಸಿದ್ದಾರೆ... ಸಮಾಜದಲ್ಲಿ ಅನಾವಶ್ಯಕ ಗೊಂದಲಗಳಿಗೆ ಅವಕಾಶವಾಗುವುದರಿಂದ ಇಂತಹ ವಿವಾದಗಳನ್ನು ನಾವು ಬೆಂಬಲಿಸುವುದಿಲ್ಲ. ಮಳಖೇಡದಲ್ಲಿಯೇ ಶ್ರೀ ಜಯತೀರ್ಥರ ವೃಂದಾವನ ಇದೆ ಎಂಬ ಶ್ರೀಕಾಂತಾಚಾರ್ಯರ ಈ ಸಂಶೋಧನಾತ್ಮಕ ಕೃತಿಯನ್ನು ನಾವು ಸ್ವಾಗತಿಸುತ್ತೇವೆ.

– ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು

★ ಆಧುನಿಕ ವಾದವನ್ನು ಸಾಕಷ್ಟು ಚರ್ಚಿಸಿ ಈ ಹೊತ್ತಿಗೆಯಲ್ಲಿ ಹಲವು ಸವಾಲೊಡ್ಡಲಾಗಿದೆ.... ಇತ್ತೀಚಿನ 20–30 ವರ್ಷಗಳಲ್ಲಿ ಹುಟ್ಟಿ ಬಂದ ಈ ವಾದಗಳೆಲ್ಲ ಕೇವಲ ತಮ್ಮ ತಮ್ಮ ಮಠ ಪ್ರತಿಷ್ಠೆಗಳ ದುರಭಿಮಾನದಿಂದ ನಾನಾ ಪುರಾವೆಗಳನ್ನು ಸೃಷ್ಟಿಸಿಕೊಂಡು ಮೈವೆತ್ತಿ ಬಂದಿರುವುದೆಂದು ಹೇಳದೇ ಗತಿಯಿಲ್ಲ..... ಅನೇಕ ಹಿರಿಯರ ಜ್ಞಾನಿಗಳ ವಾಕ್ಯಗಳನ್ನು ದಾಖಲೆಗಳನ್ನು ಏಕತ್ರ ಸಂಗ್ರಹಿಸಿ ಆಧುನಿಕ ಕುಯುಕ್ತಿಗಳ ಬೊಂಬೆಯಾಟವನ್ನು ನಿರ್ಜೀವಗೊಳಿಸಿ ಮುಕ್ತ ಮಾರ್ಗದಲ್ಲಿ ಚರ್ಚಿಸಲು ಪ್ರಯತ್ನಿಸಿರುವ ಈ ಕೃತಿ ಪುಷ್ಟಿಗೊಳ್ಳಲೆಂಬುದೇ ನಮ್ಮ ಹಿರಿದಾಸೆ.

– ಬಾಳಗಾರು ಶ್ರೀನಿವಾಸಾಚಾರ್ಯ

★ ಒಬ್ಬ ಸಂಶೋಧಕನಲ್ಲಿರಬೇಕಾದ ಎಚ್ಚರಗಳು ಶ್ರೀ ಚಿಕ್ಕೇರೂರು ಮುಕ್ಕುಂದಿ ಶ್ರೀಕಾಂತಾಚಾರ್ಯರಲ್ಲಿ ಇದೆ ಎಂದೇ ಅವರ ಈ ಕೃತಿ ಗಮನಾರ್ಹವಾಗುತ್ತದೆ. ಇಂಥ ಎಚ್ಚರ ಇರದವರುಂಟು. ಅಂಥವರು ತಾವೂ ದಾರಿ ತಪ್ಪುತ್ತಾರೆ. ಜನರನ್ನೂ ದಾರಿ ತಪ್ಪಿಸುತ್ತಾರೆ. ಇಂಥವರ ಬಗೆಗೆ ನಾವು ಎಚ್ಚರವಾಗಿರಬೇಕು. ಸಂತೋಷದ ಸಂಗತಿ ಎಂದರೆ ಶ್ರೀಕಾಂತಾಚಾರ್ಯರು ಈ ವರ್ಗಕ್ಕೆ ಸೇರಿದವರಲ್ಲ. ಇಂಥವರು ಬೇಕು.

– ಬನ್ನಂಜೆ ಗೋವಿಂದಾಚಾರ್ಯ